ಮಹಾಲಿಂಗಲೀಲೆ : ಸಾಂಸ್ಕೃತಿಕ ಅಧ್ಯಯನ

(ಕನ್ನಡ ಸಾಹಿತ್ಯ ಅಧ್ಯಯನ ವಿಷಯದಲ್ಲಿ ಎಂ. ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ)

: ಸಂಶೋಧಕರು :

ಶ್ರೀ ಮಹಾಂತೇಶ ಎಸ್. ಪಟ್ಟಣಶೆಟ್ಟಿ

: ಮಾರ್ಗದರ್ಶಕರು :

ಡಾ. ಅಶೋಕ ನರೋಡೆ

ಕನ್ನಡ ಪ್ರಧಾಪಕರು, ಕಲಾ ಹಾಗೂ ವಾಣಿಜ್ಯ ಕಾಲೇಜು, ಮಹಾಲಿಂಗಪುರ

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ,

ಹಾರೂಗೇರಿ. ತಾ.ರಾಯಬಾಗ

: ಸಂಯೋಜನೆ :

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ - ೫೮೩ ೨೭೬.

೨೦೦೮

ಮಹಾಲಿಂಗಲೀಲೆ : ಸಾಂಸ್ಕೃತಿಕ ಅಧ್ಯಯನ

(ಕನ್ನಡ ಸಾಹಿತ್ಯ ಅಧ್ಯಯನ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ)

ಸಂಶೋಧಕರು :

ಶ್ರೀ ಮಹಾಂತೇಶ ಎಸ್. ಪಟ್ಟಣಶೆಟ್ಟಿ

ಮಾರ್ಗದರ್ಶಕರು :

ಡಾ. ಅಶೋಕ ನರೋಡೆ
ಕನ್ನಡ ಪ್ರಾಧ್ಯಾಪಕರು, ಕಲಾ ಹಾಗೂ ವಾಣಿಜ್ಯ ಕಾಲೇಜು, ಮಹಾಲಿಂಗಪುರ.

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ. ತಾ. ರಾಯಬಾಗ

ಸಂಯೋಜನೆ :

ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ – ೫೮೩ ೨೭೬.

೨೦೦೯

ದೃಢೀಕರಣ ಪತ್ರ

ಮಹಾಂತೇಶ ಎಸ್. ಪಟ್ಟಣಶೆಟ್ಟಿ ಇವರು "ಮಹಾಲಿಂಗಲೀಲೆ : ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ್ದಾರೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿಲ್ಲ. ಇದನ್ನು ಈ ಮೊದಲು ಇಡಿಯಾಗಿಯಾಗಲಿ ಅಥವಾ ಬಿಡಿ ಬಿಡಿಯಾಗಿ ಆಗಲಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ : 30-09-09.

[signature]

ಡಾ. ಅಶೋಕ ನರೋಡೆ
ಮಾರ್ಗದರ್ಶಕರು,
ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ, ಬೆಳಗಾವಿ.
(ಸಂಯೋಜಿತ ಕನ್ನಡ ವಿಶ್ವವಿದ್ಯಾಲಯ, ಹಂಪಿ.)

ಪ್ರಮಾಣ ಪತ್ರ

"ಮಹಾಲಿಂಗಲೀಲೆ : ಸಂಸ್ಕೃತಿಕ ಅಧ್ಯಯನ" ಎಂಬ ನಿಬಂಧವನ್ನು ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿರುವೆ. ಪ್ರಸ್ತುತ ನಿಬಂಧವು ಡಾ. ಅಶೋಕ ನರೋಡೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿಲ್ಲ. ಇದು ಈ ಮೊದಲು ಇಡಿಯಾಗಿಯಾಗಲಿ ಅಥವಾ ಬಿಡಿಬಿಡಿಯಾಗಿ ಆಗಲಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ : 30-09-09.

(ಮಹಾಂತೇಶ ಎಸ್. ಪಟ್ಟಣಶೆಟ್ಟಿ)
ಸಂಶೋಧನಾ ವಿದ್ಯಾರ್ಥಿ
ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ, ಬೆಳಗಾವಿ.

[illegible]

[illegible]

[illegible]

[illegible]

[illegible]

ಕೃತಜ್ಞತೆಗಳು

ಕನ್ನಡ ಸಾಹಿತ್ಯ ಅಧ್ಯಯನದಲ್ಲಿ ಆಸಕ್ತಿ ಹೊಂದಿರುವ ನಾನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರವಾದ ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದಲ್ಲಿ ಎಂ.ಫಿಲ್. ಪದವಿಯ ಅಧ್ಯಯನ ಕೈಗೊಂಡೆನು. ಕನ್ನಡ ಸಾಹಿತ್ಯದಲ್ಲಿ ಅಲಕ್ಷಿತಗೊಂಡಿರುವ ಹಲವಾರು ಸಾಹಿತಿಗಳಿದ್ದಾರೆ. ಅಂತಹವರು ಈ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಅನುಲಕ್ಷಿಸಿ ಬಸವಕವಿಯ "ಮಹಾಲಿಂಗಲೀಲೆ : ಸಂಸ್ಕೃತಿಕ ಅಧ್ಯಯನ" ಎಂಬ ವಿಷಯವನ್ನು ಅಧ್ಯಯನಕ್ಕೆ ಆಯ್ದುಕೊಂಡೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ ಸಂಯೋಜನೆಯಲ್ಲಿ ಹಾರೂಗೇರಿ ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ. ವ್ಹಿ. ಎಸ್. ಮಾಳಿ, ಡಾ. ಗುಡಸಿ, ಡಾ. ಚಿಲುಮಿ, ಪ್ರಾಚಾರ್ಯರಾದ ಕೊಕಟನೂರ ಮತ್ತು ಎಂ.ಫಿಲ್. ತರಗತಿಗಳಲ್ಲಿ ಮಾರ್ಗದರ್ಶನ ನೀಡಿರುವ ಡಾ. ಅಶೋಕ ನರೋಡೆ, ಡಾ. ಮರೇಗುದ್ದಿ ಮತ್ತು ಬಿ. ಆರ್. ದರೂರ ಶಿಕ್ಷಣ ಸಂಸ್ಥೆಯ ಸರ್ವರನ್ನು ಸ್ಮರಿಸುವುದು ಸಂತಸದ ಸಂಗತಿಯಾಗಿದೆ.

ಸಲಹೆ, ಸೂಚನೆ, ತಪ್ಪುಗಳನ್ನು ತಿದ್ದಿ ನಿಬಂಧಕ್ಕೆ ಮಾರ್ಗದರ್ಶನ ನೀಡಿದ ಡಾ. ಅಶೋಕ ನರೋಡೆ ಮತ್ತು ಅವರ ಕುಟುಂಬ ವರ್ಗಕ್ಕೂ ನನ್ನ ತುಂಬು ಹೃದಯದ ಧನ್ಯವಾದಗಳು.

ನನ್ನ ಅಧ್ಯಯನಕ್ಕೆ ಪ್ರೋತ್ಸಾಹ ನೀಡಿದ ನನ್ನ ತಂದೆ ಸಾತಪ್ಪ, ತಾಯಿ ಮಹಾದೇವಿ, ಪತ್ನಿ ನೀಲಾ, ಸಹೋದರರಾದ ದುಂಡಪ್ಪ, ಈಶ್ವರ ಇವರು ಸಹಾಯವನ್ನು ಮರೆಯುವಂತಿಲ್ಲ. ನನ್ನ ಅಧ್ಯಯನಕ್ಕೆ ಪೂರಕವಾದ ಗ್ರಂಥಗಳನ್ನು ಒದಗಿಸಿದ ಕಲಾ ಹಾಗೂ ವಾಣಿಜ್ಯ ಕಾಲೇಜ್, ಮಹಾಲಿಂಗಪುರದ ಗ್ರಂಥಾಲಯದ ಗ್ರಂಥಪಾಲಕರಾದ ಬಿದರಿ, ಸಹಾಯಕ ಜ್ಯಾಬಶೆಟ್ಟಿ, ಸರಕಾರಿ ಪ್ರಥಮ ದರ್ಜೆ ಕಾಲೇಜು ಮುಧೋಳದ ಪ್ರಾಚಾರ್ಯರಾದ ಶ್ರೀ ಡಿ. ಕೆ. ಮಾನೆ, ಗುರುಗಳಾದ ಅಣ್ಣಾಜಿ ಪಡತಾರೆ, ಮಹಾಲಿಂಗಪುರ ರಾಚಯ್ಯ ಅ. ಕಡಪಟ್ಟಿ ಅವರಿಗೆ ವಂದನೆಗಳು. ಆತ್ಮೀಯ ಮಿತ್ರರಾದ ಎಸ್. ಸನದಿ, ಬಸನಗೌಡರ, ಮಲ್ಲು ಲೋಕುರಿ ಮತ್ತು ಅಚ್ಚುಕಟ್ಟಾಗಿ ಅಕ್ಷರ ಸಂಯೋಜಿಸಿದ ರವಿ ಹುಣಶ್ಯಾಳ ಅವರಿಗೂ ಅನಂತ ಕೃತಜ್ಞತೆಗಳು.

ಮಹಾಂತೇಶ. ಎಸ್. ಪಟ್ಟಣಶೆಟ್ಟಿ

ಪರಿವಿಡಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ, ಸ್ವರೂಪ ಹಾಗೂ ವೈಧಾನಿಕತೆ

೧.೧. ಪ್ರವೇಶ

೧.೨ ಅಧ್ಯಯನದ ಉದ್ದೇಶ

೧.೩ ಅಧ್ಯಯನದ ಸ್ವರೂಪ

೧.೪ ಅಧ್ಯಯನದ ವೈಧಾನಿಕತೆ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಹಾಗೂ ವೈಧಾನಿಕತೆ

೧.೧. ಪ್ರವೇಶ

ಬಸವಕವಿಯ ಮಹಾಲಿಂಗಲೀಲೆಯಲ್ಲಿ ಬರುವ ಲೀಲೆಗಳು ಅಥವಾ ಪವಾಡಗಳು ಹಿಂದೆ ಜನಪ್ರಿಯತೆ ಮತ್ತು ಶ್ರೇಷ್ಠತೆಗಳೆರಡನ್ನು ಏಕಕಾಲದಲ್ಲಿ ಪಡೆದುಕೊಂಡ ಮಹತ್ತರ ಗ್ರಂಥವಾಗಿದೆ. ಮಹಾಲಿಂಗಲೀಲೆಯಲ್ಲಿಯ ಕಥೆ ಮತ್ತು ಪವಾಡಗಳ ಕುರಿತು ಸಂಪಾದನಾ ಕಾರ್ಯಗಳೂ ಕೂಡಾ ನಡೆದಿವೆ. ಒಂದು ಕೃತಿಯನ್ನು ವಿವಿಧ ಆಯಾಮಗಳಿಂದ ಅಧ್ಯಯನವನ್ನು ಕೈಗೊಳ್ಳುವುದು ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಒಳ್ಳೆಯ ಲಕ್ಷಣ ಹಾಗೆ ಅಧ್ಯಯನ ಮಾಡುವವರಿಗೆ ಬಸವ ಕವಿಯ ಮಹಾಲಿಂಗಲೀಲೆಯು ಬತ್ತದ ಬುಗ್ಗೆಯಾಗಿದೆ. ಚೈತನ್ಯದ ಚಿಲುಮೆಯಾಗಿದೆ.

ಕನ್ನಡ ಸಂಶೋಧನೆಯ ಕ್ಷೇತ್ರದಲ್ಲಿ ಇತ್ತೀಚೆಗೆ ಸಾಹಿತ್ಯ ಕೃತಿಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಎಲ್ಲೆಯಿಲ್ಲದ ಮಹತ್ವ ಬಂದೊದಗುತ್ತಿದೆ. ಕನ್ನಡ ಸಾಹಿತ್ಯದಲ್ಲಿ ಬೆರಳೆಣಿಕೆಯಷ್ಟು ಕೃತಿಗಳ ಸಾಂಸ್ಕೃತಿಕ ಅಧ್ಯಯನ ನಡೆದಿದೆ. ಮಹಾಲಿಂಗಲೀಲೆಯು ಇಂತಹ ಅಧ್ಯಯನಕ್ಕೆ ಅಳವಡಿಸುವ ಒಂದು ಪುಟ್ಟ ಪ್ರಯತ್ನವಾಗಿದೆ.

೧.೨ ಅಧ್ಯಯನದ ಉದ್ದೇಶ :

ಮಹಾಲಿಂಗಲೀಲೆಯನ್ನು ರಾಮದುರ್ಗದ ಸಂಗನಬಸವ ಮಾಹೇಶ್ವರರು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾರೆ. ಬಸವಕವಿಯು ಮಹಾಲಿಂಗಲೀಲೆಯನ್ನು ವಾರ್ಧಕ ಷಟ್ಪದಿಯಲ್ಲಿ ರಚಿಸಿದ್ದಾನೆ. ನಾನು ಎಂ.ಫಿಲ್. ಪ್ರಬಂಧಕ್ಕಾಗಿ ಮಹಾಲಿಂಗಲೀಲೆಯ ಸಾಂಸ್ಕೃತಿಕ ಅಧ್ಯಯನವನ್ನು ಎತ್ತಿಕೊಂಡಿರುವೆ.

ಮಹಾಲಿಂಗಲೀಲೆಯಲ್ಲಿ ಪವಾಡಗಳು ವಿಶಿಷ್ಟವಾದವುಗಳು. ಆದುದರಿಂದ ಮಹಾಲಿಂಗಲೀಲೆಯ ಸಂಪಾದನೆ ಅದರ ಮಹತ್ವದ ಕುರಿತು ಕೃತಿಗಳು ಮತ್ತು ಹಲವಾರು ಲೇಖನಗಳು ಪ್ರಕಟವಾಗಿವೆ. ಮಹಾಲಿಂಗಲೀಲೆಯ ಕುರಿತು ಸಮಗ್ರ ಸಾಂಸ್ಕೃತಿಕ ಅಧ್ಯಯನ ಈ ವರೆಗೂ ನಡೆದಿಲ್ಲ.

ಮಹಾಲಿಂಗಲೀಲೆಯಲ್ಲಿ ಮಹಾಲಿಂಗಮುನಿ ಎಂಬ ವ್ಯಕ್ತಿಯು ಅತ್ಯಂತ ಶ್ರೇಷ್ಠ ಪವಾಡ ಪುರುಷ. ಇಡೀ ಕೃತಿಯು ಮಹಾಲಿಂಗಮುನಿ, ಮಹಾಲಿಂಗೇಶ್ವರ ಯೋಗಿ ಎಂದು ಕರೆತಿಸಿಕೊಳ್ಳುವ ಮಹಾಪುರುಷನ ಪವಾಡಗಳ ಕಥಾನಕದಿಂದ ಪ್ರಸಿದ್ಧಿಯನ್ನು ಪಡೆದಿದೆ. ಮಹಾಲಿಂಗಮುನಿಯು ಭಕ್ತೋದ್ಧಾರಕ ಭಕ್ತರ ಕಷ್ಟಗಳನ್ನು ಕಳೆಯುವ ಕಲ್ಪವೃಕ್ಷ. ಭಕ್ತಿಯಿಂದ ಬೇಡಿಕೊಂಡ ವರಗಳನ್ನು ದಯಪಾಲಿಸುವ ಕಾಮಧೇನು.

ಮಹಾಲಿಂಗಮುನಿಯು ಮಹಾಲಿಂಗಪುರಕ್ಕೆ ಬಂದು ಮಹಾಲಿಂಗಪುರವನ್ನು ತನ್ನ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡದು ಸುತ್ತಮುತ್ತಲಿರುವ ಗ್ರಾಮಗಳ ಭಕ್ತರಿಗೆ ಅವರಿವರೆನ್ನದೇ ತಮ್ಮೆಡೆಗೆ ಬಂದ ಹತ್ತು ಹಲವಾರು ಭಕ್ತರನ್ನು ಉದ್ಧರಸಿದ್ದಾರೆ. ಆ ಸಂದರ್ಭದಲ್ಲಿ ಅವರು ಕೈಗೊಂಡ ಮಹಾನ್ ಕಾರ್ಯಗಳು ಪವಾಡಗಳೆನಿಸಿವೆ. ಜನಮನದಲ್ಲಿ ಅಚ್ಚಳಿಯದೆ ಉಳಿದಿವೆ. ಇಂದಿಗೂ ಅನೇಕ ಭಕ್ತರ ಇಷ್ಟಾರ್ಥಗಳನ್ನು ಪೂರೈಸುವ ಸಿದ್ಧಿಪುರುಷರಾಗಿ ಮೆರೆಯುತ್ತಿದ್ದಾರೆ. ಅಂದು ತನ್ನ ಅಸ್ಥಿತ್ವದ ಕುರುಹಾಗಿ ಶರಣೆ ಸಿದ್ದಾಯಿಗೆ ಇತ್ತ ಶ್ರೀಯವರ ಜಡೆಗಳು ಇಂದು ಮಾರುದ್ದ ಬೆಳೆದಿರುವುದು ಅವರ ಅನೇಕ ಪವಾಡಗಳಲ್ಲಿ ಒಂದಾಗಿದೆ.

ಇಲ್ಲಿ ಶಿವನು ಮಹಾಲಿಂಗಮುನಿಗೆ ಭೂಲೋಕವನ್ನು ಶಿವಲೋಕವನ್ನಾಗಿ ಪರಿವರ್ತಿಸಲು ಅಪ್ಪಣೆ ಮಾಡಿದ್ದು ಮುನಿನಾಥರು ರಾಮೇಶ್ವರ, ಶಿವಗಂಗೆ, ಉಳವಿ, ಗೋಕರ್ಣ, ಕಾಶಿ ಮುಂತಾದ ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸಿದ್ದು, ಸ್ವಪ್ನಗಳನ್ನು ಕಂಡಿರುವುದು, ವೀರಶೈವದ ಧರ್ಮದ ಉದ್ಧಾರ ಮತ್ತು ವೀರಶೈವ ಧರ್ಮದ ತತ್ವಗಳನ್ನು ಒಪ್ಪುವಂತೆ ತಿಳಿಸಿದ್ದು ಚೈತ್ರ ಶುದ್ಧ ಚತುರ್ದಶಿಯ ದಿನದ ಮಹತ್ವ, ಬಸವ ಮಂತ್ರ ಜಪದ ಮಹತ್ವ, ಹುಟ್ಟು ಕುರುಡಿಗೆ ದೃಷ್ಟಿದಾನ ಮಾಡಿದ್ದು, ಮಡಿದ ಮಗುವಿಗೆ ಪುನರ್ಜನ್ಮ, ವರಗಟ್ಟಿಯಾದ ನರಗಟ್ಟಿ, ನರಗಟ್ಟಿ ಮಹಾಲಿಂಗಪುರವಾದದ್ದು, ಬಸವತೀರ್ಥ ನಿರ್ಮಾಣ, ರಾಮಲಿಂಗ ಪ್ರತಿಷ್ಠಾಪನೆ, ಮೋದಪುರದಲ್ಲಿ ಮಹಾಲಿಂಗೇಶ್ವರರು, ಪಾದೋಕ ವಿಭೂತಿಗಳ ಮಹಿಮೆ, ಮಡಿದ ರಾಜನಿಗೆ ಪ್ರಾಣದಾನ, ವಿಷಭಾದೆ ನಿವಾರಣೆ, ವಿಭೂತಿಧಾರಣೆಯಿಂದ ಮರುಜನ್ಮ, ಯುದ್ಧದಲ್ಲಿ ಜಾರಿದ ಖಡ್ಗವು ಮರಳಿ ಕೈಗೆ ಬರುವುದು, ಅಮೃತಲಿಂಗದ ಪ್ರತಿಷ್ಠಾಪನೆ, ಶಾಂತಾಯಿಗೆ ಶ್ರೀಗಳ ರಕ್ಷಣೆ, ಕಳ್ಳನಿಗೂ ಕ್ಷಮಾದಾನ, ಅರವತ್ತರ ಬಂಜೆಗೆ ಮಗು ಹುಟ್ಟಿದ್ದು, ಸಿದ್ದಾಯಿಗೆ ಶ್ರೀಗಳ ಜಡೆ ನೀಡಿದ್ದು, ಗೋವಿಂದರಾಜನು ಮಲರೋಗದಿಂದ ಬಳಲುವಾಗ ರೋಗ ನಿವಾರಣೆ ಮಾಡಿದ್ದು, 'ಸ್ವರ್ಗಗಾಮಿನಿ'ಯೆಂಬ

ಕುದುರೆ ಮರಣ ಹೊಂದಿದಾಗ ಅರಸನ ಪ್ರಾರ್ಥನೆಗೆ ಕುದುರೆಯನ್ನು ಬದುಕಿಸಿದ್ದು, ಈ ರೀತಿಯಾಗಿ ಹದಿನೆಂಟು ಪವಾಡಗಳನ್ನು ಬಸವಕವಿಯು 'ಮಹಾಲಿಂಗಲೀಲೆ' ಗಳೆಂದು ಕರೆದು ಸಹಜ ಸುಂದರಾಗಿ ಭಕ್ತಿಯ ನೆಲೆಯಲ್ಲಿ ಚಿತ್ರಿಸಿರುವುದನ್ನು ಕಾಣುತ್ತೇವೆ. ಒಟ್ಟಿನಲ್ಲಿ ಮನುಷ್ಯ ಜೀವನದ ಸಂಕೇತವಾಗಿರುವ ಭಕ್ತಿ, ತಾಳ್ಮೆ, ಪ್ರಾಮಾಣಿಕತೆ, ನಂಬಿಕೆ, ದೈವಗಳ ಖಣಿಯಾಗಿರುವ 'ಮಹಾಲಿಂಗಲೀಲೆ' ಸಮಗ್ರವಾಗಿ ಸಾಂಸ್ಕೃತಿಕ ಅಧ್ಯಯನ ಕೈಗೆತ್ತಿಕೊಳ್ಳಲಾಗಿದೆ.

೧.೩ ಅಧ್ಯಯನ ಸ್ವರೂಪ :

ಈ ಪ್ರಬಂಧದಲ್ಲಿ ಒಟ್ಟು ಎಂಟು ಪ್ರಮುಖ ಅಧ್ಯಾಯಗಳಿದ್ದು, ಅವಶ್ಯಕವೆನಿಸಿದಲ್ಲಿ ಉಪ-ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ. ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ಧೇಶ, ಸ್ವರೂಪ ಮತ್ತು ವೈಧಾನಿಕತೆಯ ಕುರಿತು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ 'ಕವಿ-ಕಾವ್ಯ ವಿಚಾರ'ದ ಸಂಕ್ಷೀಪ್ತ ವಿವರವಿದೆ. ಇಲ್ಲಿ ಕವಿಯ ಕಾಲ, ಪ್ರಾಮಾಣಿಕತೆ, ಆತನ ಕವಿತಾಸಾಮರ್ಥ್ಯದ ಕುರಿತು ವಿವರಿಸಲಾಗಿದೆ. ಮೂರನೆಯ ಅಧ್ಯಾಯ ಸಾಂಸ್ಕೃತಿಕ ಅಂಶಗಳಿಗೆ ಸಂಬಂಧಿಸಿದ್ದಾಗಿದೆ. ಇದರಲ್ಲಿ ಸಂಸ್ಕೃತಿಯ ವ್ಯಾಖ್ಯಾನಗಳು, ಸಂಸ್ಕೃತಿ ಮತ್ತು ಧರ್ಮ, ಸಂಸ್ಕೃತಿ ಮತ್ತು ಭಾಷೆ, ಸಂಸ್ಕೃತಿ ಮತ್ತು ಸಮಾಜ, ಸಂಸ್ಕೃತಿ ಮತ್ತು ಸಂಸ್ಕಾರ, ಸಂಸ್ಕೃತಿ ಮತ್ತು ಸೌಂದರ್ಯ, ಸಂಸ್ಕೃತಿ ಮತ್ತು ಸಂಸ್ಕೃತೀಕರಣ, ಸಂಸ್ಕೃತಿ : ಸಮೂಹ ಸಿದ್ಧಾಂತ ಇವುಗಳ ಕುರಿತು ಸಂಕ್ಷೀಪ್ತವಾಗಿ ನಿರೂಪಿಸಲಾಗಿದೆ.

ನಾಲ್ಕನೆಯ ಅಧ್ಯಾಯ ಧಾರ್ಮಿಕ ಅಂಶಗಳ ಅಧ್ಯಯನಕ್ಕೆ ಸಂಬಂಧಿಸಿದ್ದಾಗಿದೆ. ಇದರಲ್ಲಿ ಚನ್ನವೀರೇಶ, ಸ್ತುತಿ, ವೀರಶೈವ ಕವಿಗಳು, ಗುರು-ಶಿಷ್ಯ ಸಂಬಂಧ, ಪೂಜಾರಿಗಳು, ಭಸ್ಮ ಧಾರಣೆಯ ಮಹತ್ವ, ಒಡ್ಡೋಲಗ, ವೀರಶೈವ ಧರ್ಮದ ಉದ್ಧಾರ, ಅಷ್ಠಾವರಣಗಳ ಮಹತ್ವ, ವಿಧಿ, ಪಂಚಾಕ್ಷರಿ ಮಂತ್ರದ ಮಹಿಮೆ, ರುದ್ರಾಕ್ಷಿಯ ಮಹಿಮೆ, ಧಾರ್ಮಿಕ ಪವಾಡಗಳು ಮೊದಲಾದವುಗಳ ಹಿನ್ನೆಲೆಯಲ್ಲಿ ಧಾರ್ಮಿಕ ಸಂಸ್ಕೃತಿಯನ್ನು ಗುರ್ತಿಸಲಾಗಿದೆ.

ಐದನೆಯ ಅಧ್ಯಾಯವು ಸಾಮಾಜಿಕ ಸಂಸ್ಕೃತಿಯನ್ನು ಬಿಂಬಿಸುವ ಸಮಾಜದ ಜಾತಿಗಳು, ಸಾಮಾಜಿಕ ವ್ಯಕ್ತಿತ್ವ, ದಂಪತಿಗಳು, ಕರ್ನಾಟಕ ವರ್ಣನೆ, ಸ್ತ್ರೀಯರ ಗುಣ

ಹಾಗೂ ಸೌಂದರ್ಯ, ರೋಗಗಳು, ವೈದವ್ಯ, ಮೈಲಿಗೆಯ ಕುರಿತು, ಆಹಾರ ದಾನ್ಯಗಳು, ತಿಂಡಿ–ತಿನಿಸುಗಳು, ಹಣ್ಣು–ಹಂಪಲಗಳು, ಪ್ರಾಣಿ–ಪಕ್ಷಿಗಳು, ಪುಷ್ಪಗಳು, ಆಯುಧಗಳು, ಉಡುಗೆ–ತೊಡುಗೆ ಮುಂತಾದವುಗಳ ಕುರಿತು ಬಸವಕವಿ ಕಂಡುಕೊಂಡ ಜನ ಜೀವನದ ಚಿತ್ರಣಕೊಡಲು ಪ್ರಯತ್ನಿಸಲಾಗಿದೆ. ಅವನ ಸಾಮಾಜಿಕ ಪ್ರಜ್ಞೆಯಿಂದಾಗಿ ಪ್ರಕಟಗೊಂಡ ಅಂದಿನ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಗುರ್ತಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ರಾಜಕೀಯ ಅಂಶಗಳನ್ನು ವಿವರಿಸಲಾಗಿದೆ. ರಾಜ–ರಾಣಿಯರು, ರಾಜನ ಗುಣ, ರಾಜನ ಭಕ್ತಿಯ ಮಹತ್ವ, ರಾಜನ ವಚನ, ಶಾಸನದ ರಚನೆ, ದಾನ ಪತ್ರದ ರಚನೆ, ರಣಭೇರಿ, ಚತುರಂಗ ಬಲ ಆಯುಧಗಳು, ಯುದ್ಧಕಲೆಗೆ ಸಂಬಂಧಿಸಿದ ಮಹತ್ವದ ಅಂಶಗಳನ್ನು ದಾಖಲಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಜಾನಪದೀಯ ಅಂಶಗಳ ಕುರಿತು ವಿವರಿಸಲಾಗಿದೆ. ವಾದ್ಯಗಳು, ಮುತ್ತಿನಾರತಿ, ಸ್ವಪ್ನಗಳು, ಆಹಾರ ಪದಾರ್ಥಗಳು, ಪಟ್ಟಣದ ಶೃಂಗಾರ, ಬೈಗುಳಗಳು, ಅಳತೆ : ಮಾನದಂಡಗಳು, ಜಾನಪದ ಸಂಪ್ರದಾಯ, ಜಾನಪದ ದೈವ, ಜಾನಪದ ಧರ್ಮದ ಕುರಿತು ಸ್ಥೂಲವಾಗಿ ವಿವೇಚಿಸಲಾಗಿದೆ.

ಸಮಾರೋಪ ಈ ಪ್ರಬಂಧದ ಕೊನೆಯ ಅಧ್ಯಾಯ. ಬಸವಕವಿಯ ಸಾಂಸ್ಕೃತಿಕ ಕೊಡುಗೆಗಳನ್ನು ಸ್ಪಷ್ಟಪಡಿಸಲಾಗಿದೆ. ಅಧ್ಯಯನದಲ್ಲಿ ಕಂಡುಕೊಂಡ ಅಂಶವನ್ನು ಇಲ್ಲಿ ಸಾರರೂಪದಲ್ಲಿ ಕೊಡಲಾಗಿದೆ.

ಕೊನೆಯಲ್ಲಿ ಅನುಬಂಧಗಳನ್ನು ನೀಡಲಾಗಿದೆ.

೧.೪ ಅಧ್ಯಯನದ ವೈಧಾನಿಕತೆ :

ಈ ಅಧ್ಯಯನವು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೆಯ ಅಧ್ಯಾಯ ಅಧ್ಯಯನದ ಉದ್ದೇಶ, ಸ್ವರೂಪ ಹಾಗೂ ವೈಧಾನಿಕತೆ ಜೊತೆಗೆ ಅಧ್ಯಯನದ ಅಗತ್ಯವನ್ನೂ ಪ್ರತಿಪಾಧಿಸುವುದು.

ಎರಡನೆಯ ಅಧ್ಯಾಯದಲ್ಲಿ ಕವಿ–ಕಾವ್ಯ ವಿಚಾರಗಳ ಮೌಲ್ಯ ಮಾಪನ ಕೈಗೊಳ್ಳಲಾಗಿದೆ. ವಿವಿಧ ಸಾಂಸ್ಕೃತಿಕ ಅಂಶಗಳು ಮುಂದಿನ ನಾಲ್ಕು ಅಧ್ಯಾಯಗಳಿಗೆ ಅಧ್ಯಯನ ವಸ್ತುಗಳನ್ನು ಒದಗಿಸುತ್ತವೆ. ಈ ಅಧ್ಯಾಯದಲ್ಲಿ ಸಾಂಸ್ಕೃತಿಕ ಅಂಶಗಳು,

ಧಾರ್ಮಿಕ ಅಂಶಗಳು, ಜಾನಪದೀಯ ಅಂಶಗಳ ಕುರಿತು ವಿವೇಚಿಸಲಾಗಿದೆ. ಇದು ಸಾಂಸ್ಕೃತಿಕ ಅಂಶಗಳನ್ನು ತೆರೆದಿಡುತ್ತದೆ. ಇಲ್ಲಿ ಬಸವಕವಿಯ ಸಾಂಸ್ಕೃತಿಕ ಚಿಂತನೆಯನ್ನು ಪ್ರಚುರಪಡಿಸಲಾಗಿದೆ. ಈ ಅಧ್ಯಯನದ ಕೊನೆಗೆ ಸಮಾರೋಪವು ಪ್ರಸ್ತುತ ಸಂಪ್ರಬಂಧದ ಫಲಿತಗಳನ್ನು ಸಂಕ್ಷಿಪ್ತವಾಗಿ ಕ್ರೋಢೀಕರಿಸಲಾಗಿದೆ.

ಆಕರ ಸಾಮಗ್ರಿ :

೧) ಏಕಲವ್ಯನ ಪಾತ್ರ ಒಂದು ಅಧ್ಯಯನ, ಡಾ. ಅಶೋಕ ನರೋಡೆ, ಪುಟ ೬.೨.

೨) ವಿರಾಟಪರ್ವ ಸಾಂಸ್ಕೃತಿಕ ನೆಲೆ, ಡಾ. ಧನಂತ ಹಾಜವ್ವಗೋಳ, ಪುಟ ೨.೩.

ಅಧ್ಯಾಯ – ೨

ಕವಿ–ಕಾವ್ಯ ವಿಚಾರ

೨.೧ ಪ್ರವೇಶ

೨.೨ ವಿದ್ವಾಂಶರ ನೆನಹು

೨.೩ ಕವಿಯ ಕಾಲ

೨.೪ ಕವಿಯ ಪ್ರಮಾಣಿಕತನ

೨.೫ ಕವಿಯ ಧೈರ್ಯ

೨.೬ ಸಮಾರೋಪ

ಅಧ್ಯಾಯ – ೨

ಕವಿ–ಕಾವ್ಯ ವಿಚಾರ

೨.೧ ಪ್ರವೇಶ :

ಕ್ರಿ.ಶ. ೧೮ನೇ ಶತಮಾನದಲ್ಲಿ ಜನರಲ್ಲಿರುವ ಅಧಕಾರವನ್ನು ತೊಳೆದು ಧರ್ಮಜಾಗೃತಿಯನ್ನು ಮಾಡಿದ ಶ್ರೀ ಮಹಾಲಿಂಗೇಶ್ವರರ ಕುರಿತು ಬಸವಕವಿಯು 'ಮಹಾಲಿಂಗಲೀಲೆ' ಎಂಬ ಕೃತಿಯನ್ನು ರಚಿಸಿದನು. ಮಹಾಲಿಂಗಪುರದ ಆದಿ ದೈವ, ಸಂಕಷ್ಟ ನಿವಾರಕ, ಧರ್ಮೋದ್ಧಾರಕ, ಭಕ್ತರ ಕಲ್ಪವೃಕ್ಷವೆಂದು ಪ್ರಸಿದ್ಧಿಯನ್ನು ಪಡೆದ ಶ್ರೀ ಮಹಾಲಿಂಗೇಶ್ವರರ ಕುರಿತು, ತನಗೆ ತಗುಲಿದ ಮಾರುತೋಪದ್ರವರೋಗ (ತೊನ್ನುರೋಗ) ನಿವಾರಣೆ ಮಾಡಿಕೊಳ್ಳಲು 'ಮಹಾಲಿಂಗಲೀಲೆ' ಎಂಬ ಕೃತಿಯನ್ನು ಬರೆದನು.

ಬಸವ ಕವಿಯು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ (ಮೊದಲು ಗೋಕಾಕ) ತೊಂಡಿಕಟ್ಟಿ ಗ್ರಾಮದವನು. ತೊಂಡಿಕಟ್ಟಿಯ ಗ್ರಾಮಾಧಿಪತಿಯಾದ ರಾಮಲಿಂಗಪ್ಪನವರ ಪವಿತ್ರ ವಂಶದಲ್ಲಿ ಜನಿಸಿರುವುದಾಗಿ ಸ್ವತಃ ಕವಿಯೇ ಹೇಳಿಕೊಂಡಿದ್ದಾನೆ. ಅಸಮಕರ್ನಾಟ ಶಾಸ್ತ್ರ ವಿಚಾರಸಂಪನ್ನನೂ, ರಸಿಕವಂತನನೂ, ವೇದಾಂತ ಕೋವಿದನೂ, ವೃಷಭ ಗೋತ್ರಜನೂ ಆದ ಶಿವಬಸವೇಶನು ಬಸವ ಕವಿಯ ತಂದೆ. ಈತನ ಕುಲಗುರುಗಳು ಮುಧೋಳ ಜೀರಿಗೆಮಠದ ಮದ್ದಾನಿ ಮಡಿವಾಳತಂದೆಗಳು. ಕರ್ನಾಟಕ ಗೀರ್ವಾಣ ಶಾಸ್ತ್ರಗಳ ಸಾರಸರ್ವಸ್ವವನ್ನು ಅರಿತ ಸರ್ವಜ್ಞರಾದ ಸೋಲೂರು ಶ್ರೀ ಚನ್ನವೀರೇಂದ್ರ ವಿರಕ್ತರು ಬಸವಕವಿಯ ವಿದ್ಯಾಗುರುಗಳಾಗಿದ್ದರು. ಇವರಿಬ್ಬರ ಕೃಪಾಶಿರ್ವಾದದಿಂದ ಕಾವ್ಯವನ್ನು ರಚಿಸಿರುವುದಾಗಿ ಹೇಳಿದ್ದಾನೆ.

ಬಸವ ಕವಿಯು ರಚಿಸಿದ 'ಮಹಾಲಿಂಗಲೀಲೆ' ವಾರ್ಧಕ ಷಟ್ಪದಿಯಲ್ಲಿ ರಚನೆಗೊಂಡಿದೆ. ಈ ಕೃತಿಯನ್ನು ಸಂಪಾದಿಸಿದವರು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ॥ ಆರ್. ಸಿ. ಹಿರೇಮಠ ಅವರು. ಸೋಲೂರು ಶ್ರೀ ಚನ್ನವೀರೇಶನ ಸ್ತುತಿಯೊಂದಿಗೆ ಪ್ರಾರಂಭವಾಗುವ ಈ ಕೃತಿಯಲ್ಲಿ ಕವಿ ಶಿವ–ಪಾರ್ವತಿ ಮುಂತಾದವರನ್ನು ನೆನೆಯುತ್ತಾನೆ. ಜೊತೆಗೆ 'ರೋಗಿ ಪರಮಾನ್ನಮಂ, ಗೋಗೆದಿವಸೇಂದ್ರನಂ, ಸತ್ಕಾವ್ಯದರ್ಥಗಳ ಪೊಗಮಂ ಬಲ್ಲರೇನ ಪ್ರಬುಧ ಮಾನಸರ್' ಎಂದು ಕವಿಗಳನ್ನು ನಿಂದಿಸುತ್ತಾನೆ.

[illegible]

[illegible]

[illegible]

[illegible]

“ಮಾರುತೋಪದ್ರವದ ರೋಗವದು ಬಿಡದೆನ್ನ
ಘೋರಿಸುತ್ತಿರೆ ಕಂಡು ಕಾರುಣ್ಯದೇಳ್ಗೆಯಿಂ
ಜೀರಕಾಮೃತಮಠಾದೀಶ ಗುರಕುಲಚಂದ್ರ ಶಿವರುದ್ರಮಾಹೇಶ್ವರಂ
ಮಾರಹರ ಮಹಲಿಂಗಲೀಲೆಯಂ ನಿರ್ಮಿಸು ನಿ
ವಾರಿಸುವದೆಂದೆನುತ ಸೂಚಿಸಲು ಭಕ್ತಿಯಿಂ
ಪ್ರಾರಂಭಿಸಿದೆನಿಂದು ಪರಮಭಕ್ತೋಮರು ಲಾಲಿಪುದು ಸಂತಸದೊಳು”[೧]

ಬಸವಕವಿಯು ಮಾರುತರೋಗಕ್ಕೆ ತುತ್ತಾಗಿ ಪರಿತಪಿಸುತ್ತಿರುವಾಗ ಮುಧೋಳ ಜೀರಕಾಮೃತ ಮಠಾಧೀಶರಾದ ಶಿವರುದ್ರ ಮಹೇಶ್ವರರು ಮಹಾಲಿಂಗಲೀಲೆಯನ್ನು ರಚಿಸಿದರೆ ರೋಗ ನಿವಾರಣೆಯಾಗುವುದೆಂದು ಸೂಚಿಸಿದರಂತೆ. ಶ್ರೀಗಳ ಸೂಚನೆಯಂತೆ ‘ಮಹಾಲಿಂಗಲೀಲೆ’ ಪುರಾಣ ಕಾವ್ಯ ರಚಿಸಿದಾಗ ಮಾರುತರೋಗ ಪರಿಹಾರವಾಯಿತಂತೆ.

“ಆದಿಯಲಿ ಮುಗ್ಧಸಂಗೋತ್ತಮನ ಮಹಿಮೆಯಂ
ಸಾದರದಿ ನಿರ್ಮಿಸಿದ ಬಳಿಕ ಮಹಾಲಿಂಗ ಜಗ
ದಾದಿ ಮುನಿಚಂದ್ರವನ ಲೀಲೆಯಂ ವಿರಚಿಸಿದ ಮೇಲಿನ್ನು ಭೂತಳದೊಳು
ನಾದಮಯ ದುರದುಂಡಿ ಜಂಗಮವಿಲಾಸಮಂ
ಭೇದವಿಲ್ಲದೆ ಪೇಳ್ವೆನು”[೨]

ಎಂಬ ಪದ್ಯದಿಂದ ಈತನು

೧. ಮಹಲಿಂಗಲೀಲೆ

೨. ಜಂಗಮಲೀಲೆ

೩. ಮುಗ್ಧಸಂಗಮಲೀಲೆ

ಎಂಬ ಕಾವ್ಯಗಳನ್ನು ರಚಿಸಿರುವುದು ಕಂಡುಬರುತ್ತದೆ. ಬಸವಕವಿಯು ವೀರಶೈವ ಕವಿ ಎಂಬುದಕ್ಕೆ ಆಂತರಿಕ ಬಾಹ್ಯ ಪ್ರಮಾಣಗಳು ವಿಫುಲವಾಗಿವೆ. ಈ ಕವಿಯ ವಂಶಪರಂಪರೆ, ಗುರುಪರಂಪರೆ, ಆತನು ರಚಿಸಿದ ಕಾವ್ಯಗಳ ವಸ್ತು ಅವುಗಳಲ್ಲಿ ಬಂದಿರುವ ಅಷ್ಟಾವರಣ, ಪಂಚಾಚಾರಗಳ ವಿವರಣೆ ಮುಖ್ಯವಾಗಿವೆ.

೨.೨ ವಿದ್ವಾಂಸರ ನೆನಹು :

ಕಾವ್ಯದ ಆರಂಭದಲ್ಲಿ ಶಿವ, ಪಾರ್ವತಿ, ವಿಘ್ನೇಶ, ಷಣ್ಮುಖ, ವೀರೇಶ್ವರ ಮೊದಲಾದ ದೇವತೆಗಳನ್ನು ಬಸವೇಶ್ವರ, ಚೆನ್ನಬಸವೇಶ್ವರ, ಪ್ರಭುದೇವ, ಭೃಂಗೀಶ, ಮುಂತಾದವರನ್ನು ಗಂಭೀರವಾದ ಶೈಲಿಯಲ್ಲಿ ಮನದುಂಬಿ ಸ್ತುತಿಸಿದ್ದಾನೆ. ಶಿವಭಕ್ತರಾದ ಕಾಳಿದಾಸ, ಭೋಜ, ಬಾಣ, ಮಯೂರ, ಕೇಶಿರಾಜ, ಮಲಯರಾಜರನ್ನು ವೀರಶೈವರಾದ ಪಂಡಿತಾರಾಧ್ಯ, ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಪಾಲ್ಕುರಿಕೆ ಸೋಮನಾಥ, ಭೀಮಕವಿ, ಮಲ್ಲಣಾರ್ಯ, ಷಡಕ್ಷರದೇವರನ್ನೂ ಭಕ್ತಿಯಿಂದ ನೆನೆಸಿಕೊಂಡು ಅವರನ್ನನುಸರಿಸಿ ತನ್ನ ಕಾವ್ಯಗಳನ್ನು ರಚಿಸಿರುವನು.

ಕವಿಯ ಕಾವ್ಯದ ಶೈಲಿ ಸುಂದರವಾಗಿದೆ. ಬಂಧುರವಾಗಿದೆ. ಪದಪ್ರಯೋಗ ನಿರರ್ಗಳವಾಗಿದೆ. ಶ್ರೀ ವಿರೂಪಾಕ್ಷ ಪಂಡಿತ ಮತ್ತು ಲಕ್ಷ್ಮೀಶರಂತೆ ಬಸವಕವಿಯ ಕೈಯಲ್ಲಿ ಷಟ್ಪದಿಯು ನಿಜವಾಗಿ ಷಟ್ಪದಿಯಾಗಿ ಝೇಂಕಾರಗೈದಿದೆ. ಈ ಕವಿ ಹತ್ತೊಂಬತ್ತನೆಯ ಶತಮಾನದಲ್ಲಿದ್ದರೂ ಪುರಾತನ ಕಾವ್ಯ ಪರಂಪರೆಯ ಬಿಗುವನ್ನು ತತ್ವ, ಸಾಮರ್ಥ್ಯ, ಗಾಂಭಿರ್ಯವನ್ನು ಕಾಣುತ್ತೇವೆ. ಗೋಕಾಕದ ಸುತ್ತಮುತ್ತ ಮೊದಲು ಮರಾಠಿಯ ಪ್ರಭಾವವಿರುವುದರಿಂದ ಕವಿಗೆ ಸಂಸ್ಕೃತ, ಕನ್ನಡ, ಮರಾಠಿ ಮೂರು ಭಾಷೆಗಳಲ್ಲಿ ಪ್ರಭುತ್ವವಿರುವುದನ್ನು ಕಾಣುತ್ತೇವೆ. ಮಾರ್ಗದೇಶಿಗಳ ಹದವಾದ ಬೆರಕೆಯಿಂದ ಸಮನ್ವಯವಾದ ಶೈಲಿ ಆಕರ್ಷಕವಾಗಿದೆ.

ಕವಿಯು ಕೇವಲ ಒಂದು ಪುರಾಣವನ್ನು ಬರೆಯುಬೇಕೆಂಬ ಉದ್ದೇಶವನ್ನಿಟ್ಟುಕೊಳ್ಳದೆ ರಸಿಕರ ಮನವನ್ನು ತಣಿಸಬೇಕು ಎಂಬ ಧ್ಯೇಯುವನ್ನಿಟ್ಟುಕೊಂಡಿರುವುದು ಗಮನಾರ್ಹವಾಗಿದೆ. ಇದರ ಫಲವಾಗಿಯೇ ಮಹಾಲಿಂಗಲೀಲೆ ಸತ್ಕಾವ್ಯವಾಗಿದೆ.

ಕವಿಯು ಜನಪದೀಯ ಅಂಶಗಳು, ಅಲಂಕಾರಗಳ ಪ್ರಯೋಗಗಳು ವಿಫುಲಗೊಂಡಿವೆ. ಹದಿನೆಂಟು ಲೀಲೆಗಳ ಕಾವ್ಯಮಯ ವರ್ಣನೆಯೇ ಮಹಾಲಿಂಗಲೀಲೆ ಎಂದು ಮೇಲ್ನೋಟಕ್ಕೆ ಕಂಡರೂ ಕರ್ನಾಟಕದ ವರ್ಣನೆ, ಸೂರ್ಯೋದಯದ ವರ್ಣನೆ, ರಾತ್ರಿಯ ವರ್ಣನೆ, ಯುದ್ಧದ ವರ್ಣನೆ, ನಾರಿಮಣಿಗಳ ವರ್ಣನೆ ಮುಂತಾದ ವರ್ಣನೆಗಳು ಸಾಂದರ್ಭಿಕವಾಗಿ ಬಂದಿವೆ.

ಮಹಾಲಿಂಗಲೀಲೆಯು ನೂರಾರು ಕಥೆ, ಉಪಕಥೆಗಳ ಗೊಂಚಲವಾಗಿದೆ. ಮಹಾಲಿಂಗೇಶ್ವರರ ಕಥೆ ಮತ್ತು ಆತನ ಹದಿನೆಂಟು ಪವಾಡಗಳು ಈ ಕಾವ್ಯದಲ್ಲಿ ಮೂಡಿಬಂದಿದ್ದರೂ ಮನಿವರ ಈ ಅಷ್ಟಾದಶ ಲೀಲೆಗಳನ್ನು ವರ್ಣಿಸುವಾಗ ಸಮಾನ ಅಂಶಗಳನ್ನೊಳಗೊಂಡ ಅನೇಕ ಉಪಕಥೆಗಳನ್ನು ಪೋಣಿಸಿರುವುದು ಗಮನಾರ್ಹವಾಗಿದೆ.

ಮೂಲಕಥೆ ಲೀಲೆಗಳ ಕಥೆ ಎಲ್ಲವನ್ನು ಕ್ರೋಢೀಕರಿಸಿದರೆ ಮಹಾಲಿಂಗಲೀಲೆಯಲ್ಲಿ ಸುಮಾರು ೧೩೨ ಕಥೆಗಳು ಬಂದಿವೆ. ಇಲ್ಲಿ ೧೧೨ ರಷ್ಟು ಉಪಕಥೆಗಳು ಬಂದಿವೆಯಾದರೂ ಬಸವಕವಿಯು ಅವನ್ನು ಕಾವ್ಯದ ಕಥಾವಸ್ತುವಿನಲ್ಲಿ ಬಹಳ ಜಾಣ್ಮೆಯಿಂದ, ಪ್ರಜ್ಞಾಪೂರ್ವಕವಾಗಿ ಸೇರ್ಪಡೆಗೊಳಿಸಿರುವನು. ಮಹಾಲಿಂಗಲೀಲೆಯಲ್ಲಿ ಯಾವ ಕಥೆಯೂ ಅಪ್ರಸ್ತುತವೆನಿಸುವುದಿಲ್ಲ. ಇಲ್ಲಿ ಕಥೆ ಹೇಳುವ ಶೈಲಿ ಆಕರ್ಷಕವಾಗಿದೆ. ಕೇಳುಗರಲ್ಲಿ ಆಸಕ್ತಿಯುಂಟುಮಾಡಿ ಕುತೂಹಲವನ್ನು ಕೆರಳಿಸಿ ಕಥೆ ಹೇಳುವ ಶೈಲಿ ಬಸವಕವಿಗೆ ಸಿದ್ಧಿಸಿದೆ.

ಬಸವಕವಿಯ ವ್ಯಕ್ತಿತ್ವವನ್ನು ಸ್ಫುಟಗೊಳಿಸುವ ಕೈಗನ್ನಡಿಯಿದು. ಬಸವಕವಿಯು ವೀರಶೈವ ಧರ್ಮವನ್ನು ಪ್ರೀತಿಸಿದವನು. ಬದುಕಿನ ವಾಸ್ತವತೆಗೆ ಹೆಚ್ಚು ಒತ್ತು ಕೊಟ್ಟವನು. ವಾಸ್ತವಿಕತೆಯ ಆಚೆಗೆ ಹೋಗಿ ಪೂರ್ಣ ಸತ್ಯವನ್ನು ಮುಟ್ಟುವುದಕ್ಕೆ ಅವನ ಪ್ರತಿಭೆ ಮುನ್ನುಗ್ಗುತ್ತದೆ. ತನ್ನ ತೊನ್ನುರೋಗವನ್ನು ನಿವಾರಣೆ ಮಾಡಿಕೊಳ್ಳಲು ಮಹಾಲಿಂಗಲೀಲೆಗಳನ್ನು ಆಯ್ಕೆ ಮಾಡಿಕೊಂಡಿರುವುದು ಔಚಿತ್ಯಪೂರ್ಣವಾಗಿದೆ. ಏಕೆಂದರೆ ಅಂದಿನ ಸಮಾಜದಲ್ಲಿ ತೋರಿಬರುವ ಜನಾಂಗಗಳು, ಧರ್ಮಗಳು, ಮಾನವ ಸಂಬಂಧಗಳು, ಲೋಕನೀತಿ, ಸುಖ–ದುಃಖ, ವಿವಿಧ ಪದ್ಧತಿಗಳು, ನಂಬಿಕೆಗಳು, ಆಚರಣೆಗಳು, ಉಡುಗೆ–ತೊಡುಗೆ, ಆಹಾರ ಪದ್ಧತಿ, ಭಕ್ತಿ, ಮೋಕ್ಷ ಇವೇ ಮೊದಲಾದವುಗಳನ್ನು ಸಮರ್ಥ ರೀತಿಯಲ್ಲಿ ಅಭಿವ್ಯಕ್ತಪಡಿಸಲು ಈ ಕಥಾವಸ್ತು ಅಥವಾ ಲೀಲೆಗಳು ಸಹಾಯಕವಾಗಿವೆ. ಇವುಗಳೆಲ್ಲವುಗಳ ಹಿನ್ನೆಲೆಯಲ್ಲಿ ಬಸವ ಕವಿಯು 'ಹೊಸ ಸೃಷ್ಟಿ' ಎನ್ನುವಂತೆ ಕಲಾತ್ಮಕವಾಗಿಯೂ, ಸುಂದರವಾಗಿಯೂ ತನ್ನ ಕಾವ್ಯವನ್ನು ರಚಿಸಿದ್ದಾನೆ. ಬಸವಕವಿಯು ಪವಾಡಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ. ಪವಾಡಗಳ ಮೂಲಕ ಮಾನವನಲ್ಲಿ ಭಕ್ತಿ, ಪೂಜೆ, ಮೋಕ್ಷಗಳು ಪ್ರಾಪ್ತವಾಗಲು ಮಹಾಲಿಂಗಲೀಲೆ ಸಫಲವಾಗಿದೆ. ಭಕ್ತಿ, ಪೂಜೆ, ಮೋಕ್ಷಗಳ ಚಿತ್ರಣದಿಂದ ಅದನ್ನು ಒಂದು ಅತ್ಯುತ್ತಮ ಕಾವ್ಯವನ್ನಾಗಿ ನಿರ್ಮಿಸಿದ್ದಾನೆ. ಇವೆಲ್ಲವುಗಳಿಂದ ಬಸವಕವಿಯು ಪ್ರಸಿದ್ಧನಾಗಿದ್ದಾನೆ. ಅವನ ಕಾವ್ಯ ಕನ್ನಡದ ಶ್ರೇಷ್ಠ

ಕಾವ್ಯ, ಎಂಬ ಮನ್ನಣೆಗೆ ಪಾತ್ರವಾಗಿದೆ.

ಒಟ್ಟಿನಲ್ಲಿ ಬಸವಕವಿಯು ತನ್ನ ಕೃತಿಯ ಮೂಲಕ ಶ್ರೀ ಮಹಾಲಿಂಗಮುನಿನಾಥರ ಪವಾಡಗಳಿಂದ ಅವರಿಗೆ ಗೌರವ, ಭಕ್ತಿ, ಅಭಿಮಾನ, ಪೂಜೆಗಳು ಸದಾ ನೆಲೆಯಾಗಿ ನಿಲ್ಲುವಂತೆ ಮತ್ತು ಶ್ರೀ ಮಹಾಲಿಂಗೇಶ್ವರರಲ್ಲಿ ಭಕ್ತಿಯಿಂದ ಬೇಡಿದ ವರಗಳು ಪ್ರಾಪ್ತವಾಗುವುದರಿಂದ ಸಮಾಜ ಮತ್ತು ಮಾನವನ ಸ್ವಭಾವದ ಸ್ವರೂಪವನ್ನು ಮಹಾಲಿಂಗಲೀಲೆಯ ಕಥನ ಶೈಲಿಯಲ್ಲಿ ನಿರೂಪಿಸಿರುವ ಕಾರಣ ಅಲ್ಲಿಯ ವಸ್ತುಗಳು ಸಾಂಸ್ಕೃತಿಕ ಅಧ್ಯಯನಕ್ಕೆ ಅರ್ಹವಾದ ಅಪರೂಪದ ಕೃತಿಯಾಗಿದೆ.

೨.೩ ಬಸವಕವಿಯ ಕಾಲ :

ಬಸವಕವಿಯ ದುರದುಂಡಿ ಜಂಗಮಲೀಲೆಯಲ್ಲಿ ಆತನ ಕಾಲವನ್ನು ತಿಳಿಸುವ ಪದ್ಯವಿದೆ.

"ವರ ಸಪ್ತದಶತದ್ವಾಶೀಲೆಗಣನೆಯಿಂ
ಮಿರುಪ ರೌದ್ರಾಭಿಧಾನದ ವತ್ಸರಾಗ್ರದೊಳ್
ಮೆರೆವ ಫಾಲ್ಗುಣಮಾಸ ಶುಕ್ಲಪಕ್ಷದ ನವಮಿ ತಿಥಿ ಸೌಮ್ಯವಾಸರದೊಳು
ವರ ಪುನರ್ವಸು ತಾರೆಯೂ ಮೈಕ ಶುಭಯೋಗ
ಮೀರೆ ಬಸವಕವಿಯಿಂದೆ ನುತವಾದ ದುರದುಂಡಿ
ವರನ ಸತ್ಕಾವ್ಯವಿದ ದೋಷಮೊಂದಿರೆ ತಿರ್ದಿಯೋದುವುದು ವಿಭುದರ್ಕಳು"[೩]

ಈ ಪದ್ಯದಿಂದ ಬಸವಕವಿಯು ಶಾಲಿವಾಹನ ಶಕೆ ೧೭೮೨ನೇ ರೌದ್ರನಾಮ ಸಂವತ್ಸರ ಫಾಲ್ಗುಣ ಮಾಸ ಶುದ್ಧ ನವಮಿ, ಸೋಮವಾರ ಪುನರ್ವಸು ನಕ್ಷತ್ರದಲ್ಲಿ (ಕ್ರಿ.ಶ. ೧೮೬೦ನೆಯ ಇಸ್ವಿ) ದುರದುಂಡಿ ಜಂಗಮಲೀಲೆಯನ್ನು ಮುಕ್ತಾಯಗೊಳಿಸಿದಂತೆ ತಿಳಿದು ಬರುತ್ತದೆ. ಇದರಿಂದ ಬಸವಕವಿಯು ೧೯ನೇ ಶತಮಾನದ ಮಧ್ಯಭಾಗದಲ್ಲಿ ಜೀವಿಸಿದ್ದನೆಂದು ಸ್ಪಷ್ಟವಾಗುತ್ತದೆ.

೨.೪ ಕವಿಯ ಪ್ರಮಾಣಿಕತನ :

ಕವಿಯು ಕೆಲವು ಸಂದರ್ಭಗಳಲ್ಲಿ ಪ್ರಮಾಣಿಕತೆಯಿಂದ ಮೆರೆದಿದ್ದಾನೆ. ಕವಿಯು ತನ್ನ ಕೃತಿಯ ಶಬ್ದ ಜೋಡಣೆಯಲ್ಲಿ ಸಂಧಿಬಂಧಗಳಲ್ಲಿ ಏನಾದರೂ ತಪ್ಪುಗಳು

ಕಂಡುಬಂದರೆ ಅಂಥವುಗಳನ್ನು ಶೇಷ್ಠರು ನಾನು ನಿಮ್ಮ ಮಗನೆಂದು ಕರುಣೆಯಿಂದ ಮುದ್ದಿಸಿ ಇದನ್ನು ತಿದ್ದಬೇಕು ಎಂದು ಹೇಳಿರುವುದು ಆತನ ಹೃದಯ ವೈಶಾಲ್ಯತೆಯು ಶ್ರೇಷ್ಠವಾಗಿರುವುದು.

ರಾಮದುರ್ಗದ ಸಂಗನಬಸವ ಮಹೇಶ್ವರರು ಮಹಲಿಂಗಲೀಲೆಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿರುವರು. ಆ ಮಹಿಮರನ್ನು ಅನುಸರಿಸಿ ಅವರ ಮಾರ್ಗವನ್ನನುಸರಿಸಿ ವಾರ್ಧಕ ಷಟ್ಪದಿಯಲ್ಲಿ ಈ ಮಹಾಲಿಂಗಲೀಲೆಯನ್ನು ರಚಿಸಿದ್ದೇನೆ. ಎನ್ನುವುದು ಆತನ ಪ್ರಮಾಣಿಕತೆಗೆ ಸಾಕ್ಷಿಯಾಗಿದೆ. ಹೀಗೆ ಕೃತಿಯಲ್ಲಿ ಹಲವಾರು ಅಂಶಗಳ ಮೂಲಕ ಪ್ರಮಾಣಿಕತೆಯಿಂದ ಮೆರೆದಿದ್ದಾನೆ.

೨.೫ ಧೈರ್ಯ :

ಕವಿಯು ಕೃತಿರಚನೆಯಲ್ಲಿ ಧಾರ್ಮಿಕ ಅಂಶಗಳು, ಸಾಮಾಜಿಕ ಅಂಶಗಳು, ರಾಜಕೀಯ ಅಂಶಗಳು, ಆರ್ಥಿಕ, ಲಿಂಗಸ್ಥಾಪನೆ, ಪೂಜೆ, ಜಾತಿ ಮುಂತಾದ ವಿಷಯಗಳನ್ನು ಪದ್ಯರೂಪದಲ್ಲಿ ಹೇಳುವಾಗ ಧೈರ್ಯದಿಂದ ಬರೆದಿರುವುದು ಕಂಡಿದೆ.

"ಜಾರಚೋರರ ಭಯದಿ ಚಂದ್ರ ನಿಜಕಿರಣಮಂ
ತೋರಿಸನೆ ಲೋಕಬಾಂಧವನಸಮತೇಜಮಂ
ಬೀರಿಸನೆ ಮಂದೆಹರಕಾಶಿಕರ ಭೀತಿಯಿಂ ಬ್ರಹ್ಮಾಂಡ ಮಂಡಲದೊಳು
ಕ್ರೂರಮಾನಸರಾದ ಕುಜನಸಂಜಾತಮವಿ
ಚಾರದಿಂ ನಿಂದಿಸುವುದೆಂದೆಂಬ ಸಂಶಯದಿ
ಸೂರಿಜನರಸಮರಸವತ್ಕವಿತೆ ನಿರ್ಮಿಸದೆ ಮಾಣುವರೆ ಭೂತೆಳೆದೊಳು"[೪]

ಜಾರಚೋರರ ಭಯದಿಂದ ಚಂದ್ರನು ತನ್ನ ಕಿರಣ ಪಸರಿಸುವುದನ್ನು ಬಿಡುವುದಿಲ್ಲ. ಕತ್ತಲೆ ಗೂಗೆಗಳ ಭಯದಿಂದ ಸೂರ್ಯನು ತನ್ನ ಬೆಳಕನ್ನು ಬೀರುವುದನ್ನು ಬಿಡುವನೇ ? ಕ್ರೂರ ಮನಸ್ಸಿನ ಕೆಟ್ಟ ಜನರು ಕೆಟ್ಟ ವಿಚಾರದಿಂದ ನಿಂದಿಸುವರೆಂದು ಕವಿಗಳು ರಸಕವಿತೆಯನ್ನು ನಿರ್ಮಿಸದೇ ಇರುವರೆ. ಭೂಮಿಯ ಮೇಲೆ ಸತ್ಕವಿಯಾದವನು ಇದಕ್ಕೆ ಯಾವದಕ್ಕೂ ಅಂಜದೇ ಕೃತಿಯನ್ನು ರಚಿಸುವನು. ಎನ್ನುವುದರಲ್ಲಿ ಕವಿಧರ್ಮವನ್ನು ಪ್ರಕಟಿಸಿದ್ದಾನೆ.

"ರೋಗಿ ಪರಮಾನ್ನಮಂ ಗೂಗೆ ದಿವಸೇಂದ್ರನಂ ಸತ್ಯವ್ಯದರ್ಥಗಳ ಪೂಗಪಂ ಬಲ್ಲರೇನ ಪ್ರಭುಧ ಮಾನಸರ್ ?" ಎಂದು ಕುಕವಿನಿಂದೆಯನು ಮಾಡಿರುವನು.

೨.೬ ಸಮಾರೋಪ :

ಕವಿಯು ಕಾವ್ಯದುದ್ದಕ್ಕೂ ಹಲವು ವಿಚಾರಗಳನ್ನು ತಿಳಿಸುತ್ತ ರಾಜಕೀಯ, ಧಾರ್ಮಿಕ, ಸಾಮಾಜಿಕ ಹೀಗೆ ಕುಲಗಳು, ವೃತ್ತಿ, ಪ್ರಮಾಣಿಕತನ ವಿವಿಧ ವಿದ್ವಾಂಸರ ನೆನಪು ಪವಾಡಗಳನ್ನು ಹೇಳುವುದರ ಮೂಲಕ ಒಬ್ಬ ಮುಧೋಳದ ಪರಿಸರದ ಶ್ರೇಷ್ಠ ಕವಿಯಾಗಿರುವನು. ಆತನಿಗೆ ತನ್ನ ಪರಿಸರದ ಪ್ರಭಾವದಿಂದ ಆತನ ವ್ಯಕ್ತಿತ್ವ ಅಮೋಘವಾದದ್ದೆಂದು ಈ ಕೃತಿಯ ಮೂಲಕ ಕಂಡಿದ್ದೇನೆ.

ಕೊನೆಯ ಟಿಪ್ಪಣಿಗಳು :

೧. ಮಹಲಿಂಗಲೀಲೆ ಸಂಧಿ ೧, ಪದ್ಯ ೨೩, ಪುಟ ೭

೨. ದುರದುಂಡಿ ಜಂಗಮಲೀಲೆ ಸಂಧಿ ೧, ಪದ್ಯ ೨೪

೩. ದುರದುಂಡಿ ಜಂಗಮಲೀಲೆ ಸಂಧಿ ೩೩, ಪದ್ಯ ೩೮

೪. ಮಹಲಿಂಗಲೀಲೆ ಸಂಧಿ ೧, ಪದ್ಯ ೨೪, ಪುಟ ೭

೫. ಮಹಲಿಂಗಲೀಲೆ ಸಂಧಿ ೧, ಪದ್ಯ ೨೫, ಪುಟ ೭

ಅಧ್ಯಾಯ – ೩

ಸಂಸ್ಕೃತಿ : ಸಾಂಸ್ಕೃತಿಕ ಅಂಶಗಳು

ಅಧ್ಯಾಯ – ೩

ಸಂಸ್ಕೃತಿ : ಸಾಂಸ್ಕೃತಿಕ ಅಂಶಗಳು

೩.೧ ಪ್ರವೇಶ :

ಸಂಸ್ಕೃತಿ ಬಹುಮುಖವಾದ ಅರ್ಥವ್ಯಾಪ್ತಿಯನ್ನು ಪಡೆದ ಪದ. ಅದರ ವ್ಯಾಪ್ತಿ ತುಂಬಾ ವಿಸ್ತೃತವಾದುದು. ಮಾನವ ಸಮುದಾಯದ ಸಂಪ್ರದಾಯಗಳಿಂದ ಹಿಡಿದು, ವೈಯಕ್ತಿಕವಾದ ಆಚರಣೆಗಳವರೆಗೂ ವ್ಯಾಪಿಸಿದೆ. ಮಾನವ ಜಮಾಂಗದ ಇತಿಹಾಸವನ್ನು ಚಿತ್ರಿಸುವಾಗ ಬಳಸುವ ಪದ. ನಾಗರಿಕತೆ ಎಂಬುದು ಆಂಗ್ಲ ಭಾಷೆಯಲ್ಲಿ ಅದಕ್ಕೆ 'Culture' ಮತ್ತು 'Civilization' ಎಂದು ಕರೆಯಲಾಗಿದೆ. ಇವೆರಡೂ ಪದಗಳನ್ನು ಅನೇಕ ವೇಳೆ ವಿದ್ವಾಂಸರು ಸಮಾನಾರ್ಥಕಗಳೆಂಬಂತೆ ಪ್ರಯೋಗಿಸುವುದೂ ಉಂಟು. ಮಾನವ ಶಾಸ್ತ್ರಜ್ಞರು 'ಸಂಸ್ಕೃತಿ' ಎಂಬುದನ್ನು 'ನಾಗರಿಕತೆ' ಎಂಬ ಅರ್ಥದಲ್ಲಿಯೇ ಬಳಸುತ್ತಾರೆ.

'ಸಂಸ್ಕೃತಿ' ಎಂಬ ಶಬ್ದವನ್ನು ಇಂಗ್ಲೀಷಿನ 'Culture' ಎಂಬುದಕ್ಕೆ ಸಂವಾದಿಯಾಗಿ ಉಪಯೋಗಿಸಲಾಗುತ್ತದೆ. ಈ ಮಾತು ನಮಗೆ ಹೊಸತು ಆದರೆ ಇದರ ಹಿಂದಿರುವ ಅರ್ಥ ಹೊಸದಲ್ಲ. 'Culture' ಎಂಬುದರ ಮೂಲ ಪದ 'Cult' ಅಥವಾ 'Cultus' ಎಂದು ಗೌರವಿಸು, ಆರಾಧಿಸು, ಸೇವೆಮಾಡು ಮೊದಲಾದ ಅರ್ಥಗಳನ್ನು ಕೊಡುತ್ತದೆ.

ದೈವಭಕ್ತಿ ಎಂಬ ಅರ್ಥವನ್ನು ಒಂದು ಕಡೆ ಇದು ಪಡೆದರೆ ಇನ್ನೊಂದು ಕಡೆ ಭೂದೇವಿಯ ಆರಾಧನೆ. ಅಂದರೆ ಕೃಷಿ ಎಂಬ ಅರ್ಥವನ್ನು ಪಡೆಯಿತು. ಈ ಎರಡನೆಯ ಅರ್ಥದಿಂದಲೇ ಬಂದುದು 'Agriculture' ಎಂಬ ಶಬ್ದ 'Culture' ಎಂಬುದು ಒಂದು ಬಗೆಯ ವ್ಯವಸಾಯವೆ. ಭೂಮಿಯನ್ನು ಉಳುಮೆ ಮಾಡಿ, ಬಿತ್ತಿ, ನೀರು, ಗೊಬ್ಬರ ಹಾಕಿ ಹಸನು ಮಾಡುವಂತೆ "ಮನುಷ್ಯನಲ್ಲಿರುವ ವಿಶೇಷವಾದ ಶಕ್ತಿಗಳು ಮೊಳಕೆಯೊಡೆದು ಬೆಳೆಯುವುದಕ್ಕಾಗಿ ಮಾಡಬೇಕಾದ ಅಂತರಂಗದ ವ್ಯವಸಾಯವೇ ಸಂಸ್ಕೃತಿ"[೧]

ಸಂಸ್ಕೃತಿ ಎಂದರೇನು ಎಂಬುದನ್ನು ವ್ಯಾಖ್ಯಾನ ರೂಪದಲ್ಲಿ ಹೇಳುವುದು ಕಷ್ಟ. ಆದರೆ ಅದರ ಸ್ವರೂಪವನ್ನು ಕೆಲವಾರು ಮಾತುಗಳಲ್ಲಿ ಸ್ಪಷ್ಟಪಡಿಸಲು ಸಾಧ್ಯವಾಗುತ್ತದೆ. ಸಂಸ್ಕೃತಿಯು ಮಾನವ ಜೀವನದ ಹಲವಾರು ಅಂಶಗಳನ್ನು ಒಳಗೊಳ್ಳುತ್ತದೆ. ನಾವು

ದಿನಬಳಕೆಯ ಮಾತಿನಲ್ಲಿ ಉತ್ತಮವಾದ ನಡುವಳಿಕೆ, ಉತ್ತಮ ಮಾತುಕತೆ, ಮೊದಲಾದವುಗಳನ್ನು ಒಳಗೊಂಡ ಶಿಷ್ಟ ಸಂಸ್ಕೃತಿಯನ್ನು ಮಾತ್ರ ಸಂಸ್ಕೃತಿ ಎಂದು ಕರೆಯುತ್ತೇವೆ.

ಮಾನವ ವಿಜ್ಞಾನದಲ್ಲಿ ಸಂಸ್ಕೃತಿಗೆ ವ್ಯಾಪಕವಾದ ಅರ್ಥವನ್ನು ಕೊಟ್ಟಿರುವುದನ್ನು ಕಾಣುತ್ತೇವೆ. ಸಂಸ್ಕೃತಿ ಎಂದರೇನು ? ಎಂಬುದನ್ನು ಕುರಿತು ಅನೇಕರು ಸೂತ್ರಗಳನ್ನು ನೀಡಿರುವುದು ಇವುಗಳನ್ನು ಗಮನದಲ್ಲಿಟ್ಟುಕೊಂಡು ಸಂಸ್ಕೃತಿಯ ಸ್ವರೂಪವನ್ನು ಗುರುತಿಸಬಹುದು. ಸಂಸ್ಕೃತಿ ಮಾನವ ಜೀವಿಗೆ ವಿಶಿಷ್ಟವಾದುದು. ಸಮಾಜಕ್ಕೆ ಮತ್ತು ಸಂಸ್ಕೃತಿಗೆ ಸಂಬಂಧವಿದೆ. ವ್ಯಕ್ತಿಗಳಿರದೇ ಸಮಾಜವಾಗುವುದಿಲ್ಲ. ಹಾಗೆಯೇ ಸಮಾಜವಿಲ್ಲದೆ ಸಂಸ್ಕೃತಿ ಇರಲು ಸಾಧ್ಯವಿಲ್ಲ. ಪರಿಸರದಲ್ಲಿ ಮಾನವ ನಿರ್ಮಿತವಾದ ಭಾಗವೇ ಸಂಸ್ಕೃತಿ. ಸಂಸ್ಕೃತಿಯನ್ನುವಂತದ್ದು ಮಾನವನಿಗೆ ಪರಂಪರಾಗತವಾಗಿ ಬರುವಂತದ್ದು. ಆದರೆ ಅದನ್ನು ತನ್ನದನ್ನಾಗಿ ಮಾಡಿಕೊಳ್ಳಬೇಕಾದರೆ ಅದನ್ನು ಪ್ರಯತ್ನಪೂರ್ವಕವಾಗಿ ರೂಢಿಸಿಕೊಳ್ಳಬೇಕಾಗುತ್ತದೆ.

ಸಂಸ್ಕೃತಿಯು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ವರ್ಗಾವಣೆಯಾಗುತ್ತದೆ. ಮಾನವನ ತಿಳುವಳಿಕೆ, ನಂಬಿಕೆ, ವರ್ತನೆ, ನೀತಿ, ಕಲೆ, ಸಾಹಿತ್ಯ, ಭಾಷೆ, ಕಾನೂನು, ಸಂಪ್ರದಾಯ ದೃಷ್ಟಿಕೋನ, ಮೌಲ್ಯಗಳು, ತಂತ್ರಗಳು, ಮಾನವ ನಿರ್ಮಿತ ವಸ್ತುಗಳು, ಆಲೋಚನೆಗಳು ಮುಂತಾದವುಗಳೆಲ್ಲವೂ ಸೇರಿ ಸಂಸ್ಕೃತಿ ರೂಪುಗೊಳ್ಳುತ್ತದೆ. ಸಂಸ್ಕೃತಿ ಮನುಷ್ಯನ ದೈಹಿಕ ಚಟುವಟಿಕೆಗಳನ್ನು ಒಳಗೊಂಡಿದ್ದರೂ ಅದನ್ನು ಮೀರಿ ನಿಲ್ಲುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ಸಂಸ್ಕೃತಿಯನ್ನು ರೂಪಿಸುವಲ್ಲಿ ಪ್ರಯತ್ನಿಸಿದರೂ ಅದು ವ್ಯಕ್ತಿಗೆ ಸೀಮಿತವಾಗಿ ನಿಲ್ಲದೆ ಅದೊಂದು ಸಾರ್ವಜನಿಕವಾಗಿ ಪರಿಣಮಿಸುತ್ತದೆ.

'ಸಂಸ್ಕೃತಿ' ಎಂಬ ಪದದ ಅರ್ಥ ಮೊದಲು ಸಂಕುಚಿತವಾಗಿತ್ತೆಂದು ತಿಳಿದು ಬರುತ್ತದೆ. ಮಾನವ ಜನಾಂಗ ಬೆಳೆದಂತೆ ಸಂಸ್ಕೃತಿಯ ಅರ್ಥವೂ ವಿಕಾಸಗೊಂಡು ಬಹಳ ವ್ಯಾಪಕವಾಗಿ ಬೆಳೆದಿದೆ. ಪದರು ಪದರವಾಗಿ ಹರಡಿ ಬಹುಮುಖವಾಗಿ ವ್ಯಾಪಿಸಿದೆ. ಆದಿಮಾನವನ ಪ್ರಾರಂಭದ ದೆಸೆಯಲ್ಲಿ ನಾಗರಿಕತೆ ಮತ್ತು ಸಂಸ್ಕೃತಿಗಳಿಗೆ ವಿಶೇಷ ಅಂತರ ಕಂಡು ಬರುವುದಿಲ್ಲ. ದೇಹಕ್ಕೆ ಮರದ ಎಲೆಗಳನ್ನೋ, ಪ್ರಾಣಿಗಳ ಚರ್ಮವನ್ನೋ

ಸುತ್ತಿಕೊಳ್ಳುತ್ತಿದ್ದ ಮಾನವ, ಬಟ್ಟೆಯನ್ನು ನೆಯ್ದು ತೊಡುವುದನ್ನು ಕಲಿತಿರುವುದು ನಾಗರಿಕತೆಯೂ ಹೌದು. ಗುಹೆಗಳಲ್ಲಿ ವಾಸವಾಗುತ್ತಿದ್ದವನು ಮನೆಯನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದನು. ಹಸಿಯ ಮಾಂಸವನ್ನು ಹಲ್ಲಿನಿಂದ ಹರಿದು ತಿನ್ನುತ್ತಿದ್ದವನು ಬೆಳೆಯನ್ನು ಬೆಳೆದು ಬೇಯಿಸಿ ತಿನ್ನುವುದನ್ನು ಕಲಿತನು. ಹೀಗೆ ಜೀವನದ ಆರಂಭ ಕಾಲದ ಮಾನವ ಸಾಧನೆಗಳನ್ನು ಯಾವ ಹೆಸರಿನಿಂದಲೇ ಕರೆದರೂ ಅದು ಅವನನ್ನು ಮಾನವೀಯತೆಯತ್ತ ಕೊಂಡೊಯ್ದ ಹೆಜ್ಜೆ ಗುರುತುಗಳು. ಅವನು ಮೊಟ್ಟಮೊದಲು ಭಾಷೆಯನ್ನು ಕಂಡುಕೊಂಡು ಆಡಿದ ಮಾತುಗಳೆಲ್ಲವೂ ಕಾವ್ಯಗಳೇ, ನುಡಿದೆಲ್ಲ ಸಾಹಿತ್ಯವೆ. ಆದರೆ ಒಂದು ಮಟ್ಟದವರೆಗೆ ಆತನ ಜೀವನ ಬೆಳೆದ ಮೇಲೆ ಮಾನವೀಯತೆಯ ವಿವಿಧ ಶಕ್ತಿಗಳು ಅವನಲ್ಲಿ ಅರಳತೊಡಗಿದವು. ದೇಹದ ಹಸಿವಿನಂತೆಯೇ ಇನ್ನೊಂದು ಬಗೆಯ ಅಂತರಂಗದ ಹಸಿವು ವ್ಯಕ್ತವಾಗಬಯಸಿತು.

ಆಹಾರವನ್ನು ತಿಂದು, ಮನೆಯನ್ನು ಕಟ್ಟಿ, ಬಾಳುವ ಅನ್ನಮಯ ವ್ಯಾಪಾರದಿಂದ ಆತನಿಗೆ ಸಂಪೂರ್ಣ ತೃಪ್ತಿ ಸಿಗಲಿಲ್ಲ. ಇವುಗಳಿಂದ ತೃಪ್ತವಾಗದ ಇನ್ನೇನನ್ನೋ ಆತನ ಮನೋಮಯ, ಪ್ರಾಣಮಯ, ಆನಂದಮಯ ಆಕಾಂಕ್ಷೆಗಳು ಬಯಸಿದವು. ಅನ್ನವನ್ನು ತಿನ್ನುವುದಷ್ಟೇ ಸಾಲದು, ತಿನ್ನುವ ತಟ್ಟೆ ಸುಂದರವಾಗಿರಬೇಕು. ಮನೆಯನ್ನು ಕಟ್ಟುವುದಷ್ಟೇ ಸಾಲದು, ಆ ಮನೆ ಅಲಂಕೃತವಾಗಿರಬೇಕು. ಹೀಗೆ ಸೌದರ್ಯದ ಆಕಾಂಕ್ಷೆ ಆತನ ನಿತ್ಯ ಜೀವನದಲ್ಲಿ ಬೆಳೆಯಿತು. ಬಹುರೂಪಧಾರಿಯಾದ ಪ್ರಕೃತಿಯೂ ಸೌಂದರ್ಯದ ಉಪಾಸನೆಗೆ ಸಹಕಾರಿಯಾಯಿತು. ಇದರಿಂದ ಪ್ರಭಾವಿತನಾದ ಆತ ತೃಪ್ತನಾಗದೆ ಸಂಶೋಧನೆಯನ್ನು ಮುಂದುವರೆಸಿದ. ಅದರ ಫಲವಾಗಿ ಆಧುನಿಕತೆ ಬೆಳೆಯಿತು. ಅದರ ಫಲವಾಗಿ ಬಾಹ್ಯ ಜೀವನದ ಹೆಚ್ಚು ಸುಖಮಯವಾಯಿತು. ಇದೇ ನಾಗರಿಕತೆ.

ಸಂಸ್ಕೃತಿಯ ಸಾಧನೆಗಳು ನಾಗರಿಕತೆಯ ಸಾಧನೆಗಳಂತೆ ಬಹಿರಂಗದ ಪ್ರಯೋಜನಕ್ಕಾಗಿ ನಿರ್ಮಿತವಾದವುಗಳಲ್ಲ. ಅವು ತಮಗೆ ತಾವೇ ಪ್ರಯೋಜನಾತ್ಮಕವಾದವುಗಳು. ನಾಗರಿಕತೆ ಮಾನವನ ಜೀವನಕ್ಕೆ ಸಂಬಂದಿಸಿದರೆ, ಸಂಸ್ಕೃತಿ ಆತನ ಅಂತರಂಗದ ಜೀವನಕ್ಕೆ ಸಂಬಂಧಿಸಿದೆ. ಅದು ಆತನ ಅಂತರಂಗದ ಪರಿಮಳ, ಕುಸುಮ, ಸಂಸ್ಕೃತಿಯ ಸಾಧನಗಳು ಮಾನವನ ಆಂತರಿಕವಾದ ಯಾವುದೋ ಅನುಭವಕ್ಕೆ ಮಾತ್ರ ಸ್ವರೂಪವನ್ನು ಕೊಡುತ್ತವೆ.

ಸಂಸ್ಕೃತಿಯಲ್ಲಿ ಭಾವನಾತ್ಮಕವಾದ ಅನುಭವ ಆನಂದರೂಪಿಯಾಗಿ ವ್ಯಕ್ತಗೊಳ್ಳುತ್ತದೆ. ಇಲ್ಲಿರುವುದು ಆನಂದಾತ್ಮಕ : ನಾಗರಿಕತೆ ಪ್ರಯೋಜನಾತ್ಮಕ ಮಾನವನ ಬಹುಮುಖವಾದ ಸ್ವಭಾವ ಮತ್ತು ಭಾವಗಳ ಸೂಕ್ಷ್ಮವಾದ ಮತ್ತು ಸುಂದರವಾದ ಚಿತ್ರವನ್ನು ಸಂಸ್ಕೃತಿಯ ಅಂಗಗಳಲ್ಲಿ ಕಾಣಬಹುದು. "ಮಾನವನ ಅಂತರಂಗದ ಜೀವನದ ಜೀವಂತ ಚಿತ್ರಣವೇ ಸಂಸ್ಕೃತಿ" ಇದು ಸಂಗೀತ, ಶಿಲ್ಪ, ಚಿತ್ರ, ನೃತ್ಯ, ಸಾಹಿತ್ಯ ಮತ್ತು ಧರ್ಮ ಈ ಮೊದಲಾದ ಕವಲುಗಳಾಗಿ ಹರಿಯುತ್ತದೆ. ಈ ಎಲ್ಲ ಭಾಗಗಳಿಗೂ ಸಂಸ್ಕೃತಿಯೆಂಬ ಮಾತಿನ ವಲಯದೊಳಗೆ ಸೇರುತ್ತವೆ.

ಸಂಸ್ಕೃತಿಯನ್ನು ಒಂದು ನಿರ್ಧಿಷ್ಟ ಅಳತೆಗೋಲಿನಿಂದ ಅಳೆಯಲು ಸಾಧ್ಯವಿಲ್ಲ. ನಾಗರಿಕತೆಯನ್ನು ಅಳೆಯಲು ಅಳತೆಗೋಲುಗಳಿರುವಂತೆ ಸಂಸ್ಕೃತಿಯನ್ನು ಅಳೆಯಲು ಅಂತಹ ಯಾವ ಅಳತೆಗೋಲುಗಳೂ ಇಲ್ಲ. ಸಂಸ್ಕೃತಿಯ ಅಂಶಗಳನ್ನು ಸಾರ್ವತ್ರಿಕವಾಗಿ ಮತ್ತು ಸರ್ವಸಮ್ಮತವಾದ ಒಂದೇ ಓರೆಗಲ್ಲಿನ ಮೇಲೆ ಉಜ್ಜಿ ನೋಡಿ ಬೆಲೆಯನ್ನು ಕಟ್ಟುವುದು ಸಾಧ್ಯವಲ್ಲದ ಕೆಲಸ ಮತ್ತು ಸಾಧುವಲ್ಲದ ಕೆಲಸ. ಏಕೆಂದರೆ ಸಂಸ್ಕೃತಿ ಪ್ರಧಾನವಾಗಿ ಭಾವನಿಷ್ಠವಾದುದು, ವಸ್ತುನಿಷ್ಠವಾದುದು. ಅನುಭವ, ಭಾವನಿಷ್ಠವಾದ ಪ್ರತಿಭೆಯಿಂದ ದೀಪ್ತವಾಗಿ ಸಂಸ್ಕೃತಿ ಹೊರಹೊಮ್ಮುತ್ತದೆ.

ಸಂಸ್ಕೃತಿಯ ಬೆಲೆ ಕಟ್ಟಬೇಕಾದರೆ ಅವೆರಡನ್ನೂ ಅರಿಯುವ ಬುದ್ಧಿಶಕ್ತಿಯ ಜೊತೆಗೆ ಅನುಭವಿಸುವ ತನ್ಮಯತೆಯೂ ಬೇಕು. ಈ ತನ್ಮಯತೆ ಇಲ್ಲದ ಹೊರತು ನಿಜವಾದ ಬೆಲೆಯನ್ನು ಕಂಡುಕೊಳ್ಳಲಾರೆವು. ಒಂದು ಸಂಗೀತವೋ, ಕೃತಿಯೋ, ಕಾವ್ಯವೋ ಕೆಲವರಲ್ಲಿ ರಸಾನುಭವದ ಕಣ್ಣೀರಿನ ಕಾಣಿಕೆಯುಂಟು ಮಾಡಿದರೆ, ಇನ್ನು ಕೆಲವರಲ್ಲಿ ಅದೇ ಕೃತಿ ಯಾವ ಪ್ರತಿಕ್ರಿಯೆಯನ್ನು ಉಂಟುಮಾಡದಿರುವುದಕ್ಕೆ ಕಾರಣವಾಗಿದೆ.

ಸಂಸ್ಕೃತಿಯ ಸಾಧನಗಳು ನಾಗರಿಕತೆಯ ಸಾಧನಗಳಂತೆ. ಯಾವಾಗಲೂ ಪ್ರಗತಿ ಮಾರ್ಗದಲ್ಲಿಯೇ ನಡೆಯಲಾರವು. ಹಿಂದಿನ ಗ್ರೀಕರ ಕಾಲದ ನಾಗರಿಕತೆಗಿಂತ ಇಂದಿನ ಪಾಶ್ಚಿಮಾತ್ಯ ರಾಷ್ಟ್ರಗಳು ಮುಂದುವರೆದಿವೆ ನಿಜ. ವಾಲ್ಮೀಕಿ, ಕಾಳಿದಾಸರ ಕಾವ್ಯಗಳಾಗಲಿ, ಸೆಕ್ಸಪೀಯರನ ನಾಟಕಗಳಾಗಲಿ ಆ ಯುಗಕ್ಕೆ ಉತ್ತುಂಗ ಶಿಖರಗಳಾಗಿ ನಿಂತವು. ಮುಂದಿನ ಯುಗಗಳು ಅದಕ್ಕಿಂತ ಎತ್ತರದಲ್ಲಿಯೇ ನಿಲ್ಲಬೇಕೆಂದು ಭಾವಿಸುವುದಕ್ಕಾಗುವುದಿಲ್ಲ. ಹಾಗೆ ನಿಲ್ಲುವುದು ಸಾಧ್ಯವೂ ಇಲ್ಲ. ಜನಾಂಗದ ಸಮಷ್ಟ ಅನುಭವದಿಂದ ಆಗೊಮ್ಮೆ ಈಗೊಮ್ಮೆ

ಅಂತಹ ಉತ್ತುಂಗ ಶಿಖರಗಳು ತಲೆಯೆತ್ತಿ ನಿಲ್ಲಬಹುದು.

ಸಂಸ್ಕೃತಿಯ ಪ್ರಕರಣ ನಾಗರಿಕತೆಯ ಪ್ರಸರಣದಷ್ಟು ಯಾಂತ್ರಿಕವಾಗಿ ಸಂಭವಿಸುವಂತದ್ದಲ್ಲ. ಏಕೆಂದರೆ ಅದು ಒಂದು ದೊಡ್ಡ ಚೇತನದ ವಿಶಿಷ್ಟ ಅನುಭವಗಳನ್ನು ಸಾಂಕೇತಿಕವಾದ ರೀತಿಯಲ್ಲಿ ಒಳಗೊಂಡಿರುತ್ತದೆ. ಅದು ನಮ್ಮದಾಗಬೇಕಾದರೆ ತತ್ಸದೃಶ್ಯವಾದ ಮನೋಧರ್ಮವನ್ನು ನಾವು ಪ್ರಯತ್ನಪೂರ್ವಕವಾಗಿ ಪಡೆದುಕೊಳ್ಳಬೇಕಾಗುತ್ತದೆ. ಆ ಸಂಸ್ಕಾರ ಹೆಚ್ಚು ಹೆಚ್ಚಾಗಿ ನಮ್ಮಲ್ಲಿ ಬೆಳೆದಂತೆ ಕಾವ್ಯವೋ, ಸಂಗೀತವೋ, ಶಿಲ್ಪವೋ ತನ್ನ ಅನುಭವದ ಕೈಯನ್ನು ನಿಮ್ಮ ಕಡೆಗೆ ಚಾಚುತ್ತದೆ. ಇಲ್ಲವಾದರೆ ಅವುಗಳಿಗೆ ನಾವು ಕುರುಡರಾಗುತ್ತೇವೆ. ಅಂದರೆ ಸಂಸ್ಕೃತಿಯತ್ತ ನಾವು ಪ್ರಯತ್ನಪೂರ್ವಕವಾಗಿ ನಡೆಯದ ಹೊರತು ಅದು ತಾನಾಗಿಯೇ ನಮ್ಮ ಕಡೆಗೆ ಬರಲಾರದು. ತನ್ನ ಬರುವಿನ ರಹಸ್ಯವನ್ನು ತೋರಲಾರದು.

ನಾಗರಿಕತೆಯಂತೆ ಸಂಸ್ಕೃತಿಯನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ತೆಗೆದುಕೊಂಡು ಹೋಗುವುದು ಅಸಾಧ್ಯ. ಏಕೆಂದರೆ ಅದು ಜನಜೀವನದ ಅಂತರಂಗದ ರೂಪಿತವಾಗುವುದರಿಂದ ಕೇವಲ ಬಹಿರಂಗದ ಸಾಧನೆಗಳಂತೆ ಅದನ್ನು ಅಂಗೀಕರಿಸಲಾಗುವುದಿಲ್ಲ. ಸಾಂಸ್ಕೃತಿಕ ಸಂಘರ್ಷಣೆ ಯಾಂತ್ರಿಕವಾದುದಲ್ಲ ಜೀವಂತವಾದ ಕ್ರಿಯೆ. ಅನೇಕ ವೇಳೆ ನೂತನ ಸೃಷ್ಠಿ ಶಕ್ತಿಗಳಿಗೆ ಇದು ಜೀವದಾನ ಮಾಡುತ್ತದೆ. ಭರತಖಂಡವನ್ನೇ ತೆಗೆದುಕೊಂಡರೆ ಪ್ರಾಚೀನ ಸಿಂಧೂ ಸಂಸ್ಕೃತಿಗೂ ಮತ್ತು ಆರ್ಯರಿಗೂ ಸಾಂಸ್ಕೃತಿಕ ಸಂಬಂಧ ಉಂಟಾಗಲು, ಅನಂತರ ಹಿಂದೂ-ಮುಸ್ಲಿಂ ಸಂಸ್ಕೃತಿಯ ತಿಕ್ಕಾಟದಿಂದಲೂ ಮತ್ತು ಇತ್ತೀಚಿಗೆ ಆಂಗ್ಲ ಸಂಸ್ಕೃತಿಯ ಪ್ರಭಾವದಿಂದಲೂ ಇಲ್ಲಿನ ಸಂಸ್ಕೃತಿಯು ಕಳೆದ ಹೊಸ ಹೊಸ ರೂಪುಗಳನ್ನು ಸ್ಮರಿಸಿಕೊಳ್ಳಬಹುದು.

ಸಂಸ್ಕೃತಿ ಎಂಬುದು ಪರಿಪೂರ್ಣ ಸಂತೋಷವನ್ನು ಹುಡುಕುವ ಸಾಹಸದ ಫಲ. ಇದರ ಮೂಲ ಉದ್ದೇಶವೆಂದರೆ ಸಂತೋಷವನ್ನು ಅರಸುವುದು. ನಾಗರಿಕತೆಯ ದೈಹಿಕ ಸಂತೋಷದ ಕಡೆಗೆ ಹೆಚ್ಚು ಗಮನವನ್ನು ಕೊಟ್ಟರೆ ಸಂಸ್ಕೃತಿಯು ಮಾನಸಿಕ ಸಂತೋಷದ ಕಡೆಗೆ ಹೆಚ್ಚು ಗಮನವನ್ನು ಕೊಡುತ್ತದೆ.

ಸಂಸ್ಕೃತಿ ಎಂಬುದು ವೈಯಕ್ತಿಕವಾದುದು. ಒಬ್ಬೊಬ್ಬ ವ್ಯಕ್ತಿಯ ಅಂತರಂಗದಲ್ಲಿ ಅರಳುವ ಪರಿಮಳ. ವ್ಯಕ್ತಿಯ ಈ ವಿಕಾಸಕ್ಕೆ ಕಾರಣವಾಗುವ ಸಾಮಾಜಿಕ ಪರಿಕರಗಳೂ

ಸಹ ಸಂಸ್ಕೃತಿಯಲ್ಲಿಯೇ ಸಮಾವೇಶಗೊಳ್ಳುತ್ತದೆ. ಈ ಅರ್ಥದಲ್ಲಿ ಅದನ್ನು ಕೆಲವು ವೇಳೆ ದೇಶವಾಚಕವಾಗಿ ಬಳಸುತ್ತೇವೆ. ಭಾರತೀಯ ಸಂಸ್ಕೃತಿ, ಕರ್ನಾಟಕ ಸಂಸ್ಕೃತಿ ಇತ್ಯಾದಿಯಾಗಿ ಇನ್ನೂ ಕೆಲವು ವೇಳೆ ಭಾಷಾವಾಚಕವಾಗಿ, ಮತಧರ್ಮಗಳ ಸೂಚಕವಾಗಿ ಬಳಸುವುದುಂಟು. ಈ ಎಲ್ಲ ಸಂದರ್ಭಗಳಲ್ಲಿಯೂ ಸಂಸ್ಕೃತಿ ಎಂಬುದು ಒಟ್ಟು ಜೀವನದ ಅಂತರಂಗದ ಅನುಭವ ಎಂಬ ಅಂಶ ಪ್ರಧಾನವಾಗಿ ಗೋಚರಿಸುತ್ತದೆ.

ಆಯಾ ಪ್ರದೇಶದ, ಆಯಾ ಭಾಷೆಯ, ಆಯಾ ಧರ್ಮದ ಜನಗಳು ತಮ್ಮ ಬಹುಮುಖ ಸಮಸ್ಯೆಗಳಿಗೆ ಉತ್ತರವನ್ನು ಕಾಣಬಯಸುವ ಅಂತರಂಗದ ಸಾಧನೆಯೇ ಸಂಸ್ಕೃತಿಯ ಮೂಲ ಸಾಮಗ್ರಿಯಾಗುತ್ತದೆ. ಸಂಸ್ಕೃತಿ ಎಂದರೆ ಅದೊಂದು ಜೀವನ ವಿಧಾನ. ಒಂದು ಜನಸಮೂಹ, ಜೀವನ ವಿಧಾನವೇ ಆ ಸಮಾಜದ ಸಂಸ್ಕೃತಿ ಎಂದರೆ ಜನಸಮೂಹದ ಬದುಕಿನ ವಿಧಿ ಆಚರಣೆಗಳು, ರೀತಿ ನೀತಿಗಳು ಇವೆಲ್ಲವುಗಳನ್ನೊಳಗೊಂಡು ಅರ್ಥೈಸುವ ಪದವೇ ಸಂಸ್ಕೃತಿ. ಸಾಹಿತ್ಯ ಸಂಗೀತಾದಿ ಲಲಿತ ಕಲೆಗಳು ನಮ್ಮ ಬದುಕಿನ ಅನೇಕ ರೀತಿಗಳೇ ಆಗಿರುವುದರಿಂದ ಸಂಸ್ಕೃತಿಯು ಇವೆಲ್ಲವುಗಳಲ್ಲಿಯೂ ತೋರಿಬರುತ್ತದೆ. ಆಯಾ ಕಾಲ, ದೇಶಗಳಲ್ಲಿ ನಿರ್ಮಾಣಗೊಂಡ ಸಾಹಿತ್ಯಾದಿ ಕಲೆಗಳಲ್ಲಿ ಅಂದಿನ ಸಂಸ್ಕೃತಿಯ ರೂಪುಗಳನ್ನು ನಾವು ನೋಡಬಹುದಾಗಿದೆ.

"ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಒಂದು ಜನಾಂಗದ ಜೀವನ ವಿಧಾನವೇ ಸಂಸ್ಕೃತಿ ಎಂದು ಹೇಳಬಹುದು. ಸಂಸ್ಕೃತಿಯು ಒಂದು ಜನಾಂಗದ ಸಮಸ್ತ ಚಟುವಟಿಕೆಗಳು, ಅವರ ಅಭಿರುಚಿ, ಆಚರಣೆ, ನಂಬಿಕೆ, ಸಂಪ್ರದಾಯಗಳು ಒಳಗೊಂಡಿರುತ್ತವೆ. ಅಂದರೆ ಆಯಾ ಜನಾಂಗದ ಕಲೆಗಳಲ್ಲಿ, ಸಾಮಾಜಿಕ ವ್ಯವಸ್ಥೆಯಲ್ಲಿ, ಅವರ ನಡೆ–ನುಡಿಗಳಲ್ಲಿ, ಆಚಾರ ವಿಚಾರಗಳಲ್ಲಿ, ವ್ಯವಹಾರಗಳಲ್ಲಿ, ಧಾರ್ಮಿಕ ಕ್ರಿಯೆಗಳಲ್ಲಿ ಈ ಸಂಸ್ಕೃತಿಯು ಗೋಚರಿಸುತ್ತದೆ."[೨]

೩.೨ 'ಸಂಸ್ಕೃತಿ'ಯ ಕುರಿತಾಗಿ ವಿವಿಧ ವಿದ್ವಾಂಸರ ಅಭಿಪ್ರಾಯಗಳು ಹೀಗಿವೆ :

"ಡಾ. ಎಂ. ಚಿದಾನಂದಮೂರ್ತಿಯವರು ಎಲಿಯೆಟ್ ಮತ್ತು ಹೆನ್ರಿಪ್ರ್ಯಾಟ್ ಅವರು ವಿವರಿಸಿದ ಸಂಸ್ಕೃತಿಯ ವ್ಯಾಖ್ಯೆಯನ್ನು ಸ್ವೀಕರಿಸಿ ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ."

"ಮಾನವ ತಮ್ಮ ಪರಿಸರದಿಂದ ಸಂಸ್ಕೃತಿಯನ್ನು ಕಲಿತು ಉತ್ತಮಗೊಳ್ಳುತ್ತಾ ಹೋಗುತ್ತಾನೆ. ಹೀಗೆ ಹುಟ್ಟಿನಿಂದ ಬಾರದೇ ಮಾನವ ತನ್ನ ಪರಿಸರದಿಂದ ಕಲಿತುಕೊಳ್ಳುವ ಭಾಷೆ, ಉಪಕರಣಗಳ ತಯಾರಿಕೆ, ಕಲೆ, ವಿಜ್ಞಾನ, ಕಾನೂನು, ಆಡಳಿತ ನೀತಿ ಮತ್ತು ಧರ್ಮ ಇತ್ಯಾದಿಗಳನ್ನು ಒಳಗೊಳ್ಳುತ್ತದೆ ಸಂಸ್ಕೃತಿ."[೩]

ಆದ್ದರಿಂದ "ಸಂಸ್ಕೃತಿ ಎಂದರೆ ಒಂದು ಸಮಾಜದ ಜೀವನ ವಿಧಾನ. ಅದರ ಆಚಾರ ವ್ಯವಹಾರಗಳು, ಅದರ ಸಂಸ್ಥೆಗಳು, ಆಲೋಚನಾ ವಿಧಾನಗಳು" ಡಾ. ಚಿದಾನಂದಮೂರ್ತಿಯವರ ಈ ಭಾಷೆ ಸಮಂಜಸವಾಗಿದ್ದು, ಸಂಸ್ಕೃತಿಯನ್ನು ತಿಳಿದುಕೊಳ್ಳಲು ದಾರಿದೀಪವಾಗುತ್ತದೆ.

* **ಇ. ಬಿ. ಟೈಲರ್** : "ಸಂಸ್ಕೃತಿ ಎಂಬುದು ಜ್ಞಾನ, ನಂಬಿಕೆ, ನೈತಿಕತೆ, ಕಲೆ ಈ ಎಲ್ಲಾ ವಿಚಾರಗಳನ್ನು ಇತರ ಸಾಧ್ಯತೆಗಳ ಸ್ವಭಾವವನ್ನೆಲ್ಲಾ ಒಳಗೊಂಡಿದೆ. ಅಲ್ಲದೆ ಮಾನವ ಪ್ರಯತ್ನದಿಂದ ಗಳಿಸಿಕೊಂಡ ಈ ಸಂಸ್ಕೃತಿ ಸಂಕೀರ್ಣವಾಗಿದೆ."[೪]

* **ಮೆಕ್ಯಾವರ್ ಮತ್ತು ಪೇಜ್** : "ನಮ್ಮ ಬದುಕಿನ ವಿವಿಧ ರೀತಿಯಲ್ಲಿ ಆಚಾರ, ವಿಚಾರಗಳಲ್ಲಿ, ರೀತಿ-ನೀತಿಗಳಲ್ಲಿ, ನಿತ್ಯ ವ್ಯವಹಾರದ ಕಲೆ, ಸಾಹಿತ್ಯ, ಸೃಜನ, ಆನಂದ, ಅನುಭವಗಳನ್ನು ವ್ಯಕ್ತ ಮಾಡುವ ಒಂದು ವಿಶಿಷ್ಟ ಗುಂಪು."[೫]

* **ಮಲೀನ ವರ್ಸ** : "ಸಂಸ್ಕೃತಿ ಎನ್ನುವುದು ಮಾನವ ನಿರ್ಮಿತ ವ್ಯವಸ್ಥೆ ಈ ವ್ಯವಸ್ಥೆಯ ಮೂಲಕ ಅವನು ಜೀವನದ ಗೊತ್ತುಗುರಿಗಳನ್ನು ವಿವರಿಸುತ್ತಾನೆ."[೬]

* ಸಂಸ್ಕೃತಿ ಎಂದರೆ ನಾಡಿನ ಸತ್‌ಸಂಪ್ರದಾಯಗಳ ರೀತಿ ನೀತಿಗಳ, ಧರ್ಮ ರಚನೆಗಳ, ಕಲೆ ಕಾವ್ಯಗಳ, ಆಚಾರ ವಿಚಾರಗಳ ಒಟ್ಟು ಜ್ಞಾನರೂಪ.

* ಸಂಸ್ಕೃತಿ ಎನ್ನುವುದು ಮಾನವ ಒಪ್ಪಿಕೊಂಡ ಒಂದು ಗುಂಪಾಗಿದೆ.

ಒಟ್ಟಿನಲ್ಲಿ ಸಂಸ್ಕೃತಿಯೆಂದರೆ ಮಾನವ ನಿರ್ಮಿಸಿಕೊಂಡ ಒಂದು ಜೀವನದ ವ್ಯವಸ್ಥೆ. ಸಂಸ್ಕೃತಿಯು ಜ್ಞಾನ, ನಂಬಿಕೆ, ನೈತಿಕತೆ, ಕಲೆ ಇತರ ವಿಚಾರಗಳು. ನಿತ್ಯ ವ್ಯವಹಾರದ ಕಲೆ, ಆನಂದ, ಅನುಭವ, ಸಾಹಿತ್ಯ, ಸೃಜನ, ಆಚಾರ, ವಿಚಾರ, ಸಂಪ್ರದಾಯ ಇವುಗಳೆಲ್ಲವನ್ನು ಒಳಗೊಂಡು ಇದು ಒಂದು ಸಮಾಜದ ಜೀವನ ವಿಧಾನವೆಂದು ಹೇಳಲಾಗುತ್ತದೆ.

೩.೩ ಸಂಸ್ಕೃತಿ ಮತ್ತು ಧರ್ಮ :

ಸಂಸ್ಕೃತಿಯಲ್ಲಿ ಧರ್ಮಕ್ಕೆ ಪ್ರಧಾನ್ಯತೆ ಕೊಟ್ಟಿರುವುದನ್ನು ಕಾಣುತ್ತೇವೆ. ವೈದಿಕ ಮತ್ತು ಅವೈದಿಕ ಧರ್ಮಗಳ ಹುಟ್ಟಿಗೆ ದ್ರಾವಿಡ ಸಂಸ್ಕೃತಿಯ ಕೊಡುಗೆ ಅಪಾರವಾಗಿದೆ. ವೇದಗಳಲ್ಲಿ ಹೇಳಲಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣಗಳು ವರ್ಗಗಳಾಗಿದ್ದವು. ಇಲ್ಲಿ ಮೊದಲಿನ ಮೂರು ವರ್ಗಗಳು ಆಳುವ ವರ್ಗವಾಗಿ, ಕೊನೆಯದು ದುಡಿಯುವ ವರ್ಗವಾಗಿ ಸಮಾಜ ಅಸಂಖ್ಯೆ ಜಾತಿಗಳಲ್ಲಿ ವಿಭಜನೆಗೊಂಡಿತು. ಬ್ರಾಹ್ಮಣಾದಿ ಮೂರು ವರ್ಣಗಳ ಅಭಿಮತವನ್ನು ಪ್ರತಿಪಾದಿಸುವ ಧರ್ಮ ಮತ್ತು ಸಂಸ್ಕೃತಿ ವೈದಿಕ ವಾಙ್ಮಯದಲ್ಲಿ ಅತೀ ಶ್ರೇಷ್ಠತೆ ಪಡೆದುಕೊಂಡಿತು.

ಶೂದ್ರ ವರ್ಣದಲ್ಲಿ ಸೇರಿರುವ ಲೆಕ್ಕಕ್ಕೆ ಸಿಗದಷ್ಟು ಜಾತಿ ಬುಡಕಟ್ಟುಗಳು ಲಿಖಿತ ಆಧಾರಗಳಿಲ್ಲದೆಯೇ ತಮ್ಮ ಸಂಸ್ಕೃತಿಯನ್ನು ಸಾಂಪ್ರದಾಯಿಕ ಆಚರಣೆ ಪದ್ಧತಿ ಪರಂಪರೆಗಳಲ್ಲಿ ಉಳಿಸಿಕೊಂಡವು. ಇಲ್ಲಿ ಆಗಾಗ ಹುಟ್ಟಿದ ಜೈನ, ಬೌದ್ಧ, ಸಿಖ್, ವೀರಶೈವ ಧರ್ಮಗಳು ಬೇರೆಡೆಯಿಂದ ಬಂದ ಮುಸ್ಲಿಂ, ಕ್ರಿಶ್ಚಿಯನ್ ಧರ್ಮಗಳು ಮತಾಂತರ ಮೂಲಕ ಈ ಜನಸಮೂಹವನ್ನು ತಮ್ಮತ್ತ ಸೆಳೆದುಕೊಳ್ಳಲು ಪ್ರಯತ್ನಿಸಿದವು.

"ಸಂಸ್ಕೃತಿ ಮತ್ತು ಧರ್ಮದಲ್ಲಿ ಅಂತರ್ ವಿರೋಧಿಯಾದ ಎರಡು ವರ್ಗಗಳ ನೆಲೆಗಳಿವೆ.

೧. ಆಳುವ ವರ್ಗಗಳ ಧರ್ಮ ಮತ್ತು ಸಂಸ್ಕೃತಿಗಳು.

೨. ದುಡಿಯುವ ವರ್ಗಗಳ ಧರ್ಮ ಮತ್ತು ಸಂಸ್ಕೃತಿಗಳು"[೭]

ಧರ್ಮವು ನಿರ್ದಿಷ್ಟ ವರ್ಗದ (ಮೇಲ್ವರ್ಗ) ಲೋಕದೃಷ್ಟಿ ಮತ್ತು ಜೀವನ ದೃಷ್ಟಿಗಳಿಗೆ ಸಂಬಂಧಿಸಿದ್ದು. ಅದು ಆ ವರ್ಗದ ಸಂಸ್ಕೃತಿ ಅದರ ಬೌದ್ಧಿಕ, ಮಾನಸಿಕ ಚಟುವಟಿಕೆಗಳನ್ನು ಸೂಚಿಸುತ್ತದೆ. ಈ ಸಂಸ್ಕೃತಿಯ ಮುಖ್ಯ ಭಾಗವೇ ಧರ್ಮ.

ಒಂದು ಸಮಾಜದಲ್ಲಿ ಹಲವು ಯಜಮಾನರಿದ್ದಾಗ ಹಲವು ಧರ್ಮ ಹಲವು ಯಜಮಾನ ಸಂಸ್ಕೃತಿಗಳಿರುತ್ತವೆ. ಬಾರತದ ಅನೇಕ ಭಾಷೆ, ಧರ್ಮ, ಜನಾಂಗಗಳಿರುವ ಕಡೆ ಈ ಸಂಸ್ಕೃತಿಂಯು ಇನ್ನೂ ಸಂಕೀರ್ಣವಾಗಿದೆ. ಕರ್ನಾಟಕವೆಂಬ ರಾಷ್ಟ್ರೀಯತೆಯೊಂದರಲ್ಲೇ ಬ್ರಾಹ್ಮಣರಲ್ಲಿ ಸ್ಮಾರ್ಥ, ವೈಷ್ಣವ, ಶ್ರೀವೈಷ್ಣವ ಮೊದಲಾದ

ಪ್ರಭೇಧಗಳಿವೆ. ಇವರ ಸಂಸ್ಕೃತಿ ಪರಂಪರೆಗಳಲ್ಲಿ ಸೂಕ್ಷ್ಮ ವ್ಯತ್ಯಾಸಗಳು ಸಾಕಷ್ಟು. ಇವರು ವೈದಿಕಾರ್ಯರ ಪ್ರಭಾವದಿಂದ ಪ್ರದುರ್ಭವಿಸಿದ ದ್ರಾವಿಡರಿರಬೇಕು.

ಉತ್ತರ ಕರ್ನಾಟಕದ ಬಹುತೇಕ ಮನೆಗಳಲ್ಲಿ ಕುಲದೇವತೆ ಸ್ಥಳೀಯ ಸ್ತ್ರೀ ದೇವತೆಗಳು ಯಲ್ಲಮ್ಮ, ಹುಲಿಗೆಮ್ಮ, ಮೊದಲಾದವು ಕೆಲವರು. ಮೈಲಾರ ಇವರು ಗೊಂದಲ ಹಾಕಿಸದೇ ಅಥವಾ ಅಡ್ಡಲಿಗೆ ತುಂಬಿಸದೇ ಯಾವ ಧಾರ್ಮಿಕ ಕಾರ್ಯಗಳನ್ನು ಮಾಡುವುದಿಲ್ಲ.

ವೈದಿಕ ಸಂಸ್ಕೃತಿಯನ್ನು ವಿರೋಧಿಸಿ ಹುಟ್ಟಿದ್ದು ಉತ್ತರದ ಬೌದ್ಧ, ಜೈನ ಮತಗಳು. ಕರ್ನಾಟಕದಲ್ಲಿಯೂ ತಮ್ಮ ಧರ್ಮ ಸಂಸ್ಕೃತಿಯ ಪ್ರಚಾರ ಕಾರ್ಯ ಮಾಡಿದವು. ಬೌದ್ಧರಿಗಿಂತ ದಿಗಂಬರ ಜೈನರ ಪ್ರಾಬಲ್ಯ ನಮ್ಮಲ್ಲಿ ಹೆಚ್ಚಾಗಿತ್ತು. ಇವರು ಕರ್ನಾಟಕದ ನುಡಿಗೆ, ಸಂಸ್ಕೃತಿಗೆ ಕೊಟ್ಟ ಕೊಡುಗೆ ಅಪಾರವಾದುದು. ಮೇಲೆ ಹೇಳಿದಂತೆ ಈ ಸಂಸ್ಕೃತಿಗಳು ಕೂಡಾ ದ್ರಾವಿಡ ಮೂಲದ ಕನ್ನಡಿಗರ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಎಷ್ಟು ಮಾರ್ಪಡಿಸಿದವು ಎಂಬ ಚರ್ಚೆಯನ್ನು ಮಾಡಬೇಕಿದೆ. ಲಿಖಿತ ಪರಂಪರೆಗೆ ಅಂದರೆ ಶಿಷ್ಟ ಸಂಸ್ಕೃತಿ ನಿರ್ಮಾಣಕ್ಕೆ ಕಾರಣರಾದ ಈ ಮತಪಂತೀಯ ಯಜಮಾನಿಕೆಯ ಇತ್ಯಾತ್ಮಕ ಕೊಡುಗೆಯುನ್ನು ಗುರುತಿಸುವಂತೆ ನೇತ್ಯಾತ್ಮಕ ಪರಿಣಾಮುಗಳನ್ನು ಅರಿತುಕೊಳ್ಳಬೇಕಾಗುತ್ತದೆ.

ಮತಾಂತರವನ್ನು ಪ್ರತಿಪಾದಿಸುವ ಧರ್ಮಗಳು ದೇಶಿ ಸಂಸ್ಕೃತಿಗಳನ್ನು ನಾಶಮಾಡುವ ಕೆಲಸದ ಜೊತೆ ತಮ್ಮದನ್ನು ಮಾತ್ರ ಏಕನಿಷ್ಠೆಯಿಂದ ಅನುಸರಿಸಬೇಕೆಂಬ ಒತ್ತಾಯ ಹೇರುತ್ತೇವೆ. ಈ ಹಿನ್ನೆಲೆಯಲ್ಲೇ ವೀರಶೈವ, ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ ಮೊದಲಾದ ಧರ್ಮಗಳ ಸಾಂಸ್ಕೃತಿಕ ಪ್ರಭಾವವನ್ನು ಅರಿಯಬೇಕು. ಮತಾಂತರಗೊಂಡ ಜನ ತಮ್ಮ ಮೂಲ ಸಂಸ್ಕೃತಿಯನ್ನು ಸುಲಭವಾಗಿ ಬಿಟ್ಟುಕೊಡುವುದಿಲ್ಲ.

ಈ ಸಂದರ್ಭದಲ್ಲಿ ಹೊಸಮತ ಸಂಸ್ಕೃತಿ ಮತ್ತು ಹಳೆಯ ಜೀವನ ವಿಧಾನಗಳ ನಡುವೆ ಘರ್ಷಣೆ ತೀವ್ರವಾಗುತ್ತದೆ. ಇಂಥ ಘರ್ಷಣೆಗಳ ಪರಿಣಾಮವಾಗಿ ಹೊಸ ಮತ ಸಂಸ್ಕೃತಿಗಳೇ ಹುಟ್ಟಿರುವುದುಂಟು. ಯಜಮಾನ ಸಂಸ್ಕೃತಿಗಳು ತಮ್ಮ ಅಸ್ತಿತ್ವಕ್ಕಾಗಿ ಸ್ಥಳೀಯ ಪರಿಶಿಷ್ಟ ಸಂಸ್ಕೃತಿಗಳ ಜೊತೆ ನಿರಂತರ ಸೆಣಸಾಡಿವೆ. ಇದು ನಮ್ಮ ನಾಡಿನ ವಿಶಿಷ್ಟ ಸಂಸ್ಕೃತಿಕ ಲಕ್ಷಣ ಎನ್ನಬಹುದು. ಧರ್ಮಗಳು ಬರಿ ಧರ್ಮಗಳಾಗಿಯಲ್ಲ.

ಸಂಸ್ಕೃತಿಗಳಾಗಿಯೂ ಕಾರ್ಯ ನಿರ್ವಹಿಸಿವೆ ಎಂಬುದನ್ನು ಮರೆಯುವಂತಿಲ್ಲ.

ಚರಿತ್ರೆಯಲ್ಲಿ ಧರ್ಮಗಳ, ಧರ್ಮಗುರುಗಳು ಸ್ಥಾಪಿಸುತ್ತಿದ್ದ ಮಠ, ದೇಗುಲ, ವಿಹಾರ, ಚೈತ್ಯಾಲಯ, ಮಸೀದಿ, ಚರ್ಚುಗಳ ಪಾತ್ರವನ್ನು ನಿರ್ಲಕ್ಷಿಸಲಾಗುವುದಿಲ್ಲ. ಆಳುವ ವರ್ಗ ಇಂಥ ಧರ್ಮ ಸಂಸ್ಥೆಗಳನ್ನು ತುಂಬಾ ಸಮರ್ಥವಾಗಿ ಬಳಸಿಕೊಂಡು ಗ್ರಾಮೀಣ ಭಾಗದಲ್ಲೂ ತನ್ನ ಸಂಸ್ಕೃತಿಯನ್ನು ಹೇರಲು ಯತ್ನಿಸಿದೆ. ಬ್ರಾಹ್ಮಣರ ಅಗ್ರಹಾರ, ಶೈವರ ಮಠ, ಮಂದಿರ, ಮುಸ್ಲಿಂರ ಮದ್ರಸಾ, ಮಸಿದಿ, ಬೌದ್ಧರ ಜೈನರ ಬಸದಿ, ಚೈತ್ಯಾಲಯಗಳು ಈ ಕೆಲಸವನ್ನು ಮಾಡಿವೆ. ಇವು ವರ್ಗ ಸಂಸ್ಕೃತಿಯನ್ನು ಪ್ರಸಾರ ಮಾಡಿವೆ.

ಕರ್ನಾಟಕ ಚರಿತ್ರೆಯನ್ನು ಈ ಹಿನ್ನೆಲೆಯಲ್ಲಿ ವ್ಯಾಸಂಗ ಮಾಡಿದಾಗ ತುಂಬಾ ಕುತೂಹಲಕಾರಿಯಾದ ವಿಷಯಗಳು ಬರುತ್ತವೆ. ಒಂದು ನಿದರ್ಶನದ ಪ್ರಕಾರ ಚರಿತ್ರೆಯುಗದ ಮಠ, ಅಗ್ರಹಾರ, ದೇಗುಲಗಳೆಂಬ ಧಾರ್ಮಿಕ ಸಂಸ್ಥೆಗಳು, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ವೈಭವದ ಶಿಖರವನ್ನೇರಿದವು. ಭಾರತದಲ್ಲಿ ತಮಿಳುನಾಡನ್ನು ಬಿಟ್ಟರೆ ಕರ್ನಾಟಕದಲ್ಲೇ ಅತೀ ಹೆಚ್ಚು ಶಾಸನಗಳು ಸಿಗುತ್ತವೆ. ಇದರಲ್ಲಿ ಶೇ. ೯೦ರಷ್ಟು ದಾನ ಶಾಸನಗಳು, ಗ್ರಾಮಗಳನ್ನು ಒಳಗೊಂಡ ಇಡೀ ಭೂಪ್ರದೇಶವನ್ನು ಧರ್ಮ ಸಂಸ್ಥೆಗಳಿಗೆ ಪುಕ್ಕಟೆಯಾಗಿ ನೀಡಿದ್ದೇ ಇದರರ್ಥ.

ಅಧುನಿಕ ಕರ್ನಾಟಕದ ವೀರಶೈವ, ಮಾಧ್ವ, ವೈಷ್ಣವ, ಶ್ರೀವೈಷ್ಣವ ಮಠಗಳು ಶೈಕ್ಷಣಿಕ ಮತ್ತು ಸಾಮಾಜಿಕ ಸಂಸ್ಥೆಗಳಾಗಿ ಶೋಷಕರಂತೆ ಉಳಿದುಬರಲು ಮುಖ್ಯ ಕಾರಣ ವಿಜಯನಗರ ಸಾಮ್ರಾಜ್ಯ. ಇದಕ್ಕೆ ಕೊಟ್ಟಿದ್ದ ಅಪಾರ ಪ್ರಮಾಣದ ಸ್ಥಿರ, ಚರ ಸೊತ್ತೇ ಇವು ಈಗಲೂ ಸಂಸ್ಥಾನ ಮಠಗಳೆಂದು ಕರೆದುಕೊಳ್ಳುತ್ತವೆ. ಒಂದು ಬಗೆಯ ಸಂಸ್ಕೃತಿಯ ಪ್ರಸಾರ ಕಾರ್ಯವನ್ನು ನಿರ್ಮಿಸುತ್ತವೆ. ಸಂಸ್ಕೃತಿಯ ಪ್ರಧಾನ ವಿಭಾಗವಾದ ಶಿಕ್ಷಣವನ್ನು ಹಿಡಿತದಲ್ಲಿಟ್ಟುಕೊಂಡಿವೆ. ಗ್ರಂಥ ಪ್ರಕಟಣೆ, ಸ್ವಮತ ಪ್ರಚಾರ ಮಾಡುತ್ತಿವೆ. ಹಿಂದಿನಂತೆ ಈಗಲೂ ರಾಜಕೀಯದ ಮೇಲೆ ಒಂದಿಲ್ಲೊಂದು ವಿಧದ ಪ್ರಭಾವ ಬೀರುತ್ತದೆ. ವ್ಯವಸ್ಥೆಯೊಂದು ದೃಢೀಕರಣಗೊಳ್ಳಲು ಹೀಗೆ ಧರ್ಮ ಮತ್ತು ಸಂಸ್ಕೃತಿಗಳು ಮುಖ್ಯ ಪಾತ್ರ ವಹಿಸುತ್ತವೆ.

೩.೪ ಸಂಸ್ಕೃತಿ ಮತ್ತು ಭಾಷೆ :

ಸಂಸ್ಕೃತಿ ಮತ್ತು ಭಾಷೆಗೂ ನಿಕಟವಾದ ಸಂಬಂಧವಿದೆ. ಸಂಸ್ಕೃತಿಯಿಂದ ಭಾಷೆಯೂ, ಭಾಷೆಯಿಂದ ಸಂಸ್ಕೃತಿಯೂ ಒಂದನ್ನೊಂದು ಅನುಸರಿಸಿ ಬೆಳೆದು ಬಂದಿವೆ. ಇವುಗಳನ್ನು ಪರಸ್ಪರ ಬೇರ್ಪಡಿಸಲು ಬರುವುದಿಲ್ಲ. ಇವು ಪರಸ್ಪರ ಪೂರಕವಾಗಿವೆ. ಮಾನವನ ಎಲ್ಲಾ ಚಟುವಟಿಕೆಗಳಿಗೂ ಸಮಾಜ ಮತ್ತು ಸಂಸ್ಕೃತಿಗಳು ಮೂಲ. ಅವನ ಎಲ್ಲಾ ಭಾವನೆಗಳು ಕಾರ್ಯಕಲಾಪಗಳು ಅವನ ಸಮಾಜ ಸಂಸ್ಕೃತಿಗೆ ಅನುಗುಣವಾಗಿಯೇ ಬೇಳೆದು ಬಂದಿರುತ್ತವೆ. ವ್ಯಕ್ತಿಯು ಈ ವಿಚಾರವನ್ನು ಭಾಷೆಯು ಮೂಲಕ ವ್ಯಕ್ತಪಡಿಸಬಲ್ಲವನಾಗಿದ್ದಾನೆ ಅಷ್ಟೇ.

ಸಂಸ್ಕೃತಿ ಮತ್ತು ಭಾಷೆ ಪರಸ್ಪರ ಎಷ್ಟರ ಮಟ್ಟಿಗೆ ಒಂದನ್ನೊಂದು ಬೆಸೆದುಕೊಂಡಿವೆ ಎಂದರೆ, ಭಾಷೆಯಿಲ್ಲದೆ ಸಂಸ್ಕೃತಿಯೂ, ಸಂಸ್ಕೃತಿ ಇಲ್ಲದೆ ಭಾಷೆಯೂ ತಮ್ಮ ಅಸ್ಥಿತ್ವವನ್ನು ಪಡೆಯಲಾರದ ಸ್ಥಿತಿಯಲ್ಲಿವೆ. ಬೇರೆ ಬೇರೆ ಜನಾಂಗದ ಭಿನ್ನ ಭಿನ್ನ ಸಂಸ್ಕೃತಿಯನ್ನು ಪರಿಶೀಲಿಸಲು ಹೊರಟಾಗ ಈ ವಿಚಾರವು ಸ್ಪಷ್ಟವಾಗಿ ಗೋಚರವಾಗುತ್ತದೆ. ಅಷ್ಟೇ ಅಲ್ಲದೆ ಭಾಷೆ ಸಂಸ್ಕೃತಿಯನ್ನು ಪರಸ್ಪರ ಹೇಗೆ ನಿಯಂತ್ರಿಸುತ್ತವೆ ಎಂಬ ಸಂಗತಿಯು ವ್ಯಕ್ತವಾಗುವುದು. ಒಂದು ಸಮಾಜದ ಸಂಸ್ಕೃತಿಯನ್ನು ತಿಳಿಯಲು ಆ ಸಮಾಜದ ಜನರು ಆಡುವ ಭಾಷೆಯ ಶಬ್ದಸಮೂಹ ಸಹಾಯ ಮಾಡುತ್ತದೆ. ಆ ಸಮಾಜ ಮತ್ತು ಸಂಸ್ಕೃತಿಗೆ ತಕ್ಕ ಶಬ್ದಗಳು ಮತ್ತು ಆ ಭಾಷೆಯಲ್ಲಿ ಸಿದ್ಧವಾಗಿರುತ್ತವೆ.

ಸಮಾಜ ಜೀವಿಗಳ ವಿಶಿಷ್ಟ ಅನುಭವಗಳು, ಘಟನೆಗಳು, ವಿಶೇಷತೆಗಳು ಅವರು ಬಳಸುವ ವಸ್ತುಗಳು ಮುಂತಾದವುಗಳಿಗೆ ಸಂಬಂಧಿಸಿದ ಶಬ್ದಗಳು ಸಿದ್ಧವಾಗುತ್ತವೆ. ಆ ಸಮಾಜ ಮತ್ತು ಸಂಸ್ಕೃತಿಗಳು ಬದಲಾದರೆ ಅವನ್ನು ಅನುಸರಿಸಿ ಆ ಭಾಷೆಯ ಶಬ್ದಗಳೂ ಅವುಗಳ ಆರ್ಥಗಳೂ ಬದಲಾಗುತ್ತವೆ. ಯಾವುದೇ ಒಂದು ಸಮಾಜದಲ್ಲಿ ಯಾವುದೇ ಒಂದು ಬಗೆಯ ವಸ್ತು ಬಳಕೆಯಲಿಲ್ಲ ಎಂದರೆ, ಆ ಸಮಾಜದಲ್ಲಿ ಅದರ ಬಗ್ಗೆ ಯಾವ ಮಾಹಿತಿಯೂ ದೊರೆಯುವುದಿಲ್ಲ. ಆ ಭಾಷೆಯಲ್ಲಿ ಅದನ್ನು ಸೂಚಿಸುವ ಶಬ್ದವೂ ಬಳಕೆಯಲಿಲ್ಲ ಎಂದರ್ಥ. ಕಾರಣಾಂತರಗಳಿಂದ ಅ ವಸ್ತು ಆ ಸಮಾಜದಲ್ಲಿ ಬಳಕೆಗೆ ಬಂದರೆ ಅದನ್ನು ಸೂಚಿಸುವ ಒಂದು ಶಬ್ದ ಆ ಸವಾಜದ ಭಾಷೆಯಲ್ಲಿ ಸಿದ್ಧಗೊಳ್ಳಬೇಕಾಗುತ್ತದೆ. ಇಲ್ಲವೇ ಬೇರೆ ಬೇರೆ ಭಾಷೆಗಳಿಂದ ಅದನ್ನು ಎರವಲು

ಪಡೆಯಬೇಕಾಗುತ್ತದೆ.

ಒಂದು ಭಾಷೆಯಲ್ಲಿ ಕಂಡುಬರುವ ಶಬ್ದಸಮೂಹ ಆ ಭಾಷೆಯ ಪರಿಸರ ಹಾಗೂ ಪರಿಸ್ಥಿತಿಗಳಿಗೆ ಅನುಗುಣವಾಗಿ ಸಿದ್ಧವಾಗುತ್ತವೆ. ಇಲ್ಲವೆ ಅವುಗಳಲ್ಲಿ ಕೆಲವು ಬೇರೆ ಬೇರೆ ಭಾಷೆಗಳಿಂದ ಬಂದಂಥವುಗಳಾಗಿರುತ್ತವೆ.

ಶಬ್ದಕ್ಕೆ ಅರ್ಥ ಎಂಬುದು ಅದನ್ನು ಆಡುವ ಜನರು ಸಾಮಾಜಿಕ ಸಂಪ್ರದಾಯ ಹಾಗೂ ಸಂಸ್ಕೃತಿಗಳಿಗೆ ಅನುಗುಣವಾಗಿ ರೂಢಿಗೆ ಬಂದಿರುತ್ತದೆ. ಒಂದು ಶಬ್ದಕ್ಕೆ ಒಂದೇ ಅರ್ಥವಿರಬೇಕೆಂಬ ನಿಯಮವೇನೂ ಇಲ್ಲ. ಎರಡು ಅಥವಾ ಎರಡಕ್ಕಿಂತ ಹೆಚ್ಚು ಶಬ್ದಗಳನ್ನು ಒಂದೇ ಅರ್ಥದಲ್ಲಿ ಬಳಸುತ್ತಿರಬಹುದು. ಇಲ್ಲವೆ ಒಂದು ಶಬ್ದಕ್ಕೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಅರ್ಥ ಬಳಕೆಯಲ್ಲಿರಬಹುದು. ಇಂತಹ ಶಬ್ದಗಳು ಸಾಮಾನ್ಯವಾಗಿ ಆ ಭಾಷೆಯನ್ನು ಅಡುವ ಜನರ ಸಮಾಜ ಮತ್ತು ಸಂಸ್ಕೃತಿ ಮುಂತಾದವುಗಳಿಗೆ ತಕ್ಕಂತೆ ರೂಢಿಬದ್ಧವಾದ ಅರ್ಥವನ್ನು ಸಂಪಾದಿಸಿಕೊಂಡಿರುತ್ತವೆ. ಒಂದು ಭಾಷೆಯ ಶಬ್ದ ಸಮೂಹ ಅವುಗಳ ಅರ್ಥ. ಆ ಭಾಷೆ ಆಡುವ ಜನರ ಸಂಸ್ಕೃತಿ ಮತ್ತು ಸಮಾಜವನ್ನು ನಿರ್ದೇಶಿಸುತ್ತವೆ ಮಾತ್ರವಲ್ಲದೆ ಅವು ಒಂದನ್ನೊಂದು ನಿಯಂತ್ರಿಸುತ್ತವೆ.

ಒಂದು ಭಾಷೆಯಲ್ಲಿ ಶಬ್ದಗಳ ಸಂಖ್ಯೆ ಹೆಚ್ಚಿದ್ದರೆ ಇನ್ನೊಂದು ಭಾಷೆಯಲ್ಲಿ ಕಡಿಮೆ ಸಂಖ್ಯೆಯಲ್ಲಿರುತ್ತವೆ. ಒಂದು ಭಾಷೆಯಲ್ಲಿ ಒಂದು ವರ್ಗಕ್ಕೆ ಸೇರಿದ ಶಬ್ದಗಳು ಹೆಚ್ಚಿದ್ದರೆ ಇನ್ನೊಂದು ಭಾಷೆಯಲ್ಲಿ ಕಡಿಮೆ ಇರುತ್ತವೆ. ಇದಕ್ಕೆ ಆ ಭಾಷೆಯನ್ನು ಆಡುವವರ, ಸಮಾಜ, ಸಂಸ್ಕೃತಿ, ಆಚಾರ, ಜನಜೀವನ, ಧರ್ಮ, ವೃತ್ತಿ ಮುಂತಾದವು ಮುಖ್ಯ ಕಾರಣವಾಗಿರುತ್ತವೆ. ಒಂದು ಭಾಷೆ ತುಂಬ ಸಂಪದ್ಭರಿತ ಭಾಷೆಯಾಗಿ ಬೆಳೆದು ಬಂದಿರಬಹುದು. ಇನ್ನೊಂದು ಭಾಷೆ ಹಿಂದುಳಿದ ಭಾಷೆಯಾಗಿರಬಹುದು ಬೆಟ್ಟಗುಡ್ಡಗಳೆಲ್ಲ ದ್ವೀಪಗಳಲ್ಲ. ಯಾವ ಸಂಪರ್ಕವೂ ಇಲ್ಲದೆ ವಾಸಿಸುವ ಜನರ ಆಡುಭಾಷೆಗಳು ಸಾಮಾನ್ಯವಾಗಿ ಹಿಂದುಳಿದ ಭಾಷೆಗಳಾಗಿರುತ್ತವೆ. ಸಂಪದ್ಭರಿತ ಭಾಷೆಗಳಾಗಿರುವಷ್ಟು ಬಾಹ್ಯ ಸಂಪರ್ಕ ಹಿಂದುಳಿದ ಭಾಷೆಗಳಿಗಿರುವುದಿಲ್ಲ. ಈ ಕಾರಣದಿಂದಾಗಿಯೇ ಒಂದು ಭಾಷೆಯಲ್ಲಿ ಕಂಡುಬರುವ ಶಬ್ದ ಸಮೂಹ ಇನ್ನೊಂದು ಭಾಷೆಯ ಶಬ್ದ ಸಮೂಹಕ್ಕಿಂತ ಭಿನ್ನವಾಗಿರುತ್ತದೆ. ಒಂದು ಭಾಷೆಯಲ್ಲಿ ಅನ್ಯದೇಶಿ ಶಬ್ದಗಳೇ ಹೆಚ್ಚಿರಬಹುದು. ಇನ್ನೊಂದು ಭಾಷೆಯಲ್ಲಿ ಕಡಿಮೆಯಿರಬಹುದು ಇದೇ ರೀತಿ ಒಂದು ಭಾಷೆಯಲ್ಲಿ ಸಾಂಸ್ಕೃತಿಕ

ಶಬ್ದಗಳೇ ಹೆಚ್ಚಿರಬಹುದು. ಇದಕ್ಕೆ ಆ ಭಾಷೆಯನ್ನು ಆಡುವ ಜನರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಪರ್ಕಗಳು ಮುಖ್ಯ ಕಾರಣವಾಗಿರುತ್ತವೆ.

೩.೫ ಸಂಸ್ಕೃತಿ ಮತ್ತು ಸಮಾಜ :

ಮಾನವನ ಎಲ್ಲಾ ಚಟುವಟಿಕೆಗಳಿಗೂ ಸಂಸ್ಕೃತಿ ಮತ್ತು ಸಮಾಜವೇ ಮೂಲ. ಅವನ ಎಲ್ಲಾ ಭಾವನೆಗಳು, ಕಾರ್ಯಕಲಾಪಗಳು ಅವನ ಸಮಾಜ ಸಂಸ್ಕೃತಿಗಳಿಗೆ ಅನುಗುಣವಾಗಿಯೇ ಬೆಳೆದು ಬಂದಿರುತ್ತವೆ. ವ್ಯಕ್ತಿಯು ಆ ವಿಚಾರವನ್ನು ತನ್ನ ಭಾಷೆಯ ಮೂಲಕ ವ್ಯಕ್ತಪಡಿಸಬಲ್ಲವನಾಗಿದ್ದಾನೆ ಅಷ್ಟೆ ಒಂದು ಸಮಾಜದ ಸಂಸ್ಕೃತಿಯನ್ನು ತಿಳಿಯಲು ಆ ಸಮಾಜದ ಜನರು ಆಡುವ ಭಾಷೆಯ ಶಬ್ದ ಸಮೂಹ ಸಹಾಯ ಮಾಡುತ್ತದೆ. ಆ ಸಮಾಜ ಮತ್ತು ಸಂಸ್ಕೃತಿಗೆ ತಕ್ಕ ಶಬ್ದಗಳು ಆ ಭಾಷೆಯಲ್ಲಿ ಸಿದ್ಧವಾಗಿರುತ್ತವೆ. ಸಮಾಜ ಜೀವಿಗಳ ವಿಶಿಷ್ಠ ಅನುಭವಗಳು, ಘಟನೆಗಳು, ವಿಶೇಷತೆಗಳು ಅವರು ಬಳಸುವ ವಸ್ತುಗಳು ಮುಂತಾದವುಗಳಿಗೆ ಸಂಬಂಧಿಸಿದ ಶಬ್ದಗಳು ಸಿದ್ಧಗೊಳ್ಳುತ್ತವೆ. ಆ ಸಮಾಜ ಮತ್ತು ಸಂಸ್ಕೃತಿಗಳು ಬದಲಾದರೆ ಅವನ್ನು ಅನುಸರಿಸಿ ಆ ಭಾಷೆಯ ಶಬ್ದಗಳೂ ಅವುಗಳ ಅರ್ಥವೂ ಬದಲಾಗುತ್ತವೆ.

ಮಾನವ ಜೀವನ ಸಮಾಜ ಮತ್ತು ಸಂಸ್ಕೃತಿಗಳ ಆಧಾರದ ಮೇಲೆಯೇ ರೂಪಿತವಾದದ್ದು. ಆ ಕಾರಣದಿಂದಲೇ ಸಮಾಜ, ಸಂಸ್ಕೃತಿ, ವ್ಯಕ್ತಿ ಇವು ಪರಸ್ಪರ ಒಂದನ್ನೊಂದು ಅವಲಂಬಿಸಿವೆ. ಸಮಾಜದಿಂದ ವ್ಯಕ್ತಿಯನ್ನು ವ್ಯಕ್ತಿಯಿಂದ ಸಂಸ್ಕೃತಿಯನ್ನು ಬೇರ್ಪಡಿಸಲು ಬರುವುದಿಲ್ಲ. ಸಂಸ್ಕೃತಿಯು ಸಮಾಜದ ಸ್ಥಿತಿಗತಿಯನ್ನು ವ್ಯಕ್ತಿಯ ಜೀವನ ವಿಧಾನವನ್ನು ವ್ಯಕ್ತಪಡಿಸುವುದು. ಸಂಸ್ಕೃತಿಯು ಹೂವಿನಲ್ಲಿರುವ ಮಕರಂದದಂತೆ ಹಾಲಿನೊಡನಿರುವ ಕೆನೆಯಂತೆ ವ್ಯಕ್ತಿಯ ಜೀವನದೊಂದಿಗೆ ಸಾಗಿ ಬರುವುದು. ಸಮಾಜದ ಮೇಲೆ ಸಂಸ್ಕೃತಿಯ ಪ್ರಭಾವ ಸತತವಾಗಿರುತ್ತದೆ. ಅದು ಸಮಾಜದ ವ್ಯಕ್ತಿಯನ್ನು ರೂಪಿಸುತ್ತದೆ. ತಮ್ಮ ತಮ್ಮ ಪೂರ್ವಜರಿಂದ ನಡೆದು ಬಂದ ಸಂಸ್ಕೃತಿಯನ್ನು ಆಧರಿಸಿಯೇ ಇಂದಿನವರು ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಯತ್ನಿಸುತ್ತಾರೆ. ಅಲ್ಲದೆ ಅವರು ಸಂಸ್ಕೃತಿಯನ್ನು ಬೆಳೆಸಿಕೊಂಡು ಬರಲು ಪ್ರಯತ್ನಿಸುತ್ತಾರೆ. ಮಾನವ ಮತ್ತು ಸಂಸ್ಕೃತಿಯ ಸಂಬಂಧ ಕೆಟ್ಟರೆ ಅವನ ಸಾಮಾಜಿಕ ಜೀವನವೂ ಕೆಡುವುದು.

೩.೬ ಸಂಸ್ಕೃತಿ ಮತ್ತು ಸಂಸ್ಕಾರ :

ಸಂಸ್ಕೃತಿಗೂ ಮತ್ತು ಸಂಸ್ಕಾರಕ್ಕೆ ನಿಕಟ ಸಂಬಂಧವಿದೆ. ಸಂಸ್ಕಾರ ನಾನಾ ದಿಕ್ಕುಗಳಿಂದ ನಾನಾ ಮೂಲಗಳಿಂದ ಬರಬಹುದಾದ್ದರಿಂದ ಸಂಸ್ಕೃತಿಯಲ್ಲಿ ಸೇರದ ವಿಷಯಗಳಿಲ್ಲ. ಹಾಗಾಗಿ ಮಾನವ ಜೀವನದ ಎಲ್ಲ ಚಟುವಟಿಕೆ ಮತ್ತು ತಿಳುವಳಿಕೆಯನ್ನು ಸಂಸ್ಕೃತಿಯಲ್ಲಿ ಸೇರಿಸುವ ಆತುರತೆ ಕಂಡು ಬಂದಿತು. ನಿರ್ಧಿಷ್ಟವಾದ ವ್ಯಾಖ್ಯೆಯನ್ನು ಕಟ್ಟಿಕೊಡುವುದು ಕಷ್ಟಸಾಧ್ಯವಾಯಿತು. ಉತ್ಪಾದನಾ ಸಂಬಂಧಗಳ ಆಧಾರದ ಮೇಲೆ ರಚನೆಯಾಗಿ ರೂಪುಗೊಳ್ಳುವ ಬುದ್ಧಿ, ಭಾವಗಳ ಸಂಸ್ಕಾರ ಪ್ರಕ್ರಿಯೆಯೇ ಸಂಸ್ಕೃತಿ ಎಂದು ಗ್ರಹಿಸಬಹುದು.

ಮಾನವನಿಗೆ ಸಂಸ್ಕಾರವನ್ನು ಒದಗಿಸುವ ಎಲ್ಲ ಅಂಶಗಳು ಸಂಸ್ಕೃತಿಯ ತಳಹದಿಯೆ. ಜೀವಕೋಟಿಯಲ್ಲಿ ಒಂದಾಗಿದ್ದ ಮಾನವ ಪ್ರಾಣಿ ವಾನರಾವಸ್ಥೆಯಿಂದ ನರಾವಸ್ಥೆಗೆ ತಲುಪಲು ಮುಖ್ಯ ಕಾರಣ ಸಂಸ್ಕಾರ. ಸಂಸ್ಕಾರ ದುಡಿಮೆಯ ರೂಪದಲ್ಲಿ ಕಾಣಿಸಿಕೊಂಡಿದೆ. ಮಾನವ ಪ್ರಕೃತಿಯು ಬರೆದ ನಿಯಮಗಳನ್ನು ಅರಿತುಕೊಂಡು ತಮ್ಮ ಅನುಕೂಲತೆಗೆ ತಕ್ಕಂತೆ ಬಳಸಿಕೊಳ್ಳಲು ಮಾರ್ಪಡಿಸಿಕೊಳ್ಳಲು 'ದುಡಿಮೆ' ಆಧಾರವಾಯಿತು. ದೊಡ್ಡ ಕಲ್ಲನ್ನು ಸಂಸ್ಕರಿಸಿ ವಿವಿಧ ಬಗೆಯ ಆಯುಧ ಮತ್ತು ಉಪಕರಣಗಳ ಆಧಾರದಲ್ಲಿ ಹಲವು ಶತಮಾನಗಳವರೆಗೆ ಬದುಕು ಮಾಡಿದ್ದನ್ನು ಶಿಲಾಯುಗ ಎನ್ನುತ್ತಾರೆ. ಇಲ್ಲಿಯೇ ಉಪಯುಕ್ತ ಕಲೆಗಳು ಪದ್ಧತಿಗಳ ಅವಿಷ್ಕಾರವಾಯಿತು. ಈ ಹಂತ ಸಂಸ್ಕೃತಿ, ಧರ್ಮ ಹಾಗೂ ದೈನಂದಿನ ಚಟುವಟಿಕೆಗಳ ನಡುವೆ ಬಿಡಿಸಲಾಗದ ನಂಟಿತ್ತು. ನಂತರ ಲೋಹಯುಗ ಬಂದಿತು. ಇಲ್ಲಿಯವರೆಗೆ ನಾಗರಿಕತೆಯ ಜೊತೆಗೆ ಸಂಸ್ಕೃತಿಯು ಬೆಳೆಯುತ್ತಾ ಬಂದಿದೆ.

ಇಲ್ಲಿ ಸಂಸ್ಕೃತಿಯೆಂಬುದು ವ್ಯಕ್ತಿಯ ಸ್ವಭಾವಕ್ಕೆ ಸಂಸ್ಕಾರವನ್ನು ಕೊಡುವ ಶಕ್ತಿ ಎಂಬ ಅರ್ಥವನ್ನು ಪಡೆದಿದೆ. ವೈಯಕ್ತಿಕ ವಿಕಾಸವೇ ಸಂಸ್ಕೃತಿ ಎಂಬ ಮಾತು ಅದನ್ನೇ ಸಮರ್ಥಿಸುತ್ತದೆ. ವ್ಯಕ್ತಿಯ ಮನಸ್ಸಿನ ಮೇಲೆ ಒಂದು ಸಂಸ್ಕಾರವನ್ನುಂಟು ಮಾಡಿ ಆತನನ್ನು ಪರಿಪೂರ್ಣತೆಯೆಡೆಗೆ ನಡೆಯುವಂತೆ ಮಾಡುವುದೇ ಸಂಸ್ಕೃತಿಯ ಪರಮ ಪ್ರಯೋಜನ. ಅದಕ್ಕೆ ಸಹಾಯಕವಾಗುವ ಸಾಧನಗಳೆಲ್ಲವೂ ಸಂಸ್ಕೃತಿಯಲ್ಲಿ ಸಮಾವೇಶಗೊಳ್ಳುತ್ತವೆ. ಧರ್ಮ ಜಿಜ್ಞಾಸೆಯಾಗಲಿ, ಸಂಗೀತ, ಸಾಹಿತ್ಯದ ಕಲೆಗಳಾಗಲಿ ಸಾರ್ಥಕವಾಗಬೇಕಾದರೆ ಅವು ವ್ಯಕ್ತಿಯ ಜೀವನವನ್ನು ಪೂರ್ಣತೆಯತ್ತ ಸಾಗುವಂತೆ

ಮಾಡುವ ಶಕ್ತಿಯನ್ನು ಪಡೆದಿರಬೇಕು. ಅವುಗಳಲ್ಲಿರುವ ಆ ಶಕ್ತಿಯ ಜೊತೆಗೆ ಅವನ್ನು ಅರಿತು ಆಚರಿಸಬಲ್ಲ ಸಂಸ್ಕಾರವು ವ್ಯಕ್ತಿಯಲ್ಲಿದ್ದರೆ ಅವೆರಡರ ಸಂಗಮದಿಂದ ಸಂಸ್ಕೃತಿಯು ನಿಷ್ಪನ್ನವಾಗುತ್ತದೆ. ಪ್ರಾಕೃತಿಕವಾಗಿ ಹುಟ್ಟಿದ ಮನುಷ್ಯ ಸಂಸ್ಕಾರಗಳ ಮೂಲಕ ಸಂಸ್ಕೃತನಾಗುತ್ತಾನೆ.

ಈ ಅರ್ಥದಲ್ಲಿ ಸಂಸ್ಕೃತಿಯು ಧರ್ಮವನ್ನೂ, ಕಲೆಯ ವಲಯವನ್ನೂ ಮೀರಿ ವ್ಯಾಪಕವಾಗಿ ಬೆಳೆಯುತ್ತದೆ. ಅದು ಬಳ್ಳಿಯಲ್ಲಿ ಹೂ ಅರಳಿದಂತೆ ನೀರು ಗೊಬ್ಬರಗಳನ್ನು ಹಾಕಿ, ಆರೈಕೆ ಮಾಡಿ ಬಳ್ಳಿಯನ್ನು ಬೆಳೆಸಬಹುದು. ಆದರೆ ಕೊನೆಯಲ್ಲಿ ಬಿಡುವ ಹೂವು, ಬಳ್ಳಿಯಲ್ಲಿ ಅಂತರ್ಗತವಾಗಿರುವ ಸಂಕಲ್ಪ ಶಕ್ತಿಯಿಂದಲೇ ಅರಳಬೇಕಾದುದು. ಹಾಗೆಯೇ ಸಂಸ್ಕೃತಿ ಎಂಬುದು ಎಲ್ಲ ವಿದ್ಯೆಗಳನ್ನು ಬಳಸಿಕೊಂಡು ಬೆಳೆಯುವ ಸಂಸ್ಕಾರ, ಪರಾಗ ಅನೇಕ ಸಾಮಗ್ರಿಗಳನ್ನು ಹದವರಿತು ಸೇರಿಸಿದ್ದರಿಂದ ಉಂಟಾದ ರಸಪಾಕದ ರುಚಿ. ಅದು ಕೇವಲ ಪಾಂಡಿತ್ಯವಲ್ಲ, ಆ ಪಾಂಡಿತ್ಯದಿಂದ ಜೀವನದ ಮೇಲಾಗಿರುವ ಪರಿಣಾಮವೇ ಸಂಸ್ಕೃತಿ.

೩.೭ ಸಂಸ್ಕೃತಿ ಮತ್ತು ಸೌಂದರ್ಯ :

"ಸೌಂದರ್ಯೋಪಾಸನೆಯೇ ಸಂಸ್ಕೃತಿ" ಎನ್ನಬಹುದು. ಸಂಸ್ಕೃತಿಯ ಪ್ರಭಾವದಿಂದ ಅಭಿರುಚಿ ಉತ್ತಮವಾಗುತ್ತದೆ. ಉದಾತ್ತವಾಗುತ್ತದೆ. ಒಳ್ಳೆಯದನ್ನು ಬಯಸುವುದೂ, ಒಳ್ಳೆಯದನ್ನು ಪ್ರೀತಿಸುವುದೂ ಸಂಸ್ಕೃತಿಯ ಸಲ್ಲಕ್ಷಣ. ಯಾವುದರಲ್ಲಿ ನಾವು ಸೌದರ್ಯವನ್ನು ಕಾಣಲು ಸಮರ್ಥರಾಗುತ್ತೇವೆಯೋ ಅದೇ ನಮ್ಮ ಸಂಸ್ಕೃತಿಯ ಮಟ್ಟವನ್ನು ನಿರ್ಧರಿಸುತ್ತದೆ. ಆನೆಯ ತಲೆ ಮತ್ತು ದಪ್ಪ ಹೊಟ್ಟೆಯನ್ನುಳ್ಳ ಗಣೇಶನ ವಿಗ್ರಹ ಆ ಸಂಸ್ಕೃತಿಯ ಹಿನ್ನೆಲೆಯುಳ್ಳವರಿಗೆ ವಿಕಾರವಾಗಿ ಕಾಣುವುದಿಲ್ಲ. ಅರ್ಥವತ್ತಾಗಿ ಗೋಚರಿಸುತ್ತದೆ. ಕೇವಲ ದೈಹಿಕ ಸೌಂದರ್ಯವನ್ನಷ್ಟೇ ಗುರುತಿಸುವವರು. ಸಾಕ್ರೇಟಿಸ್‌ನ ವಿಕಾರ ವಿಗ್ರಹದಲ್ಲಾಗಲೀ ಅಥವಾ ಗಾಂಧೀಜಿಯ ಬಡಕಲು ಆಕೃತಿಯಲ್ಲಾಗಲೀ ಸೌಂದರ್ಯವನ್ನು ಕಾಣುವುದು ಕಷ್ಟವಾಗುತ್ತದೆ. ಆದರೆ ಅವರ ಸಾಧನೆಗಳನ್ನು ಬಲ್ಲವರಿಗೆ ಅಪೂರ್ವ ಸೌಂದರ್ಯ ಅಲ್ಲಿ ಕಂಗೊಳಿಸುತ್ತದೆ. ಹೀಗೆ ಸೌಂದರ್ಯವೆಂಬುದು ಸಾಪೇಕ್ಷ ಶಬ್ದ, ನಾವು ಬೆಳೆದಂತೆ ಅದು ಬೆಳೆಯುತ್ತದೆ ಅದೇ ನಮ್ಮ ಸಂಸ್ಕೃತಿಗೂ ಸಾಕ್ಷಿಯಾಗಿ ಉಳಿಯುತ್ತದೆ.

೩.೮ ಸಂಸ್ಕೃತಿ ಮತ್ತು ಸಂಸ್ಕೃತೀಕರಣ :

"ವಿಭಿನ್ನ ಸಂಸ್ಕೃತಿಯ ವ್ಯಕ್ತಿಗಳನ್ನುಳ್ಳ ಜನಸಮುದಾಯಗಳ ಪರಸ್ಪರ, ನಿರಂತರ, ಮುಖಾಮುಖಿ ಸಂಪರ್ಕ, ಒಡನಾಟಗಳಿಂದ ಉಂಟಾಗುವ ಪರಿವರ್ತನೆಯೇ ಸಂಸ್ಕೃತೀಕರಣ"೮ ಸಂಸ್ಕೃತೀಕರಣ ಎಂದರೆ ವಿಭಿನ್ನ ಸಂಸ್ಕೃತಿಯುಳ್ಳ ಜನ ಸಮುದಾಯದ ರೀತಿ-ನೀತಿ, ನಡಾವಳಿಗಳನ್ನು ಅನುಸರಿಸಿ ಬೇರೊಂದು ಸಂಸ್ಕೃತಿಯು ತನ್ನ ಜೀವನ ಕ್ರಮದಲ್ಲಿ ಪರಿವರ್ತನೆ ಮಾಡಿಕೊಂಡು ಆ ಸಂಸ್ಕೃತಿಯುಳ್ಳ ಜನರಂತೆ ಬದುಕುವ ಬಗ್ಗೆ ಈ ಪರಿವರ್ತನಾ ಕ್ರಮವನ್ನು ಸಂಸ್ಕೃತೀಕರಣ, ನವೀಕರಣ, ಸುಧಾರಣೀಕರಣ ಎಂಬ ಹೆಸರಿನಿಂದ ಕರೆಯಲಾಗುತ್ತದೆ.

ಸಂಸ್ಕೃತೀಕರಣದ ಅಧ್ಯಯನದ ಇತರ ಆಸಕ್ತಿಗಳೆಂದರೆ ಪರಿವರ್ತನೆಯ ಕ್ರಮಕ್ಕೆ ಸಂಬಂಧಿಸಿದ ಅಂಶಗಳು ನಿದರ್ಶನಕ್ಕೆ ಯಾವುದೊಂದು ಸಂಸ್ಕೃತಿಯಿಂದಲಾದರೂ ಅಂಶಗಳನ್ನು ಸ್ವೀಕರಿಸುವ ಸಂಸ್ಕೃತಿಯು ಸದಾ ಆಯ್ಕೆಯ ಅವಕಾಶವನ್ನು ಪಡೆದುಕೊಂಡಿರುತ್ತದೆ ಎಂದರೆ ಆ ಸಂಸ್ಕೃತಿಯ ಅಂಶಗಳನ್ನು ಇಡಿಯಾಗಿ ಅಥವಾ ಬಿಡಿಯಾಗಿ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಅನುಕರಣ ಸಂಸ್ಕೃತಿಗಿರುತ್ತದೆ. ಸಂಸ್ಕೃತಿಯು ಎಂದೂ ಕಡ್ಡಾಯದ ಬಲವಂತದ ಹೇರಿಕೆ ಆಗುವುದಿಲ್ಲ. ಆದ್ದರಿಂದ ಸಂಸ್ಕೃತಿಯ ಆಯ್ಕೆಯ ಸೌಲಭ್ಯ ಎಲ್ಲರಿಗೂ ಸಿಗುವಂತದ್ದು. ಇದಕ್ಕೆ ನಿದರ್ಶನವಾಗಿ ಭಾರತೀಯ ಸಂಸ್ಕೃತಿಯೊಳಗೆ ಪರ್ಶಿಯ ಸಂಸ್ಕೃತಿ ಮೂಲದ 'ಮೂಗುತಿ' ಆಭರಣ ಪ್ರವೇಶಿಸಿ ನೆಲೆ ನಿಂತಿರುವುದನ್ನು ನೋಡಬಹುದು. ಇಸ್ಲಾಂ ಧರ್ಮದ ಮೂಲಕ ಆಭರಣ ವಿಶೇಷವಾದ ಮೂಗುತಿಯ ಬಳಕೆ ಕ್ರಿ.ಶ. ಹತ್ತನೆಯ ಶತಮಾನಕ್ಕೆ ಹಿಂದೆ ಭಾರತದ ಶಿಲ್ಪ ಚಿತ್ರಗಳಲ್ಲಿ ಅನ್ಯ ಸಾಹಿತ್ಯ ಪುರಾಣಗಳಲ್ಲಿ ಇರುವುದೆಂದು ಆಧಾರಗಳಿಲ್ಲ.

ಬೇಲೂರು, ಹಳೆಬೀಡು, ಖಜುರಾಹೋ, ಕಾನಾರ್ಕ ಮಂದಿರದ ಶಿಲ್ಪಗಳಲ್ಲಿ ಮೂಗುತಿ ಆಭರಣವಿಲ್ಲದಿರುವುದು ಕಾಣುತ್ತದೆ. ಆವರೆಗೆ ಭಾರತಕ್ಕೆ ಬಂದಿಲ್ಲದಿರುವುದು ಗೊತ್ತಾಗುತ್ತದೆ. ಮುಂದೆ ಒಂದು ಕಾಲದಲ್ಲಿ ಸ್ತ್ರೀಯರು ಮೊದಲಿಗೆ ಪ್ಯಾಷನ್ನಿಗಾಗಿ ಮೂಗುತಿಯನ್ನು ಧರಿಸಿರಬೇಕು. ಮುಂದೆ ಅದು ೧೫, ೧೬ ನೇ ಶತಮಾನದಲ್ಲಿ ಹಿಂದೂ ನಾರಿಯರ ಸೌಮಂಗಲ್ಯದ ಪವಿತ್ರ ಆಭರಣದಲ್ಲಿ ಒಂದಾಗಿರುವುದು ತಿಳಿಯುತ್ತದೆ.

ಇತ್ತೀಚೆಗೆ ಇಂಗ್ಲೀಷ್ ಭಾಷೆಯ ಪ್ರಭಾವ ಮತ್ತು ಪಾಶ್ಚಾತ್ಯ ನಾಗರಿಕತೆಯ

ಪರಿಣಾಮಗಳು ನಮ್ಮ ಮೇಲೆ ಎಷ್ಟರಮಟ್ಟಿಗೆ ಆಗಿವೆಯೆಂದರೆ ನಮ್ಮ ಪಾರಂಪರಿಕ ಜೀವನದ ಮೂಲ ಬೇರಿಗೆ ಕೊಡಲಿಪೆಟ್ಟು ಬಿದ್ದಿದೆ ಎನ್ನುವಷ್ಟು ತೀವ್ರ ಆಘಾತವಾಗಿದೆ. ಆದರೂ ನಾವು ಸಂಪೂರ್ಣವಾಗಿ ಪಾಶ್ಚಾತ್ಯರಾಗಿಲ್ಲ. ಇಂತಹ ನಾಗರಿಕತೆಯ ಅಂಶಗಳಲ್ಲಿಯೂ ನಮಗೆ ಆಯ್ಕೆಯ ಸೌಲಭ್ಯಗಳಿವೆ. ಆದ್ದರಿಂದ ಸಂಸ್ಕೃತೀಕರಣ ಕ್ರಿಯೆಯಲ್ಲಿ ಎಲ್ಲ ಬಗೆಯ ಪ್ರಕ್ರಿಯೆಗಳು ಮುಖ್ಯವಾಗುತ್ತವೆ.

೩.೯ ಸಂಸ್ಕೃತಿ : ಸಮೂಹ ಸಾಂಸ್ಕೃತಿಯ ಸಿದ್ಧಾಂತ :

"ಇದೊಂದು ಸಾಂಸ್ಕೃತಿಕ ಅನನ್ಯತಾ ತತ್ವವನ್ನು ಪ್ರತಿಪಾದಿಸುವ ಸಿದ್ಧಾಂತವಾಗಿದೆ. ಪ್ರಚಲಿತ ವಿದ್ಯಮಾನಗಳ ಹಿನ್ನೆಲೆಯಲ್ಲಿ ಸಂಸ್ಕೃತಿಯ ಅನನ್ಯತೆಯ ಗತಿಯನ್ನು ಗುರುತಿಸಲು ಪ್ರಯತ್ನಿಸುತ್ತದೆ"[೯] ಈಗಿನ ಪರಿಸರದಲ್ಲಿ ನಗರ ಪ್ರದೇಶಗಳನ್ನು ಪ್ರಭಾವಿಸುತ್ತಿರುವ ಔದ್ಯೋಗಿಕರಣ, ಸಮೂಹ ಉತ್ಪಾದನೆ ಮತ್ತು ಸಮೂಹ ವೆಚ್ಚ ಸಂಸ್ಕೃತಿ ಹಾಗೂ ಗ್ರಾಮೀಣ ರೈತಾಪಿ ಜನಪರ ಸಂಸ್ಕೃತಿಗಳ ನಡುವೆ ಸಂಘರ್ಷ ಮುಂದುವರೆದಿದೆ. ಕೈಗಾರಿಕಾ ನಾಗರಿಕತೆಯಿಂದ ನಮ್ಮ ವಿಶಿಷ್ಠ ಪರಂಪರೆ ನಾಶವಾಗುತ್ತಿರುವುದನ್ನು ಕಾಣುತ್ತೇವೆ.

ಒಂದು ಆಶಾದಾಯಕ ಸೂಚನೆಯೆಂದರೆ ಜಾನಪದ ಅಧ್ಯಯನಕಾರರು ಹೊಸ ಅರಿವಿನಿಂದ ಸಮೂಹ ಸಂಸ್ಕೃತಿಯನ್ನು ಪರಿಶೀಲಿಸುತ್ತಿದ್ದಾರೆ. ಸ್ವ ಸಮುದಾಯ ಗುಂಪು ಹಾಗೂ ಗ್ರಾಮೀಣ ಜನತೆ ನಗರಗಳಿಗೆ ವಲಸೆ ಬರುತ್ತಿರುವ ಇಂದಿನ ದಿನಗಳಲ್ಲಿ ನಗರ ವಾತಾವರಣಕ್ಕೆ ಹೊಂದಿಕೊಳ್ಳುವ ಎಷ್ಟೇ ಪ್ರಯತ್ನಿಸಿದರೂ ತಮ್ಮ ಗುಂಪು ಪ್ರತ್ಯೇಕತೆಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತಿರುವುದು ಸ್ಪಷ್ಟವಾಗುತ್ತದೆ. ಇದಕ್ಕೆ ಸಮೂಹ ಮಾಧ್ಯಮಗಳಲ್ಲಿ ಪ್ರಸ್ತುತಪಡಿಸಲಾಗುತ್ತಿರುವ ಕಾರ್ಯಕ್ರಮಗಳೇ ಆಧಾರ. ಕೈಗಾರಿಕೀಕರಣ ಮತ್ತು ನಗರೀಕರಣಗೊಂಡ ಪ್ರದೇಶದಲ್ಲಿ ಜನಪರ ಸಂಸ್ಕೃತಿ ಏನೆಲ್ಲಾ ಮಾರ್ಪಾಟು ಮತ್ತು ಬದಲಾವಣೆಗಳನ್ನು ತಂದುಕೊಂಡಿದೆ. ಪ್ರವಾಸೋಧ್ಯಮ, ಸ್ವಯಂ ಸೇವಾ ಸಂಸ್ಥೆಗಳು, ಸಣ್ಣ ಪ್ರಮಾಣದ ಕಲೆಗಳು, ಕುಶಲ ಕೈಕೆಲಸಗಾರರು ನಮ್ಮಷ್ಟೇ ಸೃಷ್ಟಿಯ ಸಾಹಿತ್ಯ ಹಾಗೂ ಆದರ ಸಾಮಾಜಿಕ ಪರಿಣಾಮವನ್ನು ಕಂಡುಕೊಳ್ಳಲು ಸಹಾಯಕವಾಗುತ್ತಾನೆ.

ಜೀವಂತ ಭೂತದಿಂದ ಪ್ರಖರ ವರ್ತಮಾನದವರೆಗೆ ಅದರ ನಿರಂತರತೆಯನ್ನು ಗುರುತಿಸಲು ಸಮರ್ಥನಾಗುತ್ತಾನೆ. ಅವಶೇಷಗಳು ಪಳಿಯುಳಿಕೆಗಳು ಹಾಗೂ ಅಶ್ಲೀಲಯವಾದವುಗಳನ್ನು ಧಿಕ್ಕರಿಸುತ್ತಾನೆ. ನಿನ್ನೆಯ ಶುದ್ಧ ಜನಪದ ಕಲೆ ತನಗೆ ತಾನೆ

ಬಹು ಆಕರ್ಷಕ ರೂಪವನ್ನು ಸಾಧಿಸಿಬಿಡಬಹುದು. ಒಟ್ಟಿನಲ್ಲಿ ಹಳೆಯ ಜಾನಪದ ಅದು ನಮಗೆ ತೋರುವಷ್ಟು ಹಳೆಯದಲ್ಲ ಮತ್ತು ಹೊಸದು ಕಾಣವುದರಕ್ಕಿಂತ ಹಳೆಯದಾಗಿರಬಹುದು. ಈ ಸಂಗತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಸಾಂಸ್ಕೃತಿಕ ವಿಶಿಷ್ಟಾಂಶಗಳನ್ನು ಗುರುತಿಸುವ ಪ್ರಯತ್ನ ಮಾಡಬೇಕಾಗುತ್ತದೆ ಎಂಬುದು ಈ ಸಿದ್ಧಾಂತದ ಆಶೆಯವಾಗಿದೆ.

೩.೧೦ ಸಮಾರೋಪ

ಸಂಸ್ಕೃತಿಯು ಹಂತಹಂತವಾಗಿ ವಿಕಾಸಗೊಳ್ಳುತ್ತದೆ. ಪದರು ಪದರಾಗಿ ಜೀವನವನ್ನು ವ್ಯಾಪಿಸುತ್ತದೆ. ಸಂಸ್ಕೃತಿಯೆಂಬುದು ಅಂತರಂಗದ ವಿಕಾಸ ನಿಜ. ಆ ವಿಕಾಸಕ್ಕೆ ಕಾರಣವಾದ ಸಾಮಾಜಿಕ ಪರಿಕರಗಳು ಅದೂ ಹೌದು. ನುಡಿದಂತೆ ನಡೆಯುವುದೇ ಸಂಸ್ಕೃತಿ ಸಮಾಜದೊಡನೆ ಸಹಬಾಳ್ವೆಯ ಸೌಜನ್ಯದ ಮಾರ್ಗವೇ ಸಂಸ್ಕೃತಿ, ಶೀಲದ ಸೌಭಾಗ್ಯವೇ ಸಂಸ್ಕೃತಿ, ಆತ್ಮ ಶಿಕ್ಷಣವೇ ಸಂಸ್ಕೃತಿ, ಇತ್ಯಾದಿ ಸರಸಕಲೆಗಳೇ ಸಂಸ್ಕೃತಿ ಇವೆಲ್ಲವೂ ನಿಜ. ಈ ಸಹಸ್ರ ಮುಖಗಳನ್ನು ಒಳಗೊಂಡ ವಿರಾಡ್ರೂಪ ಅದರದು. ನಮ್ಮ ಉಡುಗೆ ತೊಡುಗೆಗಳಲ್ಲಿ, ನಡೆ–ನುಡಿಗಳಲ್ಲಿ ಒಟ್ಟಿನಲ್ಲಿ ನಮ್ಮ ಕಾರ್ಯ ಚಟುವಟಿಕೆಯ ಒಂದೊಂದು ಅಂಗುಲದಲ್ಲಿಯೂ ಅದರ ಪ್ರಭಾವ ತೋರಿಬರುತ್ತದೆ. ಈ ಅರ್ಥದಲ್ಲಿ ಕೇವಲ ಬಾಹ್ಯವೆನ್ನಬಹುದಾದ ನಾಗರಿಕತೆಯ ಅಂಶಗಳ ಮೇಲೂ ಇದು ತನ್ನ ಪ್ರಭಾವವನ್ನು ಬೀರದೆ ಬಿಡುವುದಿಲ್ಲ.

ಜನಜೀವನದ ಸಂಸ್ಕೃತಿಗೆ ಅನುಗುಣವಾಗಿ ನಾಗರಿಕತೆಯು ಅಳವಡುತ್ತದೆ. ಹೊರದೇಶಗಳಿಂದ ಯಂತ್ರ ನಾಗರಿಕತೆಯನ್ನು ನಾವು ಆಮದು ಮಾಡಿಕೊಂಡಿದ್ದರೂ ಅದೂ ನಮ್ಮ ಸಂಸ್ಕೃತಿಗೆ ಅನುಗುಣವಾಗಿ ಇಲ್ಲಿ ಬದಲಾವಣೆಯನ್ನು ಪಡೆಯಬೇಕಾಗುತ್ತದೆ. ಇಲ್ಲಿ ಜನರ ಜೀವನ ದೃಷ್ಟಿಗೆ ಅವರ ಮೌಲ್ಯಗಳಿಗೆ ಅನುಗುಣವಾಗಿ ಅಳವಡಬೇಕಾಗುತ್ತದೆ. ಕೆಲವು ವೇಳೆ ಸಂಸ್ಕೃತಿಯ ಪ್ರಭಾವಕ್ಕಿಂತಲೂ ನಾಗರಿಕತೆಯ ಸೆಳೆತವೇ ಪ್ರಬಲವಾಗಿ ಸಂಸ್ಕೃತಿಯ ಮೌಲ್ಯಗಳು ಅದರಲ್ಲಿ ಕೊಚ್ಚಿ ಹೋಗಬಹುದು. ಪ್ರಾಚೀನ ನಾಗರಿಕತೆಗಳಲ್ಲಿ ಇದಕ್ಕೆ ಎಷ್ಟೋ ಉದಾಹರಣೆಗಳನ್ನು ಕಾಣುತ್ತೇವೆ. ಭರತಖಂಡದಲ್ಲಿಯೂ ತಿಕ್ಕಾಟ, ಸಂದಿಗ್ಧ, ಪರಿಸ್ಥಿತಿ ಎಷ್ಟೋ ವೇಳೆ ಬಂದಿದೆ.

ಅಲ್ಲೆಲ್ಲಾ ಸಂಸ್ಕೃತಿಯ ಕೈ ಮೇಲಾಗಿದೆ. ಬದಲಾಗುತ್ತಿರುವ ಜೀವನಕ್ಕೆ ಅದು

ಹೊಂದಿಕೊಳ್ಳಲೇಬೇಕು. ಹೊಂದಿಕೊಂಡಿದೆ. ಆದರೆ ಮೂಲಭೂತವಾದ ಮೌಲ್ಯಗಳಲ್ಲಿ ಸಂಸ್ಕೃತಿಗೆ ಅಂತಿಮ ಜಯ ಲಭಿಸಿದೆ.

ಸಂಸ್ಕೃತಿ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ವರ್ಗಾವಣೆಯಾಗುತ್ತದೆ. ಮಾನವನ ತಿಳುವಳಿಕೆ, ನಂಬಿಕೆ, ವರ್ತನೆ, ನೀತಿ, ಕಲೆ, ಸಾಹಿತ್ಯ, ಭಾಷೆ, ಕಾನೂನು, ಸಂಪ್ರದಾಯ, ದೃಷ್ಟಿಕೋನ, ಮೌಲ್ಯಗಳು, ತಂತ್ರಗಳು, ಮಾನವ ನಿರ್ಮಿತ ವಸ್ತುಗಳು, ಆಲೋಚನೆಗಳು ಇವೆಲ್ಲವೂ ಸೇರಿ ಸಂಸ್ಕೃತಿ ರೂಪುಗೊಳ್ಳುತ್ತದೆ.

ಕೊನೆಯ ಟಿಪ್ಪಣಿಗಳು :

೧. ಕರ್ನಾಟಕ ಸಂಸ್ಕೃತಿಯ ಸಮೀಕ್ಷೆ – ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪುಟ –೬

೨. ವಚನ ಚಳುವಳಿ ಕೆಲವು ಅಧ್ಯಾಯಗಳು – ಡಾ. ಅಶೋಕ ನರೋಡೆ, ಪುಟ–೭೬

೩. ಸಂಶೋಧನೆ – ಡಾ. ಎಂ. ಚಿದಾನಂದಮೂರ್ತಿ, ಪುಟ – ೧೬

೪. ಕರ್ನಾಟಕ ಸಂಸ್ಕೃತಿಯ ಸಮೀಕ್ಷೆ – ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪುಟ – ೧೨

೫. ಕರ್ನಾಟಕ ಸಂಸ್ಕೃತಿಯ ಸಮೀಕ್ಷೆ – ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪುಟ – ೧೮

೬. ಸಮಾಜಶಾಸ್ತ್ರ

೭. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ, ಪುಟ – ೩೯೧

೮. ಜಾನಪದ ಕೈಪಿಡಿ – ಡಾ. ಎಚ್. ಜೆ. ಲಕ್ಕಪ್ಪಗೌಡ, ಪುಟ – ೫೧೫

೯. ಜಾನಪದ ಕೈಪಿಡಿ – ಡಾ. ಎಚ್. ಜೆ. ಲಕ್ಕಪ್ಪಗೌಡ, ಪುಟ – ೫೧೯

೧೦. ಮಹಾಲಿಂಗಲೀಲೆ

ಅಧ್ಯಾಯ – ೪

ಧಾರ್ಮಿಕ ಅಂಶಗಳು

ಅಧ್ಯಾಯ – ೪

ಧಾರ್ಮಿಕ ಅಂಶಗಳು

೪.೧ ಪ್ರವೇಶ :

ಮಾನವನ ಸಾಂಸ್ಕೃತಿಕ ಹಿರಿಮೆಯನ್ನು ಗುರುತಿಸುವ ಸಾಧನಗಳಲ್ಲಿ 'ಧರ್ಮ' ಪ್ರಮುಖವಾದುದು. ಅದರ ಆಚರಣೆಯಲ್ಲಿ ಆಯಾ ಜನಾಂಗಗಳ ಸಂಸ್ಕೃತಿ ಸುಸ್ಪಷ್ಟವಾಗಿ ತೋರಿ ಬರುತ್ತದೆ. ಕನ್ನಡಿಗರ ಬದುಕಿಗೆ ಧರ್ಮವೇ ತಳಹದಿ. ಅದು ಅವರ ಜೀವನದ ಎಲ್ಲಾ ರಂಗಗಳಲ್ಲಿ ಹಾಸುಹೊಕ್ಕಾಗಿ ಅವರ ಸಂಸ್ಕೃತಿಯ ಉದಾತ್ತೀಕರಣಕ್ಕೆ ಕಾರಣವಾಗಿದೆ. ಧರ್ಮದ ಪ್ರಭಾವ ಅವರ ಸಾಹಿತ್ಯದ ಮೇಲೂ ಆಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಕನ್ನಡದ ಶ್ರೇಷ್ಠ ಕವಿಯೆನಿಸಿರುವ ಬಸವಕವಿಯು ತನ್ನ ಕೃತಿಯಲ್ಲಿ ಧಾರ್ಮಿಕ ಅಂಶಗಳನ್ನು ಸಮನ್ವಯಗೊಳಿಸಿರುವುದು ಸಹಜವಾಗಿದೆ.

ಜನತೆಯ ಮೇಲೆ ಯಜಮಾನನಂತೆ ಬಂದು ಕೂರುವ 'ಧರ್ಮ'ಕ್ಕೆ ಅವರ ಸಂಸ್ಕೃತಿಗಳು ತೋರುವ ಪ್ರತಿಕ್ರಿಯೆ ನಾನಾ ಬಗೆಯದು. ಜಾನಪದ ವಾಙ್ಮಯ ಮತ್ತು ಜನರ ಜೀವನ ವಿಧಾನಗಳಲ್ಲಿ ಇದಕ್ಕೆ ಅಸಂಖ್ಯೆ ನಿದರ್ಶನಗಳಿವೆ. ಜನ 'ಸಂಸ್ಕೃತಿ'ಯ ಸಂಪರ್ಕ ಮತ್ತು ಪ್ರಭಾವದಿಂದ 'ಭಕ್ತಿ' ಚಳುವಳಿಯ ರೂಪದಲ್ಲಿ ದೇಶಾದ್ಯಂತ ಕಾಲಕಾಲಕ್ಕೆ ಚಟುವಟಿಕೆಗಳು ಕುತೂಹಲಕಾರಿಯಾಗಿವೆ. ಇವನ್ನು ಧರ್ಮಗಳಿಗೆ ಜನಸಾಮಾನ್ಯರ ಕೆಲವು ಗುಂಪು ತೋರಿದ ಸಮರ್ಥ ಪ್ರತಿಕ್ರಿಯೆಗಳಿಂದಲೇ ಭಾವಿಸಬಹುದು.

ಜನ ಸಂಸ್ಕೃತಿಗಳ ಮೇಲೆ ಧರ್ಮಗಳ ಪ್ರಭಾವವೂ ಕಡಿಮೆಯಿಲ್ಲ. 'ಧರ್ಮ'ಗಳು ಕೆಲವರ ಸಿದ್ಧಾಂತ ಮತ್ತು ಆಚರಣೆಯಾಗಿದ್ದೂ ಆಳುವ ವರ್ಗಗಳ ಬೆಂಬಲದಿಂದ ವ್ಯಾಪಕ ಪ್ರಚಾರ ಪಡೆದವು. ಹೆಚ್ಚೆಚ್ಚು ಅನುಯಾಯಿಗಳನ್ನು ಪಡೆಯುವುದಕ್ಕೆ ಅನೇಕ ತಂತ್ರಗಳನ್ನು ಅನುಸರಿಸುತ್ತಿದ್ದವು. ಜನರು ದೈವಗಳನ್ನು ತಮ್ಮ ಧರ್ಮದಲ್ಲಿ ಸೇರಿಸಿಕೊಳ್ಳುವುದು ಇಂತಹ ಒಂದು ತಂತ್ರ ಬಸವಕವಿಯ ಮಹಾಲಿಂಗಲೀಲೆಯಲ್ಲಿ ಹಲವಾರು ಧಾರ್ಮಿಕ ಅಂಶಗಳಿಂದ ಕೂಡಿದೆ.

೪.೨ ಶ್ರೀ ಚನ್ನವೀರೇಶ :

ಕೃತಿಯ ಪ್ರಾರಂಭದಲ್ಲಿ ಯೋಗಿಜನರು ಸದಾ ಪೂಜಿಸುವ, ಯಾವತ್ತೂ ಜ್ಞಾನಿಸುವ,

ಶಿವನೇ ಆಗಿರುವ ಚನ್ನವೀರೇಶನು ಮೂರು ಲೋಕಗಳನ್ನು ಸಾಕಿ ಸಲುಹಿ ನಮ್ಮನ್ನು ಕಾಪಾಡಲಿ ಎನ್ನುವ ಉದಾತ್ತ ಭಾವನೆಯು ಕವಿಯಲ್ಲಿರುವುದು. ಶಿವನನ್ನು ಪ್ರೇಮದಿಂದ ಬನ್ನಿಸಿ ಮುಕ್ತಿಯನ್ನು ಪಡೆಯುವುದು, ಪಾರ್ವತಿಯನ್ನು ಭಕ್ತಿಯಿಂದ ಪ್ರಾರ್ಥಿಸುವುದು, ವಿಘ್ನಗಳ ನಿವಾರಕ ಶಂಕರ ಸುತನಾಗಿರುವ ವಿಘ್ನೇಶನಿಂದ ಭಕ್ತಿಯ ಮೂಲಕ ಮುಕ್ತಿಯನ್ನು ಪಡೆಯುವುದು, ಷಣ್ಮುಖನನ್ನು ಕೀರ್ತಿಸುವುದು, ವೃಷಭೇಶ್ವರನಿಂದ ಪರಮಾರ್ಥವನ್ನು ಪಡೆಯುವುದು, ಚನ್ನಬಸವೇಶನ ಪಾದಗಳಿಗೆ ನಮಸ್ಕರಿಸಿ ಕಾವ್ಯವನ್ನು ರಚಿಸುವೆನು ಎಂದು ಹೇಳಿರುವುದು ಸಮಾಜದಲ್ಲಿಯ ಜನರು ಪೂಜೆ, ಪ್ರಾಥನೆ, ಪ್ರೇಮ, ಭಕ್ತಿ ಮುಂತಾದ ಗುಣಗಳಿಂದ ಮುಕ್ತಿಯನ್ನು ಪಡೆಯಲು ಉದಾತ್ತ ಗುಣಗಳು ಜನರಲ್ಲಿ ನೆಲೆಸಲಿ ಎಂಬ ಭಾವನೆಗಳನ್ನು ಕಾಣುತ್ತೇವೆ.

ಬೇಡಿಕೊಳ್ಳುವುದು ರಕ್ಷಿಸಲಿ, ಕಾಪಾಡಲಿ, ಭಕ್ತಿಯಲ್ಲಿ ಶ್ರೇಷ್ಠತೆಯನ್ನು ಪಡೆದಿರುವ ಶಿವಶರಣರನ್ನು ಪ್ರಾರ್ಥಿಸಿ ಬಸವಕವಿಯು ಕಾವ್ಯವನ್ನು ರಚಿಸಿರುವುದು ನಾವು ಹೊಸ ಕೆಲಸಗಳ ಪ್ರಾರಂಭದಲ್ಲಿ ಸಂಪ್ರದಾಯಿಕವಾಗಿ ನಾವು ದೇವರನ್ನು ನೆನೆಯುವುದು ನಮ್ಮ ಸಂಸ್ಕೃತಿಯ ಪ್ರತೀಕ ಎಂಬುದನ್ನು ಗುರುತಿಸಿರುವರು.

೪.೩ ಸ್ತುತಿ :

ನಮ್ಮ ಪರಂಪರೆಯಲ್ಲಿ ಸ್ತುತಿ ಶ್ರೇಷ್ಠವಾಗಿದೆ. ನಾವು ಒಳ್ಳೆಯ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಬೇಕಾದರೆ ನಮಗಿಂತ ಶ್ರೇಷ್ಠರಾದ ಗುರುಹಿರಿಯರನ್ನು ಸ್ತುತಿಸುವುದುಂಟು. ಇಲ್ಲಿ ಬಸವಕವಿಯು ತನಗಿಂತ ಮೊದಲಿದ್ದ ಶ್ರೇಷ್ಠ ಕವಿಗಳನ್ನು ಮಹಾಲಿಂಗಲೀಲೆಯ ಪ್ರಾರಂಭದಲ್ಲಿ ಸ್ತುತಿಸಿರುವುದುಂಟು. ಬಾಣ, ಭೋಜ, ಕಾಳಿದಾಸ, ಮಯೂರ, ಕೇಶರಾಜ, ಮಲಯರಾಜರನ್ನು ಧ್ಯಾನಿಸಿರುವುದು ಅವರ ಗುಣ, ಕವಿತಾ ಶಕ್ತಿಯನ್ನು ಕಾವ್ಯದ ವಸ್ತುಗಳೇ ಶ್ರೇಷ್ಠವಾಗಿರುವುದನ್ನು ಗುರುತಿಸಿ ಅವರನ್ನು ಧ್ಯಾನಿಸಿರುವನು.

೪.೪ ವೀರಶೈವ ಕವಿಗಳು :

ಕವಿಯಲ್ಲಿ ಬಸವಕವಿಯು ವೀರಶೈವ ಧರ್ಮವನ್ನು ಕುರಿತು ಹೇಳಿರುವುದು ವಿಶೇಷವಾಗಿದೆ. ಕವಿಗೆ ವೀರಶೈವ ಧರ್ಮದ ಕುರಿತು ವಿಶೇಷ ಆಸಕ್ತಿ ಕೆರಳಿರುವುದನ್ನು ಕಾಣುತ್ತೇವೆ. ಕೃತಿ ರಚನೆಯಲ್ಲಿ ವೀರಶೈವ ಕವಿಗಳಾದ ಪಂಡಿತಾರಾಧ್ಯ, ಹರಿಹರ,

ರಾಘವಾಂಕ, ಕೆರೆಯ ಪದ್ಮರಸ, ಪಾಲ್ಕುರಿಕೆ, ಸೋಮನಾಥ, ಭೀಮಕವಿ, ಮಲ್ಲಣಾರ್ಯ, ಷಡಕ್ಷರದೇವರನ್ನು ಭಕ್ತಿಯಿಂದ ನೆನೆದುಕೊಂಡು ಕೃತಿ ರಚಿಸಿರುವುದು ವೀರಶೈವ ಧರ್ಮದ ಮಹತ್ವವನ್ನು ಎತ್ತಿ ತೋರಿ.

೪.೫ ಗುರುಶಿಷ್ಯ ಸಂಬಂಧ :

ವೇದಕಾಲದಲ್ಲಿ ಗುರುಶಿಷ್ಯರ ಸಂಬಂಧ ಅನ್ಯೋನ್ಯವಾಗಿತ್ತು. ಗುರುವಿನ ಆದೀನದಲ್ಲಿಯೇ ಶಿಷ್ಯ ಎಲ್ಲ ಕಾರ್ಯಚಟುವಟಿಕೆಗಳನ್ನು ಮಾಡಿ ಮುಗಿಸುವುದಾಗಿತ್ತು. ನಂತರ ಶಿಷ್ಯರು ಶ್ರೇಷ್ಠರಾಗಿ ಗುರುವಿನಿಂದ ಹೊಗಳಿಸಿಕೊಳ್ಳುತ್ತಿದ್ದರು. ಇಲ್ಲಿಯೂಕೂಡಾ ತನ್ನ ಗುರುಗಳಾದ ಸೋಲೂರು ಶ್ರೀ ಚನ್ನವೀರೇಶ್ವರನ ಕರುಣೆಯಿಂದ ಶಾಸ್ತ್ರಾಂಗನೆ ಒಲಿದಿರುವಳು. ಆಕೆ ನಾನಾ ವಚನ ರಚನೆಯನ್ನು ತಿಳಿಸಿ ಕವಿತಾಂಗನೆಯನ್ನು ನಿನ್ನ ಕೈಗಿತ್ತಿಹಳು. ಆ ಕವಿತಾಂಗನೆ ನಿಮ್ಮ ಮುಗ್ಧ ಭಾವಕ್ಕೆ ಸೋತು ಮೋಹಿಸಿರುವಳು ಎಂಬ ಮಾತಿನಲ್ಲಿ ವೇದಕಾಲದ ಗುರುಶಿಷ್ಯರ ಸಂಬಂಧ ಕಂಡುಬರುತ್ತದೆ. ತನ್ನ ವಿದ್ಯಾಗುರುಗಳಾದ ಸೋಲೂರು ಶ್ರೀ ಚನ್ನವೀರೇಶ್ವರರ ಕರುಣೆ ಬಸವಕವಿಯ ಮೇಲೆ ಮುಗ್ಧ ಸ್ವಭಾವ ತನ್ನ ಗುರುವಿನ ಮೇಲೆ ಪ್ರಭಾವ ಬೀರಿರುವುದು ಕೃತಿ ರಚನೆಗೆ ಕಾರಣ. ಗುರುಶಿಷ್ಯರ ಸಂಬಂಧ ಅನ್ಯೋನ್ಯವಾಗಿರುವುದನ್ನು ಕಾಣುತ್ತೇವೆ.

೪.೬ ಪೂಜಾರಿಗಳು (ಬ್ರಾಹ್ಮಣರು) :

"ಮುಕ್ಕಳೋದಕದಿಂದೆ ಮಜ್ಜನಂಗೈವುತ್ತ
ಅಕ್ಕರದಿ ತನ್ನ ತಲೆಯೊಳು ಬಿಡದೆ ತಳೆದನಮ
ಎಕ್ಕಿವಕ್ಕಿಯ ಪೂವ ಗೊಂಚಲವ ಧರಿಸುತ್ತ ಮುಗ್ಧಭಕ್ತಿಯ ಪೆರ್ಮೆಯಿಂ
ನೆಕ್ಕಿ ಸವಿನೋಡಿರ್ದ ಚಿಕ್ಕಮೊಲದ ಅಡಿಗೆಯಂ
ಮುಕ್ಕಣ್ಣ ಸವಿಯೆಂದು ನೈವೇದ್ಯಗೊದ್ದುಳಿದ
ಬಿಕ್ಕುವಂ ಖಾತಿಸುವ ಬಿಲ್ಲನಂ ಕಂಡಾಗ ಪೂಜಕರು ಕಡುಕೋಪದಿಂ"[೧]

ಸಮಾಜದಲ್ಲಿ ಪೂಜಾರಿಗಳು ಬ್ರಾಹ್ಮಣರಾಗಿರುತ್ತಿದ್ದರು. ಇವರಿಗೆ ಸಮಾಜದಲ್ಲಿ ಶ್ರೇಷ್ಠ ಸ್ಥಾನಮಾನಗಳಿದ್ದವು. ಇವರನ್ನು ಗೌರವದಿಂದ ಕಾಣುತ್ತಿದ್ದರು. ಇವರು ದೇವಾಲಯಗಳಲ್ಲಿ ಪುರೋಹಿತರಾಗಿರುತ್ತಿದ್ದರು. ದೇವಸ್ಥಾನಗಳಲ್ಲಿ ಪೂಜಾರಿ ಎಂಬ

ವರ್ಣ ಒಂದಿತ್ತು. ದೇವತೆಗಳಿಗೆ ಮಾಂಸದ ಆಹಾರವನ್ನು ನೈವೇಧ್ಯ ಮಾಡಿ ತಂದಾಗ ಅಲ್ಲಿಯ ಪೂಜಾರಿಗಳು ಕೋಪವನ್ನು ಮಾಡಿಕೊಳ್ಳುವುದು ಕವಿಯು ಈ ಘಟನೆಯಿಂದ ದೇವರಿಗೆ ಮತ್ತು ಪೂಜಕರಿಗೆ ಮಾಂಸದ ಅಡಿಗೆ ನೈವೇದ್ಯ ಮಾಡಿದ್ದು. ಸಮಾಜದಲ್ಲಿ ಇದೊಂದು ಅನಿಷ್ಠ ಪದ್ಧತಿ ಎಂಬುದು ಪೂಜಾರಿಗಳಿಗೆ ಮಾಂಸದ ನೈವೇದ್ಯ ಇಷ್ಟವಾಗಿರಲಿಲ್ಲ. ಎಂದು ಬಸವಕವಿಯು ತನ್ನ ಸಮಕಾಲೀನ ಧಾರ್ಮಿಕ ಸಂಸ್ಕೃತಿಯಲ್ಲಿ ದೇವರುಗಳಿಗೆ ಮಾಂಸದ ಅಡಿಗೆ ಹಿಡಿಸುತ್ತಿರಲಿಲ್ಲ. ಆಹಾರ ಧಾನ್ಯಗಳಿಂದ ಮಾಡಿದ ನೈವೇದ್ಯವೇ ಶ್ರೇಷ್ಠವೆಂದು ತನ್ನ ಪರಿಸರದ ಪ್ರಭಾವವನ್ನು ಮತ್ತು ಸಂಸ್ಕೃತಿಯನ್ನು ಪ್ರಸ್ತಾಪಿಸಿರುವನು.

"ಜಿನ್ನರಿಗೆ ಜಿನ್ನಾಲಯದಲ್ಲಿ ವೈಷ್ಣವರಿ
ನಿನ್ನು ವೆಂಕಟಗಿರಿಯ ಮಧ್ಯದಲಿ ಗೋಹತ್ಯ
ವನ್ನು ಮಾಡಿದನ ಗತಿಯಾಗಿರಲಿ ಶೂದ್ರದಿ ಸಕಲ ಜಾತಿಗಳೆಲ್ಲರು
ಬಿನ್ನಣದಿ ನಿಜದೈವ ನೆಲಸಿರ್ಪ ಕ್ಷೇತ್ರದೊಳು
ಚೆನ್ನಾಗಿ ಪಂಚಮಹಾಪಾತಕವನೆಸಗುತ್ತ
ಬನ್ನಬಡುವಾ ಪಾಪ ಮುನ್ನಾಗಲವರಿಂಗೆ ನಿಜಪುರಕೆ ಕುಂದೆಣಿಸಲು"[೨]

೬.೧ **ಗೋಹತ್ಯೆ** : ಸಮಾಜದಲ್ಲಿ ಗೋಹತ್ಯೆ ಮಹಾಪಾಪದ ಕೆಲಸವಾಗಿತ್ತು. ಹಿಂದೂ ಧರ್ಮದ ಸಂಸ್ಕೃತಿಯ ಪ್ರಕಾರ ಬೇಡಿದ್ದನ್ನು ಕೊಡುವ ಕಾಮಧೇನು. ಇದನ್ನು ನಾವು ನಮ್ಮ ಧಾರ್ಮಿಕ ಸಂಸ್ಕೃತಿಯಲ್ಲಿ ಪೂಜಿಸುತ್ತೇವೆ. ಗೋವುಗಳನ್ನು ಸಾಮಾಜಿಕವಾಗಿ ಧಾರ್ಮಿಕವಾಗಿ ಅವುಗಳಿಗೆ ಶ್ರೇಷ್ಠ ಸ್ಥಾನಮಾನಗಳನ್ನು ಕೊಟ್ಟು ಇವುಗಳನ್ನು ಮನೆಯ ಪ್ರವೇಶದಂತಹ ಕಾರ್ಯಕ್ರಮಗಳಿಗೆ ಪೂಜಿಸುವುದುಂಟು. ಇದು ಮನುಷ್ಯನಿಗೆ ಪೌಷ್ಠಿಕ ಆಹಾರವನ್ನು ಒದಗಿಸುತ್ತದೆ. ಗೋವುಗಳನ್ನು ಋಗ್ವೇದದ ಕಾಲದಿಂದಲೂ ಪೂಜಿಸುತ್ತ ಬಂದಿರುವುದು ನಮ್ಮ ಸಂಸ್ಕೃತಿಯ ಪ್ರತೀಕ. ಅದಕ್ಕಾಗಿ ಹಿಂದೆ ಗೋಹತ್ಯೆ ಮಾಡಿದವರನ್ನು ಕಠಿಣ ಶಿಕ್ಷೆ ದಂಡನೆಗೆ ಗುರಿಪಡಿಸಲಾಗುತ್ತಿತ್ತು. ಗೋಹತ್ಯೆ ಸಮಾಜದಲ್ಲಿ ಮಹಾಪಾಪದ ಕೆಲಸವೆಂದು ರೂಢಿಯಲ್ಲಿತ್ತೆಂದು ಕವಿಯು ವಿವರಿಸಿದ್ದಾನೆ.

೬.೨ **ಪಂಚಮಹಾಪಾತಕಗಳು** : ಧಾರ್ಮಿಕ ಕ್ಷೇತ್ರಗಳಲ್ಲಿ ಪೂಜಿತಗೊಳ್ಳುವ ಪಂಚಮಹಾಪಾತಕಗಳು ಬ್ರಹ್ಮಹತ್ಯೆ, ಸುರಪಾನ, ಸ್ವರ್ಣಸ್ತೇಯ, ಗುರುಭಾರ್ಯಗಮನಗಳು

ಶ್ರೇಷ್ಠವಾದವುಗಳು. ಇವುಗಳ ಕುರಿತು ಪಾಪಪುಣ್ಯಗಳ ಕುರಿತು ಬಸವಕವಿಯು ವಿಶಿಷ್ಠವಾಗಿ ಚಿತ್ರಿಸಿ ಇವುಗಳ ಮಹತ್ವವನ್ನು ಸಮಕಾಲೀನ ಚಿತ್ರಣದೊಂದಿಗೆ ವಿವರಿಸಿದ್ದಾನೆ.

೬.೩ ವೇದಗಳು :

"ಸಾಮವೇದಗಳಿಗಿದು ಸಿದ್ಧಾಂತವೇ ಜಗದಿ
ಪ್ರೇಮವೇನಿದು ಯಜುರ್ವೇದಿಗಳ ಗೋತ್ರಕ್ಕೆ
ಸಾಮವೇದಿಗೆ ಪರಮ ಋಗ್ವೇದಿಗಳ ಮತಕೆ ದುಷ್ಕೃತ್ಯಭಾವಿಸುವೊಡೆ
ಭೂಮಿಯೊಳು ದಿವ್ಯಾಥರ್ವಣವೇದಿಗಳಿಯಭಿ
ರಾಮವೇ ಬೋಗಣ್ಣನಾಚಾರವೆಂದೆನುತ
ತಾಮಸದ ಗುಣಿಗಳೆಲ್ಲರು ಕೂಡಿ ಮಾತಾಡುತಿರ್ದಕರೆ ಕೋಪದಿಂದೆ"[೩]

ಸಮಾಜದಲ್ಲಿ ಪೂಜಿಸಲ್ಪಡುವ ವೇದಗಳು ನಮಗೆ ಪ್ರಾಚೀನಕಾಲದ ಸಾಕಷ್ಟು ಮಾಹಿತಿಯನ್ನು ಮತ್ತು ಸಂಸ್ಕೃತಿಯನ್ನು ಬಿಂಬಿಸುತ್ತವೆ. ವೇದಗಳ ಕಾಲದ ಭಕ್ತಿ, ಪೂಜೆ, ಪ್ರಾರ್ಥನೆ, ಶ್ಲೋಕ, ಮಂತ್ರಗಳ ಪಠಣೆ ಮುಂತಾದವುಗಳು ಧಾರ್ಮಿಕ ಸಂಸ್ಕೃತಿಯ ಹಲವಾರು ಮಾಹಿತಿಗಳನ್ನು ನೀಡುತ್ತವೆ. ವೇದಗಳಲ್ಲಿ ನಾಲ್ಕು ಪ್ರಕಾರಗಳು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ ಇವು ತಮ್ಮ ಕಾಲದ ಸಂಸ್ಕೃತಿಕ ಅಂಶಗಳನ್ನು ಬಿಂಬಿಸುತ್ತವೆ. ಇವು ಶ್ರೇಷ್ಠವಾದವುಗಳು ಎಂದು ಬಸವಕವಿಯು ಇವುಗಳ ಮಹತ್ವವನ್ನು ಜನರಿಗೆ ಮನವರಿಕೆ ಮಾಡಿಸಿದ್ದಾನೆ.

೪.೭ ಭಸ್ಮಧಾರಣೆಯ ಮಹತ್ವ :

ಕವಿಯು ಮಹಾಲಿಂಗಮುನಿನಾಥನ ಭಸ್ಮಧಾರಣೆಯ ಮಹತ್ವದ ಕುರಿತು ವಿವರಿಸಿದ್ದಾನೆ.

"ಇಂತಸಮ ಪಾದೋದಕದಿ ಮುಕ್ತಿ ಮಾರ್ಗವಂ
ಸಂತಸದಿ ಹೊಂದಿದರನೇಕರುಂಟೆನ್ನ ಭೊ
ಕಾಂತ ಲಾಲಿಸು ಭಸ್ಮಮಹಿಮೆಯಂ ಮುನ್ನ ಜಮದಗ್ನಿ ಕಸ್ಯಪಗಸ್ತ್ಯರು
ಕಂತುಪಿತ ಕಮಲಭವ ಸುರನಾಥ ಮುಖ್ಯಸುರ
ಸಂತತಿಯು ಭಯಭಕ್ತಿಯಿಂ ಭಸ್ಮವನು ತಳೆದು

ಸಂತತಂ ದೀರ್ಘಾಯುಮಂ ಪಡೆದು ಪಾವನಾತ್ಮಜರಾದರೆಲೆ ಭೂವರಾ"[೪]

"ಚಂದನಂ ಕುಂಕುಮಂ ಕಸ್ತೂರಿ ಮೊದಲಾದ
ಗಂಧಾನುಲೇಪನದ ಸತ್ಫಲಗಳಲ್ಪೆನುತ
ನಿಂದಿಸುತ್ತಿರೆ ಪೇಳ್ವವರ ಕ್ರಿಯಸಾರೋಕ್ತಿ ಭಸಿತಧಾರಣ ಮಹಿಮೆಯ
ಸಂದ ಸಾವಿರಕೋಟಿಯೊಳಗೆಂದು ಸಾರಾಂಶ
ಹೊಂದಲರಿಯವುಯೆಂದು ಮನುಮುನಿಗಳೆಲ್ಲರುಂ
ಚಂದದಿಂದಲಿ ತಳೆದು ಪೂತಾತ್ಮರಾದರೆಲೆ ಪಾಲೋಚಿ ಭೂಕಾಂತನೇ"[೫]

ಬಸವಕವಿಯು ಭಸ್ಮಧಾರಣೆಯನ್ನು ಪಡೆದವರು ಶ್ರೇಷ್ಠರೆನಿಸಿಕೊಂಡಿರುವರು. ಚಂದನ, ಕುಂಕುಮ, ಕಸ್ತೂರಿ, ಗಂಧ, ಇವುಗಳ ಲೇಪನದಿಂದ ಪುಣ್ಯ ಒದಗದು, ಇವುಗಳ ಮಹತ್ವ ಕಡಿಮೆ. ನೋಡುಗರ ದೃಷ್ಟಿಯಲ್ಲಿ ಆತ ಪೂಜ್ಯನೀಯನೆನಿಸಬಹುದು. ಆದರೆ ಲೇಪನದಿಂದ ಯಾವುದೇ ಪುಣ್ಯ ಒದಗದೆಂದು ಸಾವಿರಕೋಟಿಯೊಳಗೆ ಒಂದಂಶದಷ್ಟು ಪುಣ್ಯ ಬರುವುದಿಲ್ಲವೆಂದು ವಿವರಿಸಿದ್ದಾನೆ. ಆದರೆ ಭಸ್ಮಧಾರಣೆಯಿಂದ ಜಮದಗ್ನಿ, ಕಸ್ಯಪ, ಅಗಸ್ತ್ಯ, ಕಂತುಪಿತ, ಕಮಲಭವ, ಮೊದಲಾದ ಮಾನವರೆಲ್ಲರೂ ಭಸ್ಮಧಾರಣೆಯಿಂದ ದೀರ್ಘಾಯುವನ್ನು ಪಡೆದಿರುವರು. ಸಂಪ್ರದಾಯದ ಪ್ರಕಾರ ನಮ್ಮ ಸಂಸ್ಕೃತಿಯು ಉನ್ನತಮಟ್ಟಕ್ಕೇರಲು ಭಸ್ಮಧಾರಣೆಯಂತ ಕೆಲಸ ಕಾರ್ಯಗಳು ನಡೆಯಬೇಕು. ಇದರ ಮೂಲಕ ಉನ್ನತ ಸಂಸ್ಕೃತಿಯನ್ನು ಹುಟ್ಟುಹಾಕಲು ಭಸ್ಮಧಾರಣೆಯು ಅವಶ್ಯಕವೆಂದು ವಿವರಿಸಿದ್ದಾನೆ.

೪.೮ ಒಡ್ಡೋಲಗ :

ಶಿವನ ಕಾರ್ಯಚಟುವಟಿಕೆಯ ಪ್ರಮುಖ ಕೇಂದ್ರಸ್ಥಾನವಿದು. ಇದಕ್ಕೆ ಧರ್ಬಾರುಸ್ಥಳ ಅಥವಾ ಸಭೆ ಎಂದು ಕರೆಸಿಕೊಳ್ಳುವುದು ಒಡ್ಡೋಲಗದ ಸಭಾಮಂಟಪದ ಮಧ್ಯದಲ್ಲಿ ಪರಮಾತ್ಮನ ಪರಮ ಸಿಂಹಾಸನವು ಸೂರ್ಯನ ಪ್ರಭಾಕಿರಣ, ಚಂದ್ರನ ಶೀತಲ ಕಿರಣಗಳಿಂದ ಶೋಭಿಸುತ್ತಿತ್ತು.

೮.೧ ಸಭಾಮಂಟಪದಲ್ಲಿರುವ ಗಣ್ಯರು : ಸಿಂಹಾಸನದ ಮೇಲೆ ಶಿವನು ತನ್ನ ಪ್ರಾಣಕಾಂತೆಯಾದ, ಲೋಕಮಾತೆಯಾದ ಗಿರಿಜೆಯೊಡನೆ ಆನಂದಭರಿತನಾಗಿ ಕುಳಿತಿರುವನು.

ಸಿಂಹಾಸನದ ಬಲ ಎಡಗಳಲ್ಲಿ ಶ್ರೀವಿಷ್ಣು ಬ್ರಹ್ಮಾದಿಗಳು, ಇಂದ್ರ, ವರುಣ, ಅಗ್ನಿ, ಮಾರುತ ಮೊದಲಾದಿ ಅಷ್ಟಾದಿಕ್ಪಾಲಕ, ದೇವಾನು ದೇವತೆಗಳು. ಸೂರ್ಯ, ಚಂದ್ರ, ಯಕ್ಷ, ಗಂಧರ್ವ, ಕಿನ್ನರ, ಕಿಂಪುರುಷರು, ಗರುಡರು ಸಭಾಮಂಟಪದಲ್ಲಿರುವುದರಿಂದ ಸಭಾಮಂಟಪವು ಶೋಭಿಸುತ್ತಿತ್ತು.

೮.೨ ದಂಡಧಾರಿಗಳು : ಸಭಾಮಂಟಪದಲ್ಲಿ ಇವರು ಶಿಸ್ತನ್ನು ಕಾಯ್ದುಕೊಳ್ಳುತ್ತಿದ್ದರು. ಶಿವನ ದರ್ಬಾರಿನಲ್ಲಿ ನಂದಿ, ಮಹಾಕಾಳರೆಂಬ ದಂಡಾಧಿಕಾರಿಗಳು ನೆರೆದ ಸಕಲ ಸಭಿಕರನ್ನು ಕೇವಲ ಕಣ್‌ಸನ್ನೆಯಿಂದಲೇ ಶಾಂತವಾಗಿ ಕೂಡ್ರಿಸುವರು. ಸಭೆಗಳಲ್ಲಿ ಪ್ರತ್ಯೇಕ ಶಿಸ್ತಿಗೋಸ್ಕರ ಅಧಿಕಾರಿಗಳಿರುವುದು ಸಭೆಯಲ್ಲಿ ಸಾಕಷ್ಟು ವಾದವಿವಾದ ಚರ್ಚೆಗಳು ನಡೆಯುತ್ತಿರುವುದು ಕಂಡುಬರುತ್ತದೆ.

೮.೩ ನಾರದರು : ಶತಕೋಟಿ ಸೂರ್ಯಪ್ರಭೆಯಂತೆ ಹೊಳೆಯುವ ಶರೀರವುಳ್ಳವನು ತ್ರಿಲೋಕ ಸಂಚಾರಿಯೆಂದು ಕರೆಸಿಕೊಳ್ಳುವ ಸಕಲ ಲೋಕಗಳ ಕಲ್ಯಾಣ ಬಯಸುವ ಶ್ರೀಮನ್ ನಾರಾಯಣನ ಭಕ್ತನಾಗಿರುವವನೇ ನಾರದರು.

ಇವರು ಶೋಭಿಸುವ ಶಿವನ ಸಭಾಮಂಟಪಕ್ಕೆ ಬಂದು ಅನನ್ಯ ಭಯ ಭಕ್ತಿಯಿಂದ ಶಿವನನ್ನು ಮತ್ತು ಗಿರಿಜೆಯ ಚರಣಗಳಿಗೆ ನಮಸ್ಕರಿಸಿದನು. ಇಲ್ಲಿ ತನಗಿಂತ ದೊಡ್ಡವರಿಗೆ ಗಣ್ಯರಿಗೆ ಗೌರವದ ಪ್ರತೀಕವಾಗಿ ನಮಸ್ಕರಿಸುವುದು ಇಂತಹ ಸಂಸ್ಕೃತಿ ಪರಂಪರಾಗತವಾಗಿ ಬಂದಿದೆ.

ಬಂದಂತಹ ಅತಿಥಿಯನ್ನು ಬರಮಾಡಿಕೊಳ್ಳುವುದ ನಮ್ಮ ಶ್ರೇಷ್ಠ ಸಂಸ್ಕೃತಿಯಾಗಿದೆ. ಒಡ್ಡೋಲಗದ ಸಮಯದಲ್ಲಿ ಬಂದಂತಹ ನಾರದರನ್ನು ಶಿವನು ಆತ್ಮೀಯತೆಯಿಂದ ಬರಮಾಡಿಕೊಂಡು ಆತನ ಮೈದಡವಿ ಬಂದ ಕಾರಣವನ್ನು ಸಂತೋಷದಿಂದ ಕೇಳಿರುವುದು ಅತಿಥಿಸತ್ಕಾರದ ಕುರಿತು ತಿಳಿಯಪಡಿಸುತ್ತದೆ.

೪.೯ ವೀರಶೈವಧರ್ಮದ ಉದ್ಧಾರ :

ಶಿವನು ನಾರದರನ್ನು ಸಭೆಗೆ ಬಂದ ಕಾರಣವನ್ನು ಕೇಳಿದಾಗ ದೇವದೇವ ನಾನು ಕರ್ನಾಟಕ ದೇಶದಿಂದ ಬಂದಿರುವೆನು. ಅಲ್ಲಿ ಗುರು-ಲಿಂಗ-ಜಂಗಮರ ಭಕ್ತಿ ಇಲ್ಲದಾಗಿದೆ. ಶಿವಜ್ಞಾನಿಗಳು ಪುಣ್ಯಾತ್ಮರು ಇಲ್ಲರಾಗಿರುವರು. ಇಂತಹ ಹೀನ ಸ್ಥಿತಿಯನ್ನು

ಕಂಡು ಭೂಮಾತೆಯು ದಿಕ್ಕು ಕಾಣದೆ ಪರಿತಪಿಸುತ್ತಿದ್ದಾಳೆ. ದೇವನೆ ಹೀನ ಸ್ಥಿತಿಯನ್ನು ತೊಲಗಿಸಿ ಉದ್ಧರಿಸಲು ಲಿಂಗ, ಗುರು, ಜಂಗಮ, ಪ್ರಸಾದ, ಪಾದೋದಕ, ಪಂಚಾಕ್ಷರಿ ಮಂತ್ರ, ವಿಭೂತಿ, ರುದ್ರಾಕ್ಷಿ ಇತ್ಯಾದಿಗಳ ಮಹಿಮೆಯನ್ನು ತಿಳಿಸಲು ನೀನೇ ಉಪಾಯಮಾಡಿ ಅನುಗ್ರಹಿಸು ಎಂದು ಬೇಡಿಕೊಂಡರು.

ಶಿವನು ನಾರದ ಮಾತನ್ನು ಆಳಿಸಿ ಆನಂದದಿಂದ ನಿನ್ನಾಸೆಯು ಫಲಿಸುವುದು ಎಂದು ತಿಳಿಸಿ ಶಿವನು ತನ್ನ ಪರಮ ಭಕ್ತರಾದ ನಂದಿ, ಮಹಾಕಾಳಿ ಮೊದಲಾದವರಿಗೆ ಅಪ್ಪಣೆ ಮಾಡಿದನು.

"ಜೈನ ಚಾರ್ವಾಕಾದಿ ಪಾಷಂಡಿಗಳು ಬಿಡದೆ
ಮೌನದಿಂದಿರ್ಪ ನಿಜಭಕ್ತರನು ದೋಷಿಪರ್
ದಾನಧರ್ಮ ವಿಚಾರ ವರಸತ್ಯ ಸಾಧುಗಳನಣಕಿಪರು ಪಾಪಾತ್ಮರು
ಧ್ಯಾನಧಾರಣ ಮುಖ್ಯ ಯೋಗಿಗಳ ಸಾಧಿಸುವ
ಧ್ಯಾನಸ್ಥರನು ಕಂಡು ಕರುಬದಿಂ ಸೈರಿಸರ್
ನಾನೆಂಬ ಭ್ರಾಂತಿಯಿಂದೊಡಗೂಡಿ ಬಾಳುವರ್ ಬಾತಿಂದುದರ ಶಂಕರ"[೬]

ಭೂಲೋಕದ ಕರ್ನಾಟಕದಲ್ಲಿ ಜೈನ ಧರ್ಮದವರು ಹಾಗೂ ದೇವರಲ್ಲಿ ನಂಬಿಕೆ ಇಲ್ಲದವರು ಶಿವಭಕ್ತರನ್ನು ಅನಕಿಸುತ್ತಿದ್ದಾರೆ. ಅವರ ತೊಂದರೆ ಶಿವಭಕ್ತರಿಗೆ ಅತಿಯಾಗಿದೆ. ಆದ್ದರಿಂದ ಅಲ್ಲಿ ನೀನು ಶಿವಭಕ್ತಿ ಅಧಿಕವಾಗುವ ಹಾಗೆ ಮಾಡಬೇಕೆಂದು ಶಿವನಲ್ಲಿ ನಾರದರು ಬೇಡಿಕೊಂಡರು.

ಮೇಲಿನ ಪದ್ಯವನ್ನು ಅವಲೋಕಿಸಿದರೆ ಮಹಾಲಿಂಗಪುರವನ್ನು ಬಿಟ್ಟು ತನ್ನ ಸುತ್ತಲಿನ ಪ್ರದೇಶದಲ್ಲಿ (ಊರುಗಳಲ್ಲಿ) ಜೈನಧರ್ಮಿಯರ ಸಂಖ್ಯೆ ಅಧಿಕವಾಗಿರುವುದು. ನಾರದರ ಮೂಲಕ ಹೇಳಿಸಿದ ಕವಿಯ ಮಾತಿಗೆ ಪುಷ್ಠಿಕೊಡುತ್ತದೆ.

ನಾರದರ ಮಾತಿನಿಂದ ನಾನು ಈ ಹಿಂದೆ ಪಂಚವಿಶಂತಿ ಲೀಲೆಗಳನ್ನು ಮೀರಿದಂತೆ ಪವಿತ್ರ ಜಂಗಮ ವೇಷಧಾರಿಯಾಗಿ ಅವತರಿಸಿ ನಾನಾ ಶಿವಲೀಲೆಗಳನ್ನು ಮೆರೆದು ಜನರಲ್ಲಿ ಶಿವಭಕ್ತಿಯನ್ನು ಬಿತ್ತು ಜನರನ್ನು ದುರ್ವಾರ್ಗದಿಂದ ಸನ್ಮಾರ್ಗದತ್ತ ಮುನ್ನಡೆಸುವುದು ತುಂಬಾ ಅಗತ್ಯವಾಗಿದೆ "ಎಂದಾಗ ತನ್ನಿನಿಯನ ಮಾತನ್ನು ಪಾರ್ವತಿಯು

ಕೇಳಿ ಆ ಪವಿತ್ರ ಜಂಗಮನ ಮಹಿಮೆಯನ್ನು ಲೋಕವು ಅರಿಯುವಂತೆ ಈ ಕೂಡಲೇ ನಿರೂಪಿಸಬೇಕು ಎಂದು ಪ್ರಾರ್ಥಿಸಿಕೊಂಡಳು".

ನಾವು ಶಿವಪಾರ್ವತಿಯರಲ್ಲಿ ಲಿಂಗ ಪೂಜೆ, ಭಕ್ತಿ, ಪಂಚಾಕ್ಷರಿಮಂತ್ರ, ಜಂಗಮರ ಪ್ರಾಮುಖ್ಯತೆ ಹೆಚ್ಚಾಗಲು ಪೂರ್ಣ ಸಹಮತದೊಂದಿಗೆ ವೀರಶೈವ ಧರ್ಮ ಉನ್ನತ ಸ್ಥಾನಕ್ಕೇರಲು ತಕ್ಷಣವೇ ಕ್ರಮಕೈಗೊಂಡಿರುವುದು ವೀರಶೈವಧರ್ಮದ ಪ್ರಖ್ಯಾತಿಯೇ ಎಂದು ಹೇಳಬಹುದು.

ಶಿವನು ನಂದೀಶನ ಮುಖಮಂಡಲ ನೋಡಿ ಆತನ ಹೃದಯಕಮಲ ಅರಳಿತು. ಜಂಗಮವೇ ದಿವ್ಯಶರೀರ ಧರಿಸಿ ಶಿವನ ಮುಂದೆ ನಿಂತಿತು. ಶಿವನು ಅವನಿಗೆ ಮಹಾಲಿಂಗನೆಂದು ನಾಮಕರಣ ಮಾಡಿ ಶಿವಭಕ್ತರ ಕಷ್ಟಗಳನ್ನು ಕರಗಿಸಿ ಅವರನ್ನು ಉದ್ಧರಿಸಿ ಭೂಲೋಕವನ್ನು ಶಿವಲೋಕವನ್ನಾಗಿ ಪರಿವರ್ತಿಸಲು ಅಪ್ಪಣೆ ಮಾಡಿದನು. (ಆ ವೀರಶೈವ ಷಟಸ್ಥಲಬ್ರಹ್ಮ ಜಂಗಮವನ್ನು ಪರಶಿವನು ಮೈದಡವುತ್ತ "ನಾಮರೂಪಕ್ರಿಯೆಂದೊಡಗೂಡಿದ ನೀನೇ ನಮ್ಮ ಚೇತನ ಮೂರ್ತಿ" ಎಂದು)

ಅನ್ಯಮತಗಳ ಹಾವಳಿಯಿಂದ ತುಂಬಿದ ಆ ನಾಡಿನಲ್ಲಿ ಗುರು, ಲಿಂಗ, ಜಂಗಮ ಭಕ್ತಿಯನ್ನು ಪ್ರಕಟಿಸು ಎನ್ನುವುದರಲ್ಲಿ ಅನ್ಯಮತಗಳ ಪ್ರಭಾವ, ಮತ ಮತಗಳ ನಡುವೆ ಸಾಮರಸ್ಯ ಇಲ್ಲದಿರುವುದು. ಕೆಟ್ಟುಹೋಗಿರುವ ಸಮಾಜದ ಜನಸಮೂಹದಲ್ಲಿ ಭಕ್ತಿಯನ್ನು ಸ್ಮರಿಸುವಂತೆ ಮಾಡು ಅವರನ್ನು ಸನ್ಮಾರ್ಗದಲ್ಲಿ ನಡೆಸಿ ಕರ್ನಾಟಕದೇಶದ ಜನತೆಯ ಮನಸ್ಸು, ಹೃದಯಕಮಲಗಳು ಅರಳಿ ವಿಶಾಲಮನಸ್ಸು ನೆಲೆಸಿ ಪೂಜೆ ಪುನಸ್ಕಾರಗಳಿಂದ ಮುಕ್ತಿಯನ್ನು ಪಡೆದುಕೊಳ್ಳಲಿ ಎಂದು ಕವಿಯ ಆಶಯವನ್ನು ಗುರುತಿಸುತ್ತೇವೆ. ಸೂರ್ಯನ ಪ್ರಖರ ಕಿರಣಗಳೆದುರಿಗೆ ಮಂಜುಗಡ್ಡೆ ಕರಗುವಂತೆ ದುಷ್ಟರು ಸರ್ವನಾಶಹೊಂದುವರು. ಸೂರ್ಯನ ಎದುರು ಕತ್ತಲೆ, ಸಿಂಹದ ಎದುರು ಪ್ರಾಣಿಗಳು ನಿಲ್ಲದ ಹಾಗೆ ನಿನ್ನೆದುರು ಪಾಪಾತ್ಮರು ನಿಲ್ಲಲಾರರು. ನಾನು ನಿನಗೆ ಗುರು, ಲಿಂಗ ಜಂಗಮವಾಗಿ ಒಲಿದಿದ್ದೇನೆ ಎಂದು ಶಿವನ ಅಭಯವಿಡಲು ಮಹಾಲಿಂಗನು ಪ್ರಮಥರಿಗೆ ನಮಸ್ಕರಿಸಿ ಬೀಳ್ಕೊಂಡು ಭೂಲೋಕಕ್ಕೆ ಬರುವನು.

ಶ್ರೀ ಮಹಾಲಿಂಗೇಶ್ವರರು ಶಿವನಿಂದ ಆಶೀರ್ವಾದ ಪಡೆದು ತನ್ನ ನಾಡಿನಲ್ಲಿ ಎಲ್ಲಿ ಅಧರ್ಮದ ಕಾರ್ಯಗಳು ನಡೆಯುತ್ತವೆಯೋ ಅಂತಹ ಸಂದರ್ಭದಲ್ಲೆಲ್ಲಾ ದುಷ್ಟರನ್ನು

[illegible]

ಶಿಕ್ಷಿಸಿ ಶಿಷ್ಟರನ್ನು ರಕ್ಷಿಸುವುದಕ್ಕಾಗಿ ದೈವದ ಅವತಾರ ಆಗುತ್ತಿರುತ್ತದೆ ಎಂಬ, ಶ್ರೀಕೃಷ್ಣನ ಮಾತು ನೂರಕ್ಕೆ ನೂರರಷ್ಟು ಸತ್ಯ ಎಂಬ ಮಾತನ್ನು ಸ್ಪಷ್ಟೀಕರಿಸುತ್ತದೆ. ಮಹಾಲಿಂಗೇಶ್ವರರು ವೀರಶೈವ ಧರ್ಮವನ್ನು ರಕ್ಷಿಸುವುದಕ್ಕಾಗಿ ದೈವದ ಅವತಾರವನ್ನು ತಾಳಿ ಭೂಲೋಕಕ್ಕೆ ಬರುವರು.

೯.೧ ಪುಣ್ಯಕ್ಷೇತ್ರಗಳು :

"ವರ ಕಾಶಿ ರಾಮೇಶ್ವರಂ ವಿಂಧ್ಯ ಮಾಧವಂ
ನಿರುತ ಹೈಮಾಚಲಂ ನೈಮಿಷಾರಣ್ಯ ಶ್ರೀ
ಗಿರಿ ದಾರುಕಾಕ್ಷೇತ್ರಮಿಂದ್ರಕೀಲಾಚಲಂ ಅರುಣಾದ್ರಿ ಶಿವಗಂಗೆಯ
ಪರಮ ಪಂಚಕ್ಷೇತ್ರ ಮಥುರಾಪುರಂ ಕಂಚಿ
ಸ್ಥಿರಕಾಳಹಸ್ತಿ ಗೋಕರ್ಣಮುಳಿವಾದ್ಯಸಮ"[೭]

ಶ್ರೀ ಮಹಾಲಿಂಗೇಶ್ವರರು ಭರತಖಂಡದ ಗೌಳ, ದ್ರಾವಿಡ ಮೊದಲಾದ ದೇಶಗಳ ಶ್ರೀಕ್ಷೇತ್ರಗಳನ್ನು ಸಂದರ್ಶಿಸಿದರು. ನಂತರ ಪುಣ್ಯಕ್ಷೇತ್ರಗಳಾದ ಕಾಶಿ, ರಾಮೇಶ್ವರ, ಅರುನಾದ್ರಿ, ಶಿವಗಂಗೆ, ಉಳವಿ, ಗೋಕರ್ಣ, ದ್ವಾರಕಾ ವೀರಶೈವಧರ್ಮದ ಪವಿತ್ರ ಸ್ಥಳಗಳು. ಪ್ರತಿದಿನವೂ ಪೂಜೆ, ಭಕ್ತಿ, ಪ್ರಾರ್ಥನೆಗಳಿಂದ ಶೋಭಿಸುತ್ತಿರುವ ಕ್ಷೇತ್ರಗಳನ್ನು ಸಂದರ್ಶಿಸಿರುವುದು ಧರ್ಮದ ಉದ್ಧಾರದ ಉನ್ನತ ಮೆಟ್ಟಿಲುಗಳೆನ್ನಬಹುದು.

೯.೨ ಪವಿತ್ರ ನದಿಗಳು :

"ಸುರಗಂಗೆ ಯಮುನಾ ಸರಸ್ವತಿಯ ಭೀಮಾರತಿ
ನರುಮದೆಯು ಗೋದೆ ನಿರುಪಮಕೃಷ್ಣೆ ಕಾವೇರಿ
ವರ ವರದೆ ಗಾರ್ಘ್ಯಘನ ಮಲಪ್ರಹರಿ ತುಂಗೆ ಮುಂತಾದಸಮ ನದ್ಯಂಗಳ
ಪರಿಕರಂಗಳನಂಫ್ರೀ ಸ್ಪರ್ಶನದ ಮಾತ್ರದಿಂ
ಕರುಣದಿಂ ಪಾನನಂಗೈವುತ್ತ ಮಹಾಲಿಂಗ
ಹರುಷದಿಂ ಸಂಚರಿಸುತಿರುತಿರ್ದಗಿರಿಜಾತೆ ಲಾಲಿಪುದು ಸಂತಸದೊಳು"[೮]

ಶ್ರೀ ಮಹಾಲಿಂಗ ಮುನಿನಾಥರು ಭಾರತದ ಪವಿತ್ರ ನದಿಗಳಾದ ಗಂಗಾ, ಯಮುನಾ, ಸರಸ್ವತಿ, ತುಂಗಭದ್ರಾ, ನರ್ಮದಾ, ಗೋದಾವರಿ, ಕೃಷ್ಣಾ, ಕಾವೇರಿ, ಮಲಪ್ರಭಾಗಳಲ್ಲಿ ಸ್ನಾನ ಮಾಡಿದರು. ಇವು ಹಿಂದೂ ಧರ್ಮದ ಪವಿತ್ರ ನದಿಗಳಲ್ಲಿ ಸ್ನಾನ, ಜಪತಪಗಳನ್ನಾಚರಿಸಿ

ಧರ್ಮದ ಉದ್ಧಾರದ ಮೂಲಕ ಜನರನ್ನು ಪರಿವರ್ತಿಸಿದರು. ಈವತ್ತು ಲಕ್ಷಾಂತರ ಜನರು ವಿವಿಧ ಕಡೆಗಳಿಂದ ಬಂದು ಪುಣ್ಯಸ್ನಾನ ಮಾಡಿ ಪವಿತ್ರರಾಗುತ್ತಿರುವುದು ಧರ್ಮದ ಉದಾತ್ತ ಬೆಳವಣಿಗೆಯಾಗಿದೆ.

೯.೩ **ಲಿಂಗಗಳ ಪ್ರತಿಷ್ಠಾಪನೆ :** ಮಹಾಲಿಂಗೇಶ್ವರರು ಗಾರ್ಘ್ಯತಟನಿತಟದಲ್ಲಿ 'ತಟೇಶ್ವರ'ನೆಂಬ ಲಿಂಗವನ್ನು ಪ್ರತಿಷ್ಠಾಪಿಸಿದರು. ಗೋರಕ್ಷೆ ಪಟ್ಟಣದ ಜಿನಾಲಯದಲ್ಲಿ ಗೋಳಕೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದರು. ಗೋರಕ್ಷಕ ಪಟ್ಟಣದ ಗೋಳಕೇಶ್ವರ ಲಿಂಗ ಹೆಸರೇ ಸೂಚಿಸುವಂತೆ ವಿರಶೈವ ಧರ್ಮ ಪೂಜಿಸುವ ಪವಿತ್ರ ಪ್ರಾಣಿ ಶಿವನ ಶ್ರೇಷ್ಠ ವಾಹನನೆಂದು ಹೆಸರಾಗಿದೆ.

೪.೧೦ ಅಷ್ಟಾವರಣ ಮಹತ್ವ :

ಇಲ್ಲಿ ವೀರಶೈವ ಧರ್ಮದ ಮಹತ್ವದ ಕುರಿತು ಕವಿ ಶ್ರೀ ಮಹಾಲಿಂಗ ಜಂಗಮನ ಭಿನ್ನಹದ ಮೇರೆಗೆ ಯೋಗಿ ಗುರುಲಿಂಗೇಶನು ಅಷ್ಟಾವರಣಗಳ ಮಹಿಮೆಯನ್ನು ಹೇಳಿಸಿದಂತಿದೆ. ಅಷ್ಟಾವರಣಗಳು ಗುರುಲಿಂಗೇಶ್ವನ ಮುಖಾಂತರ ಹೇಳಿಸಿದ್ದಾನೆ.

ಅಷ್ಟಾವರಣಗಳಾದ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಇವು ಸಮಾಜದಲ್ಲಿ ಎಲ್ಲ ಜನರು ಇವುಗಳನ್ನು ಪಾಲಿಸುವುದರ ಮೂಲಕ ತಮ್ಮಲ್ಲಿರುವ ಅಜ್ಞಾನ, ದೋಷಗಳು ನಿವಾರಣೆಯಾಗಿ ಅವರನ್ನು ಶ್ರೇಷ್ಠ ವ್ಯಕ್ತಿಗಳನ್ನಾಗಿ ಹೊರಹೊಮ್ಮಿಸುತ್ತವೆ. ಇವುಗಳು ಎಲ್ಲ ಮನುಷ್ಯರ ಮನಸ್ಸನ್ನು ತಿಳಿಗೊಳಿಸಿ ಅವರಲ್ಲಿ ಶಾಂತಿ ಭಕ್ತಿಯ ಬೀಜವನ್ನು ಬಿತ್ತುತ್ತವೆ.

"ಧರೆಯೊಳಗೆ ದುಷ್ಕುಲಜರಾದ ಮುನಿಗಳು ಬಿಡದೆ
ಪರಮ ಗುರುವಾದ್ಯಷ್ಟವರ್ಣಗಳ ನೆರೆನಂಬಿ
ಪರಿಪೂತರಾಗಿ ತ್ರೈಭುವನ ಪೂಜಿತರಾದರೇನೆಂದು ಬಣ್ಣಿಸುವೆನು
ವರವಶಿಷ್ಟಮುನೀಶ ಸರ್ವವಲ್ಲಭೆಗೆ ಘನ
ತರುಳನಾಗಂದುದಿಸಿ ಶೈವದುಪದೇಶದಿಂ
ದುರಿತ ಮಾರ್ಗವನ್ನಳಿದು ಸರ್ವ ಮುನಿವರನಾಗಿ ನೆರೆ ಮೆರೆದನೀ ಜಗದೊಳು"[7]

ಭೂಮಿಯ ಮೇಲಿದ್ದ ದುಷ್ಟಲಜ ಮುನಿಗಳಾದ ವಶಿಷ್ಟ, ವಿಶ್ವಾಮಿತ್ರ, ಗೌತಮ,

ರೋಮಜ, ವಾಲ್ಮೀಕಿ, ಭಾರದ್ವಜ, ಮಾಂಡವ್ಯ, ವ್ಯಾಸ ಮೊದಲಾದ ಋಷಿಗಳು ಅಷ್ಟಾವರ್ಣದ ಪರಬ್ರಹ್ಮೋಪದೇಶದಿಂದ ಮಹಾಮುನಿಗಳೆಂದು ಪರಿಗಣಿತರಾದರು. ಇದರಿಂದ ಅಷ್ಟಾವರ್ಣಗಳು ಮನುಷ್ಯನಲ್ಲಿ ಜ್ಞಾನವನ್ನುಂಟುಮಾಡಿ ಅವರನ್ನು ಸನ್ಮಾರ್ಗದಲ್ಲಿ ನಡೆಸಿ ಪರಮಪಾವನರಾಗಲು ದಾರಿದೀಪಗಳಾಗಿವೆ.

೧೦.೧ ಭಕ್ತಿ :

"ಎಲ್ಲಿ ನೋಡಿದಡಲ್ಲಿ ಹರಧ್ಯಾನಮಂ ಮಾಳ್ಪ
ರೆಲ್ಲಿ ನೋಡಿದಡಲ್ಲಿ ಶಿವಲಿಂಗಮಂ ಭಜಿಪ
ರೆಲ್ಲಿ ನೋಡಿದಡಲ್ಲಿ ಶಂಕರನ ಲೀಲೆಗಳ ಭಂಕ್ತಿಂದಲೆ ಪೇಳುವರ್
ಎಲ್ಲಿ ನೋಡಿದಡಲ್ಲಿ ವೇದಗಳನುಚ್ಚರಿಪ
ರೆಲ್ಲಿ ನೋಡಿದಡಲ್ಲಿ ಧರ್ಮಶಾಸ್ತ್ರವನೋರೆವ
ರಲ್ಲಾದಿಲ್ಲಾದೇಶದೊಳಗೊಪ್ಪುತಿಹ ಮರ್ತ್ಯರೇನೆಂದು ಬಣ್ಣಿಸುವೆನು"[೧೦]

ಬಸವಕವಿಯು ಈ ಪದ್ಯದ ಮೂಲಕ ಕರ್ನಾಟಕ ಪ್ರದೇಶದಲ್ಲಿಯ ಜನರಲ್ಲಿ ಭಕ್ತಿಯ ಸೆಲೆ ನಡುಗಟ್ಟಿರುವುದನ್ನು ತೋರ್ಪಡಿಸಿದ್ದಾನೆ.

ಧರ್ಮವಂತರು ಭಕ್ತಿಯಿಂದ ಶ್ರೇಷ್ಠವಾದ ವೇದಗಳು, ಧರ್ಮಶಾಸ್ತ್ರಗಳ ಅಧ್ಯಯನವನ್ನು ಕೈಗೊಂಡಿರುವುದು ಆ ಪ್ರದೇಶದಲ್ಲಿರುವುದನ್ನು ಕಾಣುತ್ತೇವೆ. ಇಂಥ ಶಾಸ್ತ್ರಗಳ ಜ್ಞಾನ ಮೊದಪುರ ಹಾಗೂ ಮಹಾಲಿಂಗಪುರದ ಪರಿಸರದಲ್ಲಿರುವುದನ್ನು ಕವಿಯು ಹೇಳಿದ್ದಾನೆ.

೪.೧೧ ವಿಧಿ :

ಬಸವಕವಿಯು ತನ್ನ ಕೃತಿಯಲ್ಲಿ 'ವಿಧಿಯ' ಕುರಿತು ಅಲ್ಲಿಲ್ಲಿ ವಿವಿಧ ಪಾತ್ರಗಳ ಮೂಲಕ ಯಾವರೀತಿ ಬರುತ್ತದೆ ಎನ್ನುವುದನ್ನು ಹೇಳುತ್ತಾನೆ. ವಿಧಿ ಎನ್ನುವುದು ಆಯಾ ಪಾತ್ರಗಳು ಹೋಗಿ ತಲುಪಬೇಕಾದ ಪೂರ್ವನಿಶ್ಚಿತವಾದ ಗುರಿ. ಇಲ್ಲಿಯ ಜನರು ದೇವರಲ್ಲಿ ನಂಬಿಕೆ ಇಟ್ಟಿರುವಂತೆ ವಿಧಿಯಲ್ಲಿಯೂ ಅಚಲವಾದ ವಿಶ್ವಾಸವಿಟ್ಟಿದ್ದಾರೆ. ಕೃತಿಯಲ್ಲಿ ಸಾಕಷ್ಟು ಘಟನೆಗಳು ಸಂಭವಿಸಿರುವುದು ವಿಧಿ ನಿಯಂತ್ರಿತವಾದವುಗಳು ಮಾನವ ಬದುಕಿನಲ್ಲಿ 'ವಿಧಿವಿಲಾಸ' ವೈವಿಧ್ಯಮಯವಾಗಿದೆ.

"ಶುಂಡಾಲ ಕಂದರದಿ ಮಧ್ಯಭಾಗದಿ ಬಂದು
ದಿಂಡುಗೆಡೆಯಲು ಸರ್ವಜನ ನೋಡುತಿರೆ ಭೂಪ
ಕಂಡು ಮನದೊಳಗೆ ಮರಮರನೆ ಮರಗುತ್ತ ಕಟ ಶಿವಭಕ್ತಿ ಶಿಶುದ್ರೋಹಭೂ
ಮಂಡಲದಿ ಘಟಿಸಿತಿಂದೆನಗಾವ ಜನ್ಮವಿಧಿ
ಮಂಡಿಸಿತು ನಾನರಿಯೆ ಶಿವಶಿವ ಮಹಾದೇವ
ಖಂಡೇದುಂಧರರೂಪ ಮಹಾಲಿಂಗನಡಿಗಳ್ಗೆ ಬಿನ್ನೈಪೆನೆಂಬಾಗುಳು"[೧೧]

ರಾಜನು ವೈಭವದಿಂದ ಮೋದಪುರಕ್ಕೆ ಹೊರಟಾಗ ಆನೆಯು ಮಗುವನ್ನು ಬಲಿತೆಗೆದುಕೊಂಡಾಗ ರಾಜನು ಮರಮರನೆ ಮರುಗುತ್ತ ತನ್ನಿಂದ ಶಿಶುಹತ್ಯೆಯಾಯಿತು. ಯಾವಜನ್ಮದ ವಿಧಿ ಬಂದೊದಗಿತೋ ಎನ್ನುವಲ್ಲಿ

"ಹರಭಕ್ತಿ ಗಂಗವ್ವ ಶೊಕಾಬ್ಧಿಯೊಳು ಮುಳುಗಿ
ಹರಹರ ಮಹಾದೇವ ಎನಾಗಾವ ಜನ್ಮವಿಧಿ
ದೊರೆಕೊಂಡಿತಕಟಕಟ ಗುರುವರ ಮಹಾಲಿಂಗ ಮುನಿವರ ಅಭಿದಾನಮಂ"[೧೨]

ಗಂಡನಿಲ್ಲದ ಗಂಗವ್ವಗೆ ಮಗನನ್ನು ಕಳೆದುಕೊಂಡಾಗ ಯಾವ ಜನ್ಮದ ವಿಧ ಬಂದೆರಗಿತು ಎನ್ನುವಲ್ಲಿ ಪೂರ್ವಜನ್ಮದಲ್ಲಿ ಮಾಡಿದ ಕರ್ಮಫಲದ ಪ್ರಯುಕ್ತ ಇಹಲೋಕದಲ್ಲಿ ದೊಡ್ಡವರು ಸಣ್ಣವರು ರಾಜಸೇವಕರೆನ್ನದೆ ಸಮಸ್ಯೆ, ಕಷ್ಟಗಳು ಬರುವುದು ಎಂದು ಕವಿಯು ಪೂರ್ವಜನ್ಮದ ಪಾಪ, ಪುಣ್ಯ, ಕರ್ಮದಿಗಳಲ್ಲಿ ನಂಬಿಕೆಯನ್ನು ಇಟ್ಟಿದ್ದಾನೆ.

ಮಾನವರೆಲ್ಲರು ವಿಧಿಯ ಕೈಗೊಂಬೆಗಳು. ಅವರೊಂದಿಗೆ ಆಟವಾಡುವುದು ದೇವರಿಗೊಂದು ಲೀಲೆ. ಮಾನವನ ಜೀವನದಲ್ಲಿ ನಡೆಯುವ ಘಟನೆಗಳಿಗೆ ಕಾರಣಗಳು ನೆಪಮಾತ್ರ. ವ್ಯಕ್ತಿಗಳೆಲ್ಲ ಕರ್ಮಾನುಸಾರವಾಗಿ ತಮ್ಮ ತಮ್ಮ 'ವಿಧಿಗೆ' ಗುರಿಯಾಗುತ್ತಾರೆ. ಇದಕ್ಕೆ ಭಕ್ತಿ, ತಾಳ್ಮೆ, ಪೂಜೆ, ಪ್ರಾರ್ಥನೆಗಳಿರಬೇಕೆಂಬುದನ್ನು ಬಸವಕವಿಯು ಸ್ಪಷ್ಟಪಡಿಸಿದ್ದಾನೆ.

೪.೧೨ ಪಂಚಾಕ್ಷರಿ ಮಂತ್ರದ ಮಹಿಮೆ :

"ಮೃಡಮಹಾದೇವನ ಸುಲೀಲೆಗಿದು ಫಲವೆಂದು
ಕಡು ತವಕದಿಂದಸಮ ಶ್ರೀ ಭೂತಿಯಂ ಕರದಿ
ಪಿಡಿದು ಪಂಚಾಕ್ಷರಿಯ ಜಪಿಸುತ್ತ ಬಾಲಕನ ಭಾಳದೊಳು ನೆರೆ ತಳಿದನು
ಜಡನಿದ್ರೆ ತಿಳಿದೆದ್ದ ವಟುವಿನಂತಾ ತರಳ

ಮೃಡಮಹಾಲಿಂಗನಡಿಗೆಳ್ಗೆ ನಮಿಸುತ್ತಿರಲು
ಪೊಡವಿಪತಿ ಮುಖ್ಯ ಪರಿಜನ ಪೌರಜನರೆಲ್ಲ ನೋಡುತ್ತೆ ಸಂತೋಷದ"[೧೩]

ಕವಿಯು ಜಗವೆಲ್ಲ ಶಿವಮಯವೆಂಬ ಆಸೆಯನ್ನು ವ್ಯಕ್ತಪಡಿಸಿದ್ದಾನೆ. ಹುಟ್ಟು ಸಾವುಗಳಿಗೆ ಸಕಲ ಜೀವಿಗಳ ಚಲನ ವಲನಗಳಿಗೆ ಧರೆಯ ಮೇಲೆ ನಡೆಯುವ ಎಲ್ಲ ಘಟನೆಗಳಿಗೆ ಶಿವ ಪಂಚಾಕ್ಷರಿ ಮಂತ್ರವೇ ಕಾರಣನೆನ್ನುತ್ತಾನೆ. ಪಂಚಾಕ್ಷರಿ ಮಂತ್ರಿ ವಿಭೂತಿಯ ಮಹಿಮೆಯನ್ನು ಜಗಕ್ಕೆ ತೋರಲು ಶಿವನು ಅನೇಕ ಲೀಲೆಗಳನ್ನು ಮಾಡಿರುವನು.

"ನಮಃಶಿವಾಯ" ಎಂಬ ಪಂಚಾಕ್ಷರಿಮಂತ್ರ ನಮ್ಮನ್ನು ಅಜ್ಞಾನದಿಂದ ಜ್ಞಾನದೆಡೆಗೆ ಕರೆದೊಯ್ದು ಮಾನವೀಯ ಮೌಲ್ಯಗಳನ್ನು ನೆಲೆಗೊಳಿಸುವಂತೆ ಮಾಡುತ್ತದೆ. ಮಾನವನನ್ನು ಆದರ್ಶನನ್ನಾಗಿ ಧರ್ಮದ ಕುರಿತು ಧರ್ಮ ಮಾನವನನ್ನು ಸನ್ಮಾರ್ಗದೆಡೆ ಒಯ್ಯಲು ಪಂಚಾಕ್ಷರಿ ಮಂತ್ರ ಜೀವನಕ್ಕೆ ಬೇಳಕು ನೀಡುತ್ತದೆ.

ಮಹಾಲಿಂಗಾಖ್ಯೆಯನು ಆನೆಯ ರೋಷಕ್ಕೆ ಸಿಕ್ಕಿ ಮಡಿದಾಗ ಅರಸ ಮತ್ತು ಗಂಗವ್ವೆಯರನ್ನು ಮಹಾಲಿಂಗ ಮುನಿನಾಥನು ಎಲ್ಲಾ ಶಿವನಿಚ್ಛೆಯಂತೆ ನಡೆದಿದೆ. ನಮಃ ಶಿವಾಯ ಎಂಬ ಪಂಚಾಕ್ಷರಿ ಮಂತ್ರವನ್ನು ಪಠಿಸಿ ಪವಿತ್ರ ವೀರಶೈವ ಧರ್ಮದ ಪ್ರತೀಕವಾದ ವಿಭೂತಿಯನ್ನು ಮಡಿದ ಮಗುವಿನ ಹಣೆಗೆ ಹಚ್ಚಿದಾಗ ಮಗುವು ಎಚ್ಚರಗೊಂಡಿರುವುದು. ಇಂತಹ ಅನೇಕ ಘಟನೆಗಳನ್ನು ಮಹಾಲಿಂಗಲೀಲೆಯಲ್ಲಿ ಬಸವಕವಿಯು ಪಂಚಾಕ್ಷರಿಮಂತ್ರ ಅಮೋಘವಾದದ್ದು ಅದನ್ನು ಎಲ್ಲರೂ ಪಠೀಸಲೇಬೇಕೆನ್ನುವ ಆಸೆಯಿಂದ ಪಂಚಾಕ್ಷರಿ ಮಂತ್ರದ ಮಹತ್ವವನ್ನು ಗುರುತಿಸಿದ್ದಾನೆ.

೪.೧೩. ರುದ್ರಾಕ್ಷಯ ಮಹಿಮೆ :

ಬಸವಕವಿಯು ವೀರಶೈವ ಧರ್ಮದಲ್ಲಿ ಶ್ರೇಷ್ಠ ಧಾರ್ಮಿಕ ಕಾರ್ಯಗಳನ್ನು ತನ್ನ ಸಮಕಾಲಿನದಲ್ಲಿ ಪ್ರಚಲಿತವಿದ್ದು ರುದ್ರಾಕ್ಷಿಯ ಮಹತ್ವದ ಕುರಿತು ಹೇಳಿರುವನು.

"ಆ ದಿವ್ಯರುದ್ರಾಕ್ಷಿ ಶಿವಮಂತ್ರ ಮಹಿಮೆಗಳ
ವಾದಿಯೊಳು ಸಕಲಶೈತ್ಯಾಗಮ ಪುರಾಣಗಳು
ಬೇಧವಿಲ್ಲದೆ ಪೇಳುತಿರ್ದವು ಬಾಲಕನೆ ಲಾಲಿಪುದು ಘನಭಕ್ತಿಯಿಂ"[೧೪]

“ಸತ್ಯವಿದು ಜಗದೊಳಗೆ ಸಕಲಸಿದ್ಧಿಗಳೀವ
ಮೃತ್ಯುಹರನಂ ತೋರ್ಪ ನಿಗಮಾಗಮಾಳಿ ಸಂ
ಸ್ತುತ್ಯ ಶಿವಮಂತ್ರ ರುದ್ರಾಕ್ಷಿಗಳ ನೆರೆನಂಬಿ ಹರಿಬ್ರಹ್ಮಸುರರೆಲ್ಲರು
ನಿತ್ಯನಿರ್ಮಲ ಪದವಿಯನು ಪಡೆದರೆಲೆ ಕುವರ
ಭೃತ್ಯಭಾವಾದಿ ಕೇಳು ಮುನ್ನ ಮಂತ್ರವ ಜಪಿಸಿ
ಕೃತ್ಯದಿಂ ಮೋಕ್ಷಪದವನು ಪಡೆದ ಸದ್ಭಕ್ತರಿತಿಹಾಸಗಳ ಪಾಳಿಯಿಂ”[೧೫]

“ಧರೆಗುದುರೆ ರುದ್ರಾಕ್ಷಿ ತರುವಾಗೆ ತನ್ಮಣಿಯ
ಧರಿಸಿದರೆ ಸ್ಮರಿಸಿದರೆ ಸೊಂಕಿದರೆ ಸಂತತಂ
ನರಜನ್ಮ ಕೋಟಿಯೊಳ್ ನಿರ್ಮಿಸಿದ ಪಂಚಮಹ ಪಾತಕದ ಸಂಕುಲವನು
ಪರಿಹರಿಸಿ ಲಕ್ಷಭೂದಾನ ಗೋದಾನಗಳು
ವರ ಫಲವನಿತ್ತು ಹರಲೋಕವಂ ಪೊರ್ದಿಸುವ
ಪರಮ ರುದ್ರಾಕ್ಷಿಗಳ ಮಹಿಮೆಯಂ ಕೇಳೆಂದು ಮಹಾಲಿಂಗಮುನಿ ಪೇಳ್ದನು”[೧೬]

ಬಸವಕವಿಯು ದಿವ್ಯರುದ್ರಾಕ್ಷಿಮಂತ್ರ ಮಹಿಮೆಗಳ ಕುರಿತು ಪ್ರಸ್ಥಾಪಿಸಿರುವುದು ನಿಜಕ್ಕೂ ಧಾರ್ಮಿಕ ಭಾವನೆಯನ್ನು ನೆಲೆನಿಲ್ಲುವುದೆಂತಿದೆ. ಪುರಾಣಗಳು ಅದರ ಮಹತ್ವವನ್ನು ಕುರಿತು ಹೇಳುತ್ತವೆ. ರುದ್ರಾಕ್ಷಿಯನ್ನು ಒಮ್ಮೆ ಧಾರಣೆ ಮಾಡಿದರೆ ಆತನು ಭೂರುದ್ರನಾಗುವನು. ರುದ್ರಾಕ್ಷಿಯನ್ನು ನೆರೆನಂಬಿ ಮಹಾನ್ ವ್ಯಕ್ತಿಗಳಾದ ಹರಿ, ಬ್ರಹ್ಮ, ಸುರರು ನಿತ್ಯ ನಿರ್ಮಲದಾರ ಉತ್ತಮ ಪದವಿಗೇರಿದರು. ರುದ್ರಾಕ್ಷಿ ಮಣಿಯನ್ನು ಧರಿಸಿದರೆ, ಸ್ಮರಿಸಿದರೆ, ಸೊಂಕಿದರೆ ಕೋಟಿಜನ್ಮದ ಪಾಲ ಪಲ್ಲಟವಾಗಿ ಭೂದಾನ, ಗೋದಾನಗಳ ಫಲವನಿತ್ತು ಶಿವನು ಕೈಲಾಸಪದವಿಯನ್ನೀಯುವನು. ರುದ್ರಾಕ್ಷಿಯನ್ನು ಪ್ರತಿಯೊಬ್ಬರು ಧರಿಸಬೇಕು. ಧರಿಸುವುದರಿಂದ ಆತ ಸಕಲ ಸಂಪನ್ನ ಶ್ರೇಷ್ಠ ವ್ಯಕ್ತಿಯಾಗಿ, ರೋಗಗಳಿಂದ ಮುಕ್ತನಾಗಿ, ಚಿರಾಯುವಾಗುವನು ಎಂಬ ನಮ್ಮ ಧಾರ್ಮಿಕ ಸಂಸ್ಕೃತಿಯಲ್ಲಿದೆ. ಇದು ವೀರಶೈವ ಧರ್ಮದ ಶ್ರೇಷ್ಠತೆ. ಅದಕ್ಕಾಗಿ ಧರಿಸುವುದರಿಂದ ಆಗುವ ಮಹತ್ವವನ್ನು ಹಲವಾರು ಘಟನೆಗಳ ಮೂಲಕ ಬಸವಕವಿಯು ವಿವರಿಸಿದ್ದಾನೆ.

೪.೧೪ ಜಂಗಮನ ಕುರಿತು :

“ನಾಮ ರೂಪಕ್ರಿಯೆ ಸೀಮೆಹಂಗಿಗನಲ್ಲ

ಕಾಮನಿಷ್ಕಾಮಯುತನಲ್ಲ ನಿರುಪಮ ನಿತ್ಯ
ನೇಮ ಸನ್ನುತನಲ್ಲ ಪ್ರೇಮ ನಿಃಪ್ರೇಮಮಾನಸನಲ್ಲ ಕಾಮಿನಿಯರ
ಕಾಮಿಸುವನಲ್ಲ ನಿರ್ನಾಮದೇಹಿಕನಲ್ಲ
ತಾಮಸದ ಗುಣಿಯಲ್ಲ ಸ್ವಾಮಿ ತಾನಲ್ಲಸಮ
ಹೇಮ ಭೂವ್ಯಾದಿಗಳು ಬೇಕು ಬೇಡೆಂಬಾಸೆ ಮುನ್ನಿಲ್ಲ ಜಂಗಮದೊಳು"[೧೭]

"ಜನನ ಮರಣಕ್ಕಿಸಮ ಜನ್ಮದಾಗರವೆನಿಪ
ಕನಕ ಕಾಂತಾ ಕರ್ಮಭೂಮಿಗಳ ಘನತೆಯದು
ಕನಸಿನೊಳಗೊರ್ಮೆ ತಾ ನೆನಸದಿಹ ಜಂಗಮಕೆ..."[೧೮]

"ಗುರುಲಿಂಗ ಜಂಗಮಕೆ ತನುಮನಧನಾದಿಗಳ
ಹರುಷದಿಂದೀಯಬೇಕೆಂಬ ಪೌರಾಣ ಶಾಸ್ತ್ರಗಳೆಲ್ಲ ಪುಸಿಯಾದುವೇ"[೧೯]

ಇಲ್ಲಿ ಕವಿಯು ಜಂಗಮನ ಗುಣಗಳ ಕುರಿತು ಹೇಳಿರುವಂತಿದೆ. ಜಂಗಮನಿಗೆ ನಾಮ ರೂಪ ಕ್ರಿಯೆ ನೇಮ ಎನ್ನುವ ಯಾವುದೇ ತರಹದ ಆಸ್ತಿ ಮಾಡಬೇಕೆನ್ನುವ ಆಸೆಗಳು ಜಂಗಮನಲ್ಲಿರುವುದಿಲ್ಲ. ಆತ ಕಾಮದಿಂದ ದೂರರಿರುತ್ತಾನೆ. ಕಾಮವನ್ನು ಎಂದೂ ಬಯಸುವುವವನಲ್ಲ. ತಾಮಸದ ಗುಣಿಯಲ್ಲ ಆತನು ಯಾವುದೇ ತರಹದ ನ್ಯಾಯದಿಂದ ದೂರುಳಿಯುವಂತವನು. ಆತನು ಎಲ್ಲಾ ಆಸೆಯಿಂದ ಮುಕ್ತನಾಗಿರುವವನು ಜಂಗಮ.

ಜೀವನವನ್ನು ನಡೆಸಲಿಕ್ಕೆ ಉಪಭೋಗಿಸಲು ಜಂಗಮರು ಜನನ ಮರಣಕ್ಕೆ ಕನಕ, ಕಾಂತ, ಕರ್ಮಭೂಮಿಗಳನ್ನು ಕನಸಿನಲ್ಲಿಯೂ ಕೂಡಾ ನೆನೆಯುವುದಿಲ್ಲ ಎಂದಿರುವಲ್ಲಿ ಜಂಗಮರು ಸರ್ವಪರಿತ್ಯಾಗಿ ಎನ್ನುವುದನ್ನು ಹೇಳಿರುವಂತಿದೆ.

ಗುರು-ಲಿಂಗ-ಜಂಗಮಕೆ ತನು-ಮನ-ಧನಗಳನ್ನು ಅರ್ಪಿಸಬೇಕು. ಅಂದಾಗ ಮಾತ್ರ ಆತ ಶ್ರೇಷ್ಠ ವ್ಯಕ್ತಿ ಎಂದು ಕರೆಸಿಕೊಳ್ಳುತ್ತಾನೆ ಎಂದು ಪುರಾಣ ಶಾಸ್ತ್ರಗಳಲ್ಲಿ ನಿಯಮವಿದೆ ಎಂಬುದನ್ನು ಹೇಳುತ್ತಾನೆ. ಅದಕ್ಕಾಗಿ ಬಸವಕವಿಯು ತನ್ನ ಕೃತಿಯಲ್ಲಿ ಜಂಗಮರಿಗೆ ಉನ್ನತ ಸ್ಥಾನಮಾನ ಕೊಡುವುದರ ಜೊತೆಗೆ ಜಂಗಮರು ಶ್ರೇಷ್ಠರು ಹಾಗೂ ಹಲವಾರು ಜಂಗಮರ ಕುರಿತು ಹೇಳಿರುವುದನ್ನು ಕಾಣುತ್ತೇವೆ.

೪.೧೫ ಧಾರ್ಮಿಕ ಪವಾಡಗಳು :

ಬೆಳಕಿನ ತೇಜಪುಂಜವಾದ ಮಹಾಲಿಂಗಮುನಿಗಳು ಶಿವಯೋಗ ಸಾಧನೆಯಿಂದ ಮಹಾಬೆಳಗಿನಲ್ಲಿ ಬೆರೆತು ಅಲೌಕಿಕವಾಗಿ ನಿಂತು ಬೆಳಗತೊಡಗಿದರು. ನಮ್ಮ ಸುತ್ತಲು ಅನಂತ ಪ್ರಭೆಯನ್ನು ಹರಡಿದರು. ಬೇಕು ಬೇಡಗಳ ಸೀಮೆಯನ್ನು ಮೀರಿ ಬಹುದೂರ ನಿಂತ ಸಿದ್ಧಿಪುರುಷರು. ಲಿಂಗಾಂಗ ಸಾಮರಸ್ಯ ಸ್ಥಿತಿಯಲ್ಲಿಯೇ ಪರಮ ವೈರಗ್ಯಮೂರ್ತಿಯಾಗಿ ಸಂಚರಿಸಿದರು. ಅಸಂಖ್ಯೆ ಲೀಲೆಗಳಿಂದ ಕಷ್ಟದಲ್ಲಿದ್ದ ಭಕ್ತರನ್ನು ಉದ್ಧರಿಸಿದರು. ಮಹಾಲಿಂಗೇಶ್ವರರು ಮಾಡಿದ ಕಾರ್ಯಗಳು ಜನಮಾನಸದಲ್ಲಿ ಪವಾಡಗಳಾಗಿ ಕಂಗೊಳಿಸಿದವು. ಒಬ್ಬ ವ್ಯಕ್ತಿ ಅಸಾಧಾರಣ ವ್ಯಕ್ತಿತ್ವ ರೂಪಿಸಿಕೊಂಡಾಗ ಮೇರು ಸಾದೃಶ್ಯವಾಗಿ ಬೆಳೆದು ನಿಂತಾಗ ಮಾಡಿದೆಲ್ಲವೂ ಪವಾಡಗಳಾಗಿಯೇ ಕಾಣುತ್ತವೆ. ಬಸವಕವಿಯ ಮಹಾಲಿಂಗಲೀಲೆಯಲ್ಲಿ ಹದಿನೆಂಟು ಪವಾಡಗಳ ನಿರೂಪಣೆಯಿದೆ. ಕವಿ ಇವುಗಳನ್ನು ಲೀಲೆಗಳೆಂದು ಕರೆದಿದ್ದಾನೆ ಅವು.

೧. ನರವಾಲದ ನಾಗಖ್ಯ ಮುಪ್ಪಿನಾಂಬೆಯರು ವಯೋವೃದ್ಧರು ಕೈಕೊಂಡ ವೀರಮಾಹೇಶ್ವರ ವ್ರತವನ್ನು ಪೂರೈಸಿದ ಪ್ರಸಂಗ.

೨. ರುದ್ರಮ್ಮನೆಂಬ ಶಿವಶರಣೆಗೆ ಕಣ್ಣುಗಳ ದಾನ ಮಾಡಿದ ಸಂದರ್ಭ.

೩. ಮಹಾಲಿಂಗೇಶ್ವರರ ಹೆಸರು ಕೀರ್ತಿ ಸಿದ್ಧಿಪ್ರಸಿದ್ಧಿಯನ್ನು ಕೇಳಿದ ಮುಧೋಳದ ಮಾಲೋಜಿರಾವ್ ಘೋರ್ಪಡೆ ಮಹಾರಾಜ 'ನರಗಟ್ಟಿ'ಗೆ ರಾಜವೈಭವದಿಂದ ಬರುವಾಗ ಮಹಾಲಿಂಗನೆಂಬ ಬಾಲಕನು ಅರಸನ ಆನೆಯ ಸೊಂಡಿಲಿಗೆ ಸಿಕ್ಕು ಸಾಯುತ್ತಾನೆ. ಮೃತದೊಂದಿದ ಮಗುವಿನ ಹೆತ್ತತಾಯಿಯ ಗೋಳು ಕೇಳಲಾರದೆ, ಮಹಾರಾಜನ ಪ್ರಾರ್ಥನೆಯನ್ನು ಮನ್ನಿಸಿ ಮೃತ್ಯುವನ್ನಪ್ಪಿದ ಬಾಲಕನನ್ನು ಮತ್ತೆ ಬದುಕಿಸಿದ ಪ್ರಸಂಗ.

೪. ಮುಧೋಳ ಮಾಲೋಜಿರಾಜನು ದಾನವಾಗಿ ನೀಡಿದ ನರಗಟ್ಟಿಪುರವನ್ನು ನಿಷ್ಕಾಮ ಭಾವನೆಯಿಂದ ಸ್ವೀಕರಿಸಿ, ಅದನ್ನು ವರಗಟ್ಟಿಯಾಗಿ ಸಿರಿಗಟ್ಟಿಯಾಗಿ ರೂಪಿಸಿದ ಪ್ರಸಂಗ.

೫. ಬೇಸಿಗೆಯ ಕಾಲದಲ್ಲಿ (ಬರಗಾಲದ ಸಂದರ್ಭದಲ್ಲಿ) ಕುಡಿಯಲು ಜೀವಜಲವಿಲ್ಲದೆ, ಜನ-ಜಾನುವಾರುಗಳು ಪರಿತಪಿಸಿದಾಗ ಮಹಾಲಿಂಗಪುರದ ಪಶ್ಚಿಮದಲ್ಲಿ

[illegible]

'ಬಸವತೀರ್ಥ'ವನ್ನು ತೋಡಿಸಿದ ಸಂಗತಿ.

೬. ಸುಟ್ಟರಟ್ಟಿಯ ಶಿವಭಕ್ತ ಗಂಗಾಖ್ಯನು 'ಗಣಾರಾಧನೆ'ಯನ್ನು ಏರ್ಪಡಿಸಿದಾಗ ಅನ್ನ-ಪ್ರಸಾದವನ್ನು ಅಕ್ಷಯಗೊಳಿಸಿದ ಪ್ರಸಂಗ.

೭. ಮುಂಡಾಸದ ಸಂಗನಬಸವನಿಗೆ ನೇತ್ರದಾನ ಮಾಡಿದ ಪ್ರಸಂಗ.

೮. ಮಾಲೋಜಿ ಮಹಾರಾಜನ ಸಹೋದರ ಸಕಲರೋಜಿಗೆ ಹರಿಹರರ ರೂಪವನ್ನು ಏಕಕಾಲಕ್ಕೆ ದರ್ಶನ ಮಾಡಿಸಿದ್ದು.

೯. ಮಾಲೋಜಿಯ ಸುಪ್ರಿತನಾದ ಗೋವಿಂದರಾಜನು ಮಲರೋಗದಿಂದ ಬಳಲುವಾಗ ನಿವಾರಣೆ ಮಾಡಿದುದು.

೧೦. ಮಾಲೋಜಿರಾವ್ ಮಹಾರಾಜನ ಮತ್ತೋರ್ವ ಮಗನಾದ ಕೇದಾರ ಭಾವನಿಗೆ ರಾಣಿಯರು ದಾಯಾದಿ ಮಾತ್ಸರ್ಯದಿಂದ ವಿಶಪ್ರಾಶನ ಮಾಡಿಸಿರಲು, ಮಹಾಲಿಂಗೇಶ್ವರರು ಕೇದಾರಭಾವನನ್ನು ವಿಷಪ್ರಾಶನದಿಂದ ವಿಮುಕ್ತಿಗೊಳಿಸಿದ ಸಂದರ್ಭ.

೧೧. ಗೋವಿಂದರಾಜನ ಮಗನಾದ ನಾರಾಯಣನು ಬಾಲಗ್ರಹ ಪೀಡಿತನಾಗಿರಲು ಆತನನ್ನು ಉದ್ಧರಿಸಿದ್ದು.

೧೨. ಮಾಲೋಜಿಯ 'ಸ್ವರ್ಗಗಾಮಿನಿ'ಯೆಂಬ ಕುದುರೆಯು ಅಸುನೀಗಲು ಅರಸನ ಪ್ರಾರ್ಥನೆಯನ್ನು ಮನ್ನಿಸಿ ಕುದುರೆಯನ್ನು ಬದುಕಿಸಿದ್ದು.

೧೩. ಪತ್ರಿಪರಗಣೆಗಾಗಿ ನಡದ ಯುದ್ಧದಲ್ಲಿ ಮುನಿಪತಿಯು ಮಾಲೋಜಿರಾಜನಿಗೆ ದರ್ಶನವಿತ್ತು ಉದ್ಧರಿಸಿದ ಪ್ರಸಂಗ.

೧೪. ಆನೆ ಕಾಲಭೂಪತಿಯ ರಾಜ್ಯದಿಂದ ಬ್ರಹ್ಮಹತ್ಯಾ ದ್ರೋಹವನ್ನು ನೆಲೆಗೆಡಿಸಿದುದು.

೧೫. ಆನೆ ಕಾಲಭೂಪತಿ ರಾಜ್ಯದಲ್ಲಿ ಬಸವಪುರವನ್ನು ಸ್ಥಾಪಿಸಿ, ಆ ಬಸವಪುರದ ಶರಣ ಬಸವೇಶ್ವರನ ಧರ್ಮಪತ್ನಿಯು ಕಾಲುಜಾರಿ ಭಾವಿಯಲ್ಲಿ ಬಿದ್ದಾಗ, ತಾನೇ ಬಂದು ಆಕೆಯ ಪ್ರಾಣವನ್ನು ಸಂರಕ್ಷಿಸಿದ ಸಂದರ್ಭ.

೧೬. ಚನ್ನಗಿರಿಲಿಂಗದ ಮೇಲೆ ಹೊದಿಸಿದ ವಸ್ತ್ರಗಳನ್ನು ಕದ್ದು ಒಯ್ಯುತ್ತಿರುವಾಗ ಕಳ್ಳನಿಗೆ ಕೃಪೆದೋರಿದ ಪ್ರಸಂಗ.

೧೭. ಅರವತ್ತು ವರುಷದ ಮಕ್ಕಳಿಲ್ಲದ ವೃದ್ಧೆಯು ಮುನಿವರರನ್ನು ಪ್ರಾರ್ಥಿಸಿ ತಪವನ್ನಾಚರಿಸಿದಾಗ ಅವಳ ಭಕ್ತಿಗೆ ಒಲಿದು ಬಂದು ಮಗುವನ್ನು ಕರುಣಿಸಿದ ಪ್ರಸಂಗ.

೧೮. ಶರಣೆ ಸಿದ್ದಾಯಿ (ಅಪ್ಪವ್ವಾಯಿ)ಗೆ ಇರುವಿನ ಹುರುವಾಗಿ ಜಡೆ ನೀಡಿದ ಪವಾಡ.

ಈ ರೀತಿಯಾಗಿ ಹದಿನೆಂಟು ಪವಾಡಗಳನ್ನು ಬಸವಕವಿಯು 'ಮಹಾಲಿಂಗಲೀಲೆ'ಗಳೆಂದು ಕರೆದು, ಸಹಜ ಸುಂದರವಾಗಿ ಕಥಾಭಿತ್ತಿಗೆ ಹೊಂದಿಕೆಯಾಗುವಂತೆ ಚಿತ್ರಿಸಿದ್ದಾನೆ. ಈ ಪವಾಡಗಳಲ್ಲದೆ ಮತ್ತೇ ಹತ್ತಾರು ಪವಾಡಗಳಿಂದಿಗೂ ಜನಮನದಲ್ಲಿ ಉಳಿದಿದ್ದು ಪ್ರಚಾರದಲ್ಲಿವೆ.

೪.೧೬ ಸಮಾರೋಪ :

ಬಸವಕವಿಯು ಜನಮಾನಸದಲ್ಲಿದ್ದ ಧಾರ್ಮಿಕ ಅಂಶಗಳನ್ನು ಸೊಗಸಾಗಿ ಭಕ್ತಿಪೂರ್ವಕವಾಗಿ ನಿರೂಪಿಸಿದ್ದಾನೆ. ತನ್ನ ಪರಿಸರದಲ್ಲಿದ್ದ ಘಟನೆಗಳು ದೈವ, ಪೂಜೆ, ಭಕ್ತಿ, ಪ್ರಾರ್ಥನೆ ಆತನ ಕಣ್ಣಿಗೆ ಮಂಗಲಮಯವಾಗಿಯೇ ಕಂಡಿವೆ. ತನ್ನ ಪರಿಸರದ ವಾತಾವರಣದಲ್ಲಿ ಧಾರ್ಮಿಕ ಕಾರ್ಯಗಳಿಗೆ ಪ್ರೋತ್ಸಾಹವಿತ್ತು ಎಂಬುದನ್ನು ಇಲ್ಲಿಯವರೆಗೆ ಚರ್ಚಿಸಲಾದ ಹತ್ತು ಹಲವಾರು ಧಾರ್ಮಿಕ ಅಂಶಗಳಿಂದ ತಿಳಿಯಲು ಸಾಧ್ಯವಾಯಿತು.

ಬಸವಕವಿಯು ತನ್ನ ಪರಿಸರದ ಸಮಕಾಲೀನ ಧರ್ಮ ಸಂಸ್ಕೃತಿಯನ್ನು ಬಿಂಬಿಸುವ ವೀರಶೈವಧರ್ಮದ ಬೆಳಕನ್ನು ಜಗತ್ತಿಗೆ ಸಾರಿಹೇಳಿದನು. ಈತನು ಮಹಾಲಿಂಗಲೀಲೆಯಲ್ಲಿ ಬರುವ ಪ್ರಮುಖ ಧಾರ್ಮಿಕ ಅಂಶಗಳಾದ ಸ್ತುತಿ, ವೀರಶೈವ ಕವಿಗಳು, ಗುರುಶಿಷ್ಯ ಸಂಬಂಧ, ಪೂಜಾರಿಗಳು, ಗೋಹತ್ಯೆ, ಪಂಚಮಹಾಪಾತಕಗಳು, ವೇದಗಳು, ಭಸ್ಮಧಾರಣೆಯ ಮಹತ್ವ, ಒಡ್ಡೋಲಗ, ವೀರಶೈವಧರ್ಮದ ಉದ್ಧಾರ, ಪುಣ್ಯಕ್ಷೇತ್ರಗಳು, ಲಿಂಗಗಳ ಸ್ಥಾಪನೆ, ಅಷ್ಟಾವರಣ, ಪಂಚಾಕ್ಷರಿ ಮಂತ್ರದ ಮಹಿಮೆ, ರುದ್ರಾಕ್ಷಿಯ ಮಹಿಮೆ, ಮಹಾಲಿಂಗೇಶ್ವರರ ಪವಾಡಗಳು ಇನ್ನೂ ಮುಂತಾದ ಧಾರ್ಮಿಕ ಸಂಸ್ಕೃತಿಯನ್ನು ಬಿಂಬಿಸುವ ಘಟನಾವಳಿಗಳನ್ನು ತಿಳಿಸಿದ್ದಾನೆ. ಜೊತೆಗೆ ತನ್ನ ಸಮಕಾಲೀನದಲ್ಲಿದ್ದ ನಡೆದ ಧಾರ್ಮಿಕ ಅಂಶಗಳನ್ನು ಪ್ರಚುರಪಡಿಸಿ ಕನ್ನಡ ಶ್ರೇಷ್ಠ ಕವಿಯಾಗಿ ಮೆರೆದಿರುವನು.

ಕೊನೆಯ ಟಿಪ್ಪಣಿಗಳು :

೧. ಮಹಾಲಿಂಗಲೀಲೆ – ಸಂಧಿ ೬, ಪದ್ಯ ೨೨, ಪುಟ ೬೨

೨. ಮಹಾಲಿಂಗಲೀಲೆ – ಸಂಧಿ ೮, ಪದ್ಯ ೧೯, ಪುಟ ೮೧

೩. ಮಹಾಲಿಂಗಲೀಲೆ – ಸಂಧಿ ೧೧, ಪದ್ಯ ೫೧, ಪುಟ ೧೧೬

೪. ಮಹಾಲಿಂಗಲೀಲೆ – ಸಂಧಿ ೧೪, ಪದ್ಯ ೩೨, ಪುಟ ೧೫೧

೫. ಮಹಾಲಿಂಗಲೀಲೆ – ಸಂಧಿ ೧೪, ಪದ್ಯ ೩೩, ಪುಟ ೧೫೧

೬. ಮಹಾಲಿಂಗಲೀಲೆ – ಸಂಧಿ ೨, ಪದ್ಯ ೨೮, ಪುಟ ೧೮

೭. ಮಹಾಲಿಂಗಲೀಲೆ – ಸಂಧಿ ೩, ಪದ್ಯ ೬, ಪುಟ ೨೫

೮. ಮಹಾಲಿಂಗಲೀಲೆ – ಸಂಧಿ ೩, ಪದ್ಯ ೭, ಪುಟ ೨೬

೯. ಮಹಾಲಿಂಗಲೀಲೆ – ಸಂಧಿ ೩, ಪದ್ಯ ೨೭, ಪುಟ ೨೮

೧೦. ಮಹಾಲಿಂಗಲೀಲೆ – ಸಂಧಿ ೪, ಪದ್ಯ ೨೧, ಪುಟ ೪೦

೧೧. ಮಹಾಲಿಂಗಲೀಲೆ – ಸಂಧಿ ೭, ಪದ್ಯ ೧೭, ಪುಟ ೬೯

೧೨. ಮಹಾಲಿಂಗಲೀಲೆ – ಸಂಧಿ ೭, ಪದ್ಯ ೨೧, ಪುಟ ೭೦

೧೩. ಮಹಾಲಿಂಗಲೀಲೆ – ಸಂಧಿ ೭, ಪದ್ಯ ೩೦, ಪುಟ ೭೨

೧೪. ಮಹಾಲಿಂಗಲೀಲೆ – ಸಂಧಿ ೧೭, ಪದ್ಯ ೧೬, ಪುಟ ೨೧೧

೧೫. ಮಹಾಲಿಂಗಲೀಲೆ – ಸಂಧಿ ೧೭, ಪದ್ಯ ೧೬, ಪುಟ ೨೧೧

೧೬. ಮಹಾಲಿಂಗಲೀಲೆ – ಸಂಧಿ ೧೭, ಪದ್ಯ ೩೯, ಪುಟ ೨೧೭

೧೭. ಮಹಾಲಿಂಗಲೀಲೆ – ಸಂಧಿ ೮, ಪದ್ಯ ೮, ಪುಟ ೭೮

೧೮. ಮಹಾಲಿಂಗಲೀಲೆ – ಸಂಧಿ ೮, ಪದ್ಯ ೭, ಪುಟ ೭೮

೧೯. ಮಹಾಲಿಂಗಲೀಲೆ – ಸಂಧಿ ೮, ಪದ್ಯ ೧೦, ಪುಟ ೭೮

ಅಧ್ಯಾಯ – ೫

ಸಾಮಾಜಿಕ ಅಂಶಗಳು

೫.೧ ಪ್ರವೇಶ

೫.೨ ಕರ್ನಾಟಕ ವರ್ಣನೆ

೫.೩ ದಂಪತಿಗಳು

೫.೪ ಸಾಮಾಜಿಕ ವ್ಯಕ್ತಿತ್ವ

೫.೫ ಜಾತಿಗಳು

೫.೬ ಸ್ತ್ರೀಯರ ಗುಣ ಮತ್ತು ಸೌಂದರ್ಯ

೫.೭ ರೋಗಗಳು

೫.೮ ವೈಧವ್ಯ

೫.೯ ಸಿದ್ಧೇಶನ ಸಾಮಾಜಿಕ ಕಾರ್ಯಗಳು

೫.೧೦ ಮೈಲಿಗೆಯ ಕುರಿತು.

೫.೧೧ ಆಹಾರ ಧಾನ್ಯಗಳು

೫.೧೨ ಹಣ್ಣು ಹಂಪಲುಗಳು

೫.೧೩ ಪ್ರಾಣಿಗಳು

೫.೧೪ ಪಕ್ಷಿಗಳು

೫.೧೫ ಪುಷ್ಪಗಳು

೫.೧೬ ಆಯುಧಗಳು

೫.೧೭ ಸಾಮಾಜಿಕ ವ್ಯವಸ್ಥೆ

೫.೧೮ ಉಡುಗೆ–ತೊಡುಗೆ

೫.೧೯ ಸಮಾರೋಪ

ಅಧ್ಯಾಯ – ೫

ಸಾಮಾಜಿಕ ಅಂಶಗಳು

೫.೧ ಪ್ರವೇಶ :

ಮಾನವ ಸ್ವಭಾವಗಳುಳ್ಳವರು ಸಾಂಘಿಕವಾಗಿ ಸಂಬಂಧಗಳನ್ನು ಹೊಂದಿರುವ ವ್ಯವಸ್ಥೆಯನ್ನು 'ಸಮಾಜ' ಎಂದು ಕರೆಯುತ್ತಾರೆ. ಪರಸ್ಪರ ಅರಿವು ಅಥವಾ ಪ್ರಜ್ಞೆಯು ಸಮಾಜಕ್ಕೆ ಅತ್ಯಗತ್ಯ. ಹಾಗಾಗಿಯೇ ಸಮಾಜವನ್ನು 'ಸಾಮಾಜಿಕ ಸಂಬಂಧಗಳ ಬಲೆ' ಎಂದು ಕರೆಯಾಲಾಗಿದೆ. ಇಲ್ಲಿ ಒಂದೇ ರೀತಿಯ ಸಾಮಾಜಿಕ ಸಂಬಂಧವಿದೆ. ಅನೇಕ ರೀತಿಯ ಸಂಬಂಧಗಳಿರುವುದನ್ನು ಗುರುತಿಸಬಹುದು. ಇಲ್ಲವೆ ದೈವಗಳ ಜಾತ್ರೆಗೆ ಸಂಬಂಧಿಸಿರಬಹುದು. ಇಲ್ಲಿ ಪರಸ್ಪರ ಅವಲಂಬನ ಮತ್ತು ಸ್ವಾತಂತ್ರ್ಯಗಳು ಸಮಸಮವಾಗಿ ಕೆಲಸ ಮಾಡುತ್ತವೆ. ಸಹಕಾರತತ್ವದ ಬುನಾದಿಯ ಮೇಲೆ ಅದು ನಿಂತಿರುತ್ತದೆ. ಸಮಾಜದ ಪ್ರಾಥಮಿಕ ಘಟಕವೆಂದರೆ ಕುಟುಂಬ. ಅದನ್ನು ವಿಸ್ತರಿಸಿ ಈಗ 'ಜಗತ್ತೇ ಒಂದು ಕುಟುಂಬ' ಎನ್ನಲಾಗುತ್ತಿದೆ. ಅರಿಸ್ಟಾಟಲ್‌ನು "ಸಮಾಜದಲ್ಲಿ ಜೀವಿಸುವುದೇ ಮಾನವನ ನೈಸರ್ಗಿಕ ಗುಣ"[೧] ಎಂದಿದ್ದಾನೆ.

ಸಮಾಜವಿಲ್ಲದೆ ಮಾನವ ಜೀವಿಸಲಾರ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲಾರ, ಸಮಾಜವಿಲ್ಲದೆ ತನ್ನ ಆಸೆ ಆಕಾಂಕ್ಷೆಗಳನ್ನು ಸಾದಿಸಿಕೊಳ್ಳಲಾರ. ಮಾನವನಿಗೆ ಅತ್ಯವಶ್ಯಕವಾಗಿ ಬೇಕಾಗಿರುವ ಆಹಾರ, ವಸತಿ, ಸ್ನೇಹ, ಶಿಕ್ಷಣ, ಕೆಲಸ, ಲೈಗಿಕತೆ, ಮನರಂಜನೆ ಮುಂತಾದ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅವನು ಸಮಾಜದ ಸದಸ್ಯನಾಗಿ ಬದುಕಬೇಕಾಗುತ್ತದೆ. ವ್ಯಕ್ತಿ ಇಂತಹ ಹಲವಾರು ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಸಲುವಾಗಿಯೇ ಹಲವಾರು ಸಂಘ ಸಂಸ್ಥೆಗಳನ್ನು ಕಟ್ಟಿ ಅವುಗಳ ನಡುವೆ ಶಾಂತ ಜೀವನ ನಡೆಸತೊಡಗಿದನು. ಇದರ ಪರಿಣಾಮವಾಗಿ ಸಮಾಜ ರೂಪುಗೊಂಡಿತು. ವ್ಯಕ್ತಿ ಯಾವನೇ ಆಗಿರಲಿ ಅವನ ಸ್ಥಾನಮಾನ, ಅವನ ಸಾಮಾಜಿಕ ಮನ್ನಣೆಗೆ ಅನುಗುಣವಾಗಿ ನಿರ್ಧರಿತವಾಗುತ್ತವೆ.

ಸಮಕಾಲೀನ ಜೀವನವನ್ನು ಯಥಾವತ್ತಾಗಿ ಚಿತ್ರಿಸಿದ ಕನ್ನಡದ ಕವಿಗಳಲ್ಲಿ ಬಸವಕವಿಗೆ ಅಗ್ರಸ್ಥಾನವಿದೆ. ಲೋಕಾನುಭವ ಮತ್ತು ಸಮಾಜವನ್ನು ನೋಡುವ ಅವನ ದೃಷ್ಟಿ ವಿಶಾಲವಾದುದು. ಸುತ್ತಲಿನ ಜನಜೀವನವನ್ನು ಬಹು ಸೂಕ್ಷ್ಮವಾಗಿ ಅವಲೋಕಿಸಿದ

ಬಸವಕವಿಯು ತನ್ನ ಸಂಪರ್ಕಕ್ಕೆ ಬಂದ ಎಲ್ಲ ವ್ಯಕ್ತಿಗಳ ಶೀಲ ಸ್ವಭಾವಗಳನ್ನು ನಿಸರ್ಗ ಪಶುಪಕ್ಷಿ, ಆಹಾರಪದ್ಧತಿ, ಜಾತಿಗಳು, ಮಹಿಳೆಯ ಸ್ಥಾನಮಾನ ಮೊದಲಾದವುಗಳನ್ನು ಕುರಿತು ನೇರವಾಗಿ ಚಿತ್ರಿಸಿದ್ದಾನೆ. ಆದ್ದರಿಂದ ಅಂದಿನ ಕಾಲದ ಸಾಮಾಜಿಕ ಸಂಸ್ಕೃತಿಯ ಅಧ್ಯಯನಕ್ಕೆ ಅಮೂಲ್ಯ ಸಾಮಗ್ರಿಗಳನ್ನು ಒದಗಿಸುತ್ತದೆ.

೫.೨ ಕರ್ನಾಟಕ ವರ್ಣನೆ :

ಢಪಳಾಪುರದ ಯೋಗಿವರ್ಯರಾದ ಗುರುಲಿಂಗಾರಾಧ್ಯರಲ್ಲಿ ಮಹಾಲಿಂಗರಿಗೆ ಉಪದೇಶವಾಗುತ್ತದೆ. ಗುರುಗಳ ಅಪ್ಪಣೆ ಪಡೆದು ದೇಶಸಂಚಾರ, ತೀರ್ಥಯಾತ್ರೆಗಳ ದರ್ಶನ ಕೈಗೊಳ್ಳುತ್ತಾರೆ. ಅರಣ್ಯದಲ್ಲಿ ತಪವನ್ನಾಚರಿಸುತ್ತ ಪರ್ಯಟನೆಗೈಯುತ್ತ ಕರ್ನಾಟಕ ದೇಶದೊಳಗೆ ಪಾದಾರ್ಪಣೆ ಮಾಡುತ್ತಾರೆ. ಆಗ ಬಸವಕವಿಯು ಕರ್ನಾಟಕದ ವರ್ಣನೆಯನ್ನು ಸೊಗಸಾಗಿ ನಿರೂಪಿಸಿದ್ದಾನೆ.

ಕವಿಯು ಕರ್ನಾಟಕಕ್ಕೆ ಕರ್ನಾಟಕ ದೇಶವೆಂದಿರುವುದು ಇಲ್ಲಿಯ ಶ್ರೀಮಂತಿಕೆ, ಭೌಗೋಳಿಕದ ವಿಸ್ತಾರ, ವೈಭವಗಳು, ಜನತೆಯನ್ನು ಕುರಿತು ಎಂದಂತಿದೆ.

"ಲಿಂಗದಿಂ ಕಂಗೊಳಿಪ ಪರಮ ಭೂವನಂಗಳಿಂ
ತುಂಗಫಲಭಾರದಿಂ ಬಗ್ಗುತಿಹ ಬನಗಳಿಂ
ಸಂಗತಾಮಲಪುಷ್ಪ ಪರಿಮಳದ ವನಗಳಿಂ ನಿರ್ಝರದ ಕೂಲ್ಯಂಗಳಿಂ
ಪಿಂಗದತಿ ನೆರೆಪರಿವ ಪರಮ ಪೆರ್ದೆರೆಗಳಿಂ
ಮಂಗಲ ಮಹಾತಪೋಧನರಿರ್ಪ ಗಿರಿಗಳಿಂ
ಭಂಗದಿಂದ ಕಂಗೊಳಿಪ ಪದ್ಮಾಕರಂಗಳಿಂದಾ ದೇಶ ಕಣ್ಣೆಸಿದುದು"[೨]

ಇಲ್ಲಿ ಕವಿಯು ಕರ್ನಾಟಕದ ಭೌಗೋಳಿಕ ಪರಿಸರವು ಅಲ್ಲಿರುವ ಬನಗಳು ಹಣ್ಣುಗಳು ಭಾರದಿಂದ ಬಗ್ಗಿವೆ. ಕರ್ನಾಟಕದ ಬನಗಳು ಗಿಡಕ್ಕೆ ಭಾರವಾಗುವಷ್ಟು ವಿವಿಧ ಹಣ್ಣುಗಳಿಂದ ತುಂಬಿವೆ ಎನ್ನುವುದು ಕರ್ನಾಟಕವು ಹಣ್ಣುಗಳಿಗೆ ಪ್ರಸಿದ್ಧಿಯನ್ನು ಪಡೆದುಕೊಂಡಿತೆನ್ನುವುದು ಜನರಿಂದ ಲಿಂಗವು ಪೂಜೆಗಳಿಂದ ಕಂಗೊಳಿಸುತ್ತಿರುವುದು. ಪುಷ್ಪಗಳು ಪರಿಮಳದಿಂದ ಸುವಾಸನೆಗಳನ್ನು ಸೂಸುತ್ತಿರುವುದು ಕವಿಯು ಇಲ್ಲಿ ಕರ್ನಾಟಕದ ವೈಭವದ ನಾಡು ಎಂದು ಬಣ್ಣಿಸಿದ್ದಾನೆ.

"ಕದಳಿ ಕಂಟಕ ಕರಕ ಜಂಬು ಚೂತ ಕಪಿಸ್ಥ
ಮದುರ ಫಲಸೀಳೆ ಜೆಂಬೀರ ಪನ್ನೀರಲವು'
ವಿದಿತ ಪೀರುವ ನಾರಿಕೇಳದ್ರಾಕ್ಷಾಂಜೀರ ತೆರುವಲ್ಲರಿಗಳಿಂದಲಿ
ಮುದಿತ ಚಂಪಕ ಜಾಜಿ ಬಕುಳ ಯೂಥಿಕೆ ಕುಂದ
ಒದಗಿರ್ಪ ಸೌಗಂಧ ಕನಕಕೇತಕಿ ಮುಖ್ಯ
ಮಧುರಸಕೆ ಮಾತೃಕಾಸ್ಥಾನವೆಂಬಂದದಿಂ ಮನಕೆ ಮಂಜುಳವಾದುದು"[೩]

ಈ ರೀತಿಯಾಗಿ ಕವಿಯು ಸಸ್ಯ ಸಂಪತ್ತನ್ನು, ಹಣ್ಣು ಹಂಪಲದ, ಗಿಡ ಮರಗಳನ್ನು ಚಿತ್ತಾಕರ್ಷಕವಾಗಿ ವರ್ಣಿಸಿದ್ದಾನೆ.

೫.೩ ದಂಪತಿಗಳು :

ಕವಿಯು ಕೆಲವು ಆದರ್ಶದಂಪತಿಗಳನ್ನು ಗುರುತಿಸಿರುವುದು ಸಮಾಜದಲ್ಲಿಯ ಹೊಂದಾಣಿಕೆಯ ಮತ್ತು ಅನ್ಯೋನ್ಯತೆಯ ಹಾಗೂ ಪರಸ್ಪರ ಸಂಬಂಧದ ಕುರುಹುಗಳಾಗಿರುವುದನ್ನು ತಿಳಿಸಲು ಪ್ರಯತ್ನಿಸಿದಂತಿದೆ.

ಸಭಾ ಮಂಡಲದ ಮಧ್ಯದಲ್ಲಿ ಸಿಂಹಪೀಠದಲ್ಲಿ ಪರಮೇಶನು ಗಿರಿಜಾತೆಯೊಡನೆ ಶೋಭಿಸುತ್ತಿರುವುದು ಇವರ ಸಮ್ಮುಖದಲ್ಲಿ ಹಲವು ಸಮಾಜೋದ್ಧಾರ ಕಾರ್ಯಗಳನ್ನು ಸಭೆಯಲ್ಲಿ ಪರಸ್ಪರ ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವುದು ಜನರ ಕಷ್ಟಗಳನ್ನು ಪರಿಹರಿಸುತ್ತಿದ್ದರು.

ನಾಗಖ್ಯ ಮುಪ್ಪಿನಾಂಬೆ ಎಂಬ ಮಹಾತಾಯಿಯರು ಪೂಜೆ ದಾಸೋಹಗಳಿಂದ ಕಠಿಣ ವ್ರತಗಳನ್ನು ಆಚರಿಸುವುದು. ಇವರಿಬ್ಬರು ಪ್ರತಿದಿವಸ ದಾಸೋಹವನ್ನೀಯದೆ ಆಹಾರ ಸ್ವೀಕರಿಸದೆ ಇರುವುದು ಹಿಂದಿನ ಕಾಲದಲ್ಲಿ ದಾಸೋಹ ಪದ್ಧತಿಯು ಶ್ರೇಷ್ಠವಾಗಿತ್ತು. ನಮ್ಮ ಸಂಸ್ಕೃತಿಯಲ್ಲಿ ಇನ್ನೊಬ್ಬರಿಗೆ ಅನ್ನಹಾಕುವುದು, ಜಂಗಮರಿಗೆ ಭೋಜನ ಮಾಡಿಸುವುದು ಪರಂಪರಾಗತವಾಗಿ ಸಮಾಜದಲ್ಲಿ ಮೂಡಿಬಂದಿದೆ. ಇದೊಂದು ಸಾಮಾಜಿಕವಾಗಿ ಜನರ ಮನಸ್ಸನ್ನು ತೃಪ್ತಿಪಡಿಸುವ ಕಾರ್ಯವಾಗಿತ್ತೆಂದು ಕವಿಯು ಹೇಳುತ್ತಾನೆ.

ಸಿದ್ಧೇಶನ ತಂದೆ ಮುದ್ದುಗೌಡ ತಾಯಿಯಾದ ಸುಗ್ಗಲಾಂಬೆ ಮಲ್ಲಿಕಾರ್ಜುನನಿಗೆ

ಕತ್ರೋಗರದ ಬುತ್ತಿಯನ್ನು ಸವಿಯಲೆಂದು ಇವರ ಆಸೆಯಾಗಿರುವುದು ನಮ್ಮ ಸಂಸ್ಕೃತಿಯಲ್ಲಿ ಸಂಬಂಧಿಕರ ಮನೆಗೆ ಪರರ ಊರುಗಳಿಗೆ ಕೆಲಸ ಕಾರ್ಯಗಳಿಗೆ ಹೋಗಬೇಕಾದರೆ ಬುತ್ತಿಯು ಸಮಾಜದಲ್ಲಿ ಪರಸ್ಪರ ಸಂಬಂಧ, ಮಾನವೀಯತೆಯ ಮೌಲ್ಯಗಳನ್ನು ಎತ್ತಿಹಿಡಿಯುವಲ್ಲಿ ಶ್ರೇಷ್ಠವಾಗಿವೆ. ಇದರಿಂದ ಶ್ರೇಷ್ಠ ದಂಪತಿಗಳು ಮತ್ತು ಶಿವನ ಭಕ್ತರೆಂದು ಕವಿಯಿಂದ ಹೇಳಿಸಿದಂತಿದೆ.

ಬಸವೇಶ ನಾಗಲಾಂಬೆಯ ಭಕ್ತಿ, ಸಮಾಜೋದ್ಧಾರಗಳು ಮಾಲೋಜಿರಾಜನು ಆತನ ಹೆಂಡತಿಯು ಮುನಿನಾಥನಿಗೆ ಮುತ್ತಿನಾರತಿಗಳನ್ನು ಹಿಡಿದು ಬರಮಾಡಿಕೊಳ್ಳುವುದು ಭಕ್ತಿಯಲ್ಲಿ ಇವರಿಬ್ಬರು ಆದರ್ಶತೆಯನ್ನು ತಿಳಿಸುತ್ತದೆ.

ಹೀಗೆ ಆದರ್ಶ, ಸಮಾಜೋದ್ಧಾರದ, ಭಕ್ತಿಯ, ಕಷ್ಟಗಳ ನಿವಾರಣೆಗಳು, ದಾಸೋಹದಂತಹ ಶ್ರೇಷ್ಠ ಕೆಲಸಗಳನ್ನು ಮಾಡುವುದರಿಂದ ಒಂದು ಅತ್ಯುತ್ತಮ ಸಮಾಜ ನಿರ್ಮಾಣವಾಗುವುದರಲ್ಲಿ ಸಂಶಯವಿಲ್ಲ ಎಂಬ ಮಾತನ್ನು ಪುಷ್ಟಿಕರಿಸಲು ಬಸವಕವಿಯು ಹಲವು ಶ್ರೇಷ್ಠ ದಂಪತಿಗಳನ್ನು ಪ್ರಸ್ತಾಪಿಸಿ ಇವರುಗಳ ಮೂಲಕ ಸಮಾಜವನ್ನು ಉದ್ಧರಿಸಿದಂತಿದೆ. ಇಂತಹ ದಂಪತಿಗಳಿಂದ ಸಮಾಜದಲ್ಲಿ ಮಾನವೀಯ ಮೌಲ್ಯಗಳು ನೆಲೆಸಲು ಶ್ರಮಪಟ್ಟಂತಿದೆ.

೫.೪ ಸಾಮಾಜಿಕ ವ್ಯಕ್ತಿತ್ವ :

"ನಂಬೆಣ್ಣನೆಂಬ ನಾಮವನಾಂತು ಪ್ರೇಮದಿಂ
ಅಂಬಿಕಾಪತಿಯ ಪದಾಂಬುಜಂಗಳ ಬಿಡದೆ
ನಂಬಿ ಪೂಜಿಸಿ ನಿತ್ಯ ಪಡಿ ಹೊನ್ನುಗಳ ಪಡೆದು ಶಂಬರಾರಿಯ ತಾಪದಿಂ
ರಂಬೆರಿಗಿತ್ತು ಮರೆವ್ರತ್ತಖಿಳ ಮಾಹಿಮಾವ
ಲಂಬನದೊಳಿರುತಿರಲು ಓರ್ವ ಸತಿ ಕುವರಂಗೆ
ನಂಬೆಣ್ಣನೆಂಬ ನಾಮವನಿಟ್ಟು ತತ್ತುರದಿ ಸಲಹುತ್ತ ಸಂತಸದೊಳು"[೪]

ಕವಿಯು ಸಮಾಜದಲ್ಲಿ ದೇವರಲ್ಲಿ ನಂಬಿಕೆಯನ್ನಿಡುವಂತೆ ನಂಬಿಯಣ್ಣನ ಮೂಲಕ ಶಿವನ ಪಾದಪೂಜೆಯನ್ನು ಮಾಡಿ ಆತನಿಂದ ದಿನನಿತ್ಯ ಪಡಿ ಹೊನ್ನುಗಳನ್ನು ಪಡೆಯುತ್ತಿರುವುದು. ಕಾಮನ ತಾಪದಿಂದ ಪಡಿ ಹೊನ್ನುಗಳನ್ನು ರಂಭೆಯರಿಗಿತ್ತು ಮರೆಯುತ್ತಿರುವುದು ಸುಖದಿಂದಿರುವುದು. ಪ್ರಾಚೀನ ಕಾಲದಲ್ಲಿ ಮನುಷ್ಯನ ವ್ಯಕ್ತಿತ್ವದ

ಕುರಿತು ಸೊಗಸಾಗಿ ಚಿತ್ರಿಸಿರುವುದು ಅದಕ್ಕಾಗಿ ರಂಭೆಯರಂತ ಮಹಿಳೆಯರು ಇರುವುದನ್ನು ಹೇಳುತ್ತಾನೆ.

ಸುಖದಿಂದ ಇರುವ ವ್ಯಕ್ತಿಯನ್ನು ಗುರುತಿಸಿ ಓರ್ವ ಸತಿಯು ಆ ವ್ಯಕ್ತಿಯ ಹೆಸರನ್ನೇ ತನ್ನ ಮಗನಿಗಿಟ್ಟು ಸಲಹುತ್ತಿರುವುದು ಇನ್ನೊಬ್ಬರ ಸುಖ ಸಂತೋಷಗಳು ತನ್ನ ಮಗನಿಗೆ ಲಭಿಸಲಿ ಎಂಬ ಭಾವದಿಂದಲೇ ಹೆಸರನ್ನಿಟ್ಟಿರುವುದು ಆಕೆಯ ಒಳಮನಸ್ಸು ಆಸೆಗಳು ಎಂಥವು ಎನ್ನುವುದನ್ನು ಗುರುತಿಸಿದ್ದಾನೆ.

"ಮುನ್ನಿನಂದದಿ ಬಂದು ತನ್ನದಿಯ ತೀರದೊಳು
ಚೆನ್ನಕುಳಿತೆನ್ನವರಮಣ್ಣಯ್ಯ ಬಾಲಕನೆ
ಇನ್ನಾರು ಗತಿಯನಗೆ ಮುನ್ನಿಲ್ಲ ಭೂತಳದಿ ನಾನಿನ್ನ ಪೆತ್ತವ್ವೆಯು
ಬನ್ನಬಡುತಿರ್ಪೆಗಡ ಚಿನ್ನನೆಲ್ಲಿರ್ದಪೆಯಾ
ಗನ್ನಘಾತುಕಮೊಸಳೆ ತನ್ನ ಬಡಲಾಸೆಯಿಂ
ಬಿನ್ನಣದಿ ನುಂಗಿತ್ತು ಇನ್ನೇವೆನೆಂದಾಗ ಬಳಲಿ ಚೀರುಲಿರ್ದಳು"[೫]

ತಾಯಿ-ಮಗುವಿನ ಸಂಬಂಧದ ಕುರಿತು ಹೇಳಿದ್ದಾನೆ. ತಾಯಿಯು ತನ್ನ ಮಗನಿಗಾಗಿ ಹಲುಬಿರುವುದನ್ನು ಕಾಣುತ್ತೇವೆ. ಆಕೆಯ ಅಂತರಾಳದಿಂದ ಬಂದಂತ ಕೆಲವು ಶಬ್ದಗಳು ಯಾವುದೇ ಮನುಷ್ಯನ ಮನಸ್ಸನ್ನು ದುಃಖಿಸುವಂತಾಗುತ್ತವೆ. ನನಗೆ ಇನ್ನಾರುಗತಿ, ನಾ ನಿನ್ನ ಪೆತ್ತವ್ವ ಚಿನ್ನ ಎಲ್ಲಿರುವೆ. ಘಾತುಕ ಮೊಸಳೆ ನನ್ನ ಒಡ ಆಸೆಯ ವೈಭವವನ್ನು ನುಂಗಿಹಾಕಿದೆ ಎಂದು ದುಃಖಿಸುತ್ತಿರುವುದು ತಾಯಿ-ಮಗುವಿನಮೇಲೆ ಅಪಾರ ಪ್ರೀತಿಯನ್ನಿಟ್ಟಿರುವುದು ಓದಿದವರ ಮನಸ್ಸು ಶೋಕದಿಂದ ಕರಗುವ ಹಾಗೆ ಕವಿಯು ಮೈಜುಮ್ಮೆನ್ನಿಸುವ ಹಾಗೆ ಚಿತ್ರಿಸಿರುವುದನ್ನು ಕಾಣುತ್ತೇವೆ.

"ಜ್ವರತಪ್ತ ಸುಧೆಯ ಸವಿಬಲ್ಲನೇ ಮಂಡೂಕ
ನರಿವುದೇ ಕ್ಷೀರಾಬ್ಧಿಘನತೆಯಂ ಕೌಶಿಕವು
ತರಣಿಕಿರಣ ಪ್ರಭೆಯಬಲ್ಲುದೇ ಜಾತ್ಯಾಂಧ ಮೌಕ್ತಿಕರ ದರ್ಪಣವನು
ಪರಿಕಿಸಲು ತಿಳಿವನೇ ಬಧಿರ ಸಂಗೀತದಾ
ಪರಿಯ ನೆರೆಬಲ್ಲನೇನದರಂತೆ ಭೂತಳದ
ನರರಿಂಗೆ ಪರಮಾತ್ಮ ನಿಮ್ಮರವದರಿದಪುದೆ ಮಹಾಲಿಂಗಮುನಿಚಂದ್ರಮ"[೬]

ಕವಿಯು ಸುಧೆಯ ಸವಿ, ಕ್ಷೀರಾಬ್ಧಿಯ ಘನತೆ, ತರಣಿ ಕಿರಣ, ಪ್ರಭೆಯ ಕುರಿತು ಅದರ ವಿಶಿಷ್ಠ ಪ್ರಭಾವಗಳ ಕುರಿತು ಮತ್ತು ಪ್ರಪಂಚದಲ್ಲಿ ಇವುಗಳ ಮಹತ್ವ ಮತ್ತು ಘನತೆಗಳು ಬಹಳಷ್ಟು ಉನ್ನತವಾದವುಗಳಾಗಿವೆ ಎಂಬುದರ ಅರಿವಾಗುತ್ತದೆ.

"ನರಗಟ್ಟಿಯೆಂಬ ಪೆಸರರಿಯ ಬಾರದ ತೆರದಿ
ನರಿಯಂತೆ ಪಲ್ಲಿರಿದು ಸರಿದಿತ್ತು ಮುನ್ನವೇ
ಪರಮನಾಣತಿಯಿಂದೆ ಭ್ರಮರಕೀಟನ್ಯಾಯದಂತಾಯಿತು ಭಾವಿಸುವುಡೆ
ಗಿರಿಜಾತೆ ಚಿತ್ತೈಸು ಭಕ್ತಿಪೂರ್ವಕದಿಂದೆ
ಹರುಷದಿಂದಾಪುರದ ಸಂಭ್ರಮವ ಪೆಳುವೊಡೆ
ಪರಮಿಷ್ಠೆ ಪಾವನ ಸುರಚಾರ್ಯ ಯೋಗಪರಿಗರಿದಾಯ್ತು ವೇದಿನಿಯೊಳು"[೭]

ಕವಿಯು ಗ್ರಾಮಗಳ ಹೆಸರುಗಳು ಮೊದಲಿದ್ದ ನಾಮಗಳು ನಾಮಗಳು ಮಾಯವಾಗಿ ಬೇರೆ ನಾಮದಿಂದ ಕರೆಯುವುದು. ನರಗಟ್ಟಿ ಎಂಬ ಹೆಸರು ಯಾರಿಗೂ ಅರಿಯದಂತೆ ಮಾಯವಾಗಿರುವುದು ಕವಿಯ ಕಲ್ಪನೆಯು ಸಾಕಾರಗೊಂಡಿದೆ.

"ಹರಿಯಸಂಗನಂಗಮ ಬಿಟ್ಟಲ್ಲಿ ಸಿರಬಂದು
ಸ್ಥಿರಗೊಂಡಿರಲು ಕೇಳಿ ಹರನಂಜಿ ಗಿರಿಜೆಯಂ
ಎರವಿಲ್ಲದೆಡದೊಡೆಯೊಳಗೆ ತೆಳೆಯ ವಿಧಿ ಬೆದರಿ ನಿಜಪತ್ನಿ ಶಾರದೆಯನು
ವರ ಲಪನಕಂಜದೊಳು ಬಚ್ಚಿಡಲು ಸುರಪಾನ
ಪರಕಿಸುತ ಮೈಗಂಗಳಿಂ ಶಚಿತ ಕಾದಿರ್ದ
ಶತಜನ್ಮ ಲಗ್ನಮಂ ಬಿಟ್ಟಿರ್ದನಾ ಭಯದೊಳೆನೆಂಬೆನಚ್ಚರಿಯನು"[೮]

ಲಕ್ಷ್ಮಿಯು ಹರಿಸಂಗವನ್ನು ಬಿಟ್ಟಿರುವುದು ಹರನಂಜಿ ಗಿರಿಜೆಯ ಎಡದೊಡೆಯಲ್ಲಿ ಕುಳಿತಿರುವುದು ಬ್ರಹ್ಮನು ಶಾರದೆಯ ಮುಖಕಮಲದಲ್ಲಿ ಮುಚ್ಚಿಕೊಳ್ಳುವುದು ಲಕ್ಷ್ಮಿ ಮತ್ತು ಶಾರದೆ ಎಂಬ ಹಣ ಮತ್ತು ಬುದ್ಧಿ ಹಾಗೂ ಜ್ಞಾನವನ್ನು ನೆಲೆಗೊಳಿಸಲು ಕವಿಯು ಇವುಗಳನ್ನು ವಿಶೇಷತೆಯ ಕುರಿತು ಹೇಳಿದ್ದಾನೆ.

೫.೫ ಜಾತಿಗಳು :

"ಅದಿರುದ್ರನ ಶಕ್ತಿ ಪಾರ್ವತಿಯ ಗರ್ಭದೋಳ
ಗಾದರದಿ ಜನಿಸಿರ್ದ ಕುರುಹಿನಶೆಟ್ಟಿಗಳ

ಬೇಧವಿಲ್ಲದೆ ಕುಲದ ಭಕ್ತನೋರ್ವನಿಗಸಮ ಗೌಡಿಕೆಯ ಪಾಲಿಸುತಲಿ
ವಾದಿಜನ ಸಂಹಾರ ದೇವಾಂಗನಾನ್ವಯದಿ
ಮೋದದಿಂದಲಿ ಪುಟ್ಟಿ ಮೆರೆದಿರ್ದ ಭಕ್ತನಿಗೆ
ಮೇದಿನಿಯ ತಿಳಿವಂತೆ ನೇಮಿಸಿದ ಜಾಡಗೌಡಿಕೆಯನಡನೆವೇಳ್ವೆನು"[೯]

"ಬಳಿಕಾದಿರುದ್ರನ ಸುಚಾನುಮಧ್ಯದೊಳೊಗೆದ
ಎಲುವ ರೆಡ್ಡಿಯ ಪಂಚವಿಶಂತಿಯ ಘನಕುಲದ
ಚೆಲುವ ಭಕ್ತೋತ್ತಮರಿಗಾವಟಿಗತನಮಿತ್ತು ಪಂಚಮಾನ್ವಯದುದಿಸಿದ
ಮಲಹರನ ಭಕ್ತರಿಗೆ ದಲ್ಲಾತನಮಿತ್ತು
ಉಳಿದ ಜೈನಾದಿ ಚಾರ್ವಾಕವಿಪ್ರಾಳಿಗಳ
ಕುಲಮಿರ್ಪೊಡೀಪುರದಿ ಜಯವಿಲ್ಲಮೆಂದೆನುತ ಮಹಾಲಿಂಗ ಸೂಚಿಸಿದನು"[೧೦]

"ಆವಾಗ ಜಾತಿಗಳಿಗಾವ ಕರ್ಮಗಳು
ಜೀವನೋಪಾದಿಯೋಳ್ ಜಗದಲ್ಲಿ ರಂಜಿಪವು
ಭಾವಿಸುವ ತತ್ಕಾರ್ಯಗಳನೋರ್ವರೋರ್ವರಿಗೆ ನೇಮಿಸುತ ಮಹಾಪುರುಷನು
ಓವಿ ಕುಲಕರ್ಣಿನಾಯಕ ಮುಖ್ಯ ಗೌಡರನು
ಲೇವಿದ ಮಹಾದಯದಿ ತಮ್ಮಯಾದಿನದಿಂದೆ
ಭೂವಲಯದೊಳು ಬಾಳ್ವ ತೆರದಿಂದೆ ಸೂಚಿಸಿದನಾ ಪುರದೊಳಿರಲೆನ್ನುತ"[೧೧]

ಸಮಾಜದಲ್ಲಿ ಹಿಂದೆಯೂ ವಿವಿಧ ಜಾತಿಗಳಿರುವುದನ್ನು ಈ ಮೇಲಿನ ಪದ್ಯಗಳ ಮೂಲಕ ಕಾಣುತ್ತೇವೆ. ಇಲ್ಲಿ ಕವಿಯು ಅವರವರ ಹುಟ್ಟಿನಿಂದಲೇ ಅವರವರ ಜಾತಿ ನಿರ್ಧಾರವಾಗುತ್ತಿದ್ದವು ಎಂಬುದನ್ನು ಕವಿ ಹೇಳುತ್ತಾನೆ. ಸಮಾಜದಲ್ಲಿ ವಿವಿಧ ವೃತ್ತಿಯಿಂದ ವಿವಿಧ ನಾಮಗಳಿಂದ ಜಾತಿ ಪಂಗಡಗಳನ್ನು ಹೇಳಿರುವುದನ್ನು ಕಾಣುತ್ತೇವೆ. ಒಂದು ಜಾತಿಯವ ಅದೇ ವೃತ್ತಿಯನ್ನು ಕೈಗೊಂಡಿರುವುದರಿಂದ ಅವನಿಗೆ ಜಾಡಗೌಡ, ಗೌಡನಾಯಕ ಹೀಗೆ ಹಲವಾರು ಜಾತಿಗಳು ಕಂಡುಬಂದಿವೆ.

ಇಲ್ಲಿ ಕುರುಹಿನಶೆಟ್ಟಿ, ಗೌಡರು, ದೇವಾಂಗ, ಜಾಡಗೌಡರು, ರೆಡ್ಡಿ, ವೀರಶೈವ ಪಂಚಮಸಾಲಿ, ಜೈನ, ಕುಲಕರ್ಣಿನಾಯಕ, ಮುಖ್ಯಗೌಡ ಹೀಗೆ ಸಮಾಜದಲ್ಲಿ ಹಲವಾರು ಜಾತಿಗಳಿವೆ ಎಂಬುದನ್ನು ಬಸವಕವಿಯು ಹೇಳಿರುವುದು ಆತನ ನಿಜವಾದ ಚತುರತೆಯನ್ನು

ಎತ್ತಿತೋರಿಸುತ್ತದೆ.

"ಧರೆಯೊಳಗಿ ದುಷ್ಕುಲಜರಾದ ಮುನಿಗಳು ಬಿಡದೆ
ಪರಮ ಗುರುವಾದ್ಯಷ್ಟವರ್ಣಗಳ ನೆರೆನಂಬಿ
ಪರಿಪೂತರಾಗಿ ತ್ರೈಭುವನ ಪೂಜಿತರಾದರೇನೆಂದು ಬಣ್ಣಿಸುವೆನು
ವರ ವನಿಷ್ಠಮುನೀಶ ಸರ್ವವಲ್ಲಭೆಗೆ ಘನ
ತರುಳನಾಗಂದುದಿಸಿ ಶೈವದುಪದೇಶದಿಂ
ದುರಿತ ಮಾರ್ಗವನಳಿದು ಸರ್ವ ಮುನಿವರನಾಗಿ ನೆರೆಮೆರೆದುನೀ ಜಗದೊಳು"[೧೨]

"ಮೊಚ್ಚಿಗರ ಕುಲದಲ್ಲಿ ಸಂಭೂತನಾದಸಮ
ನಿಶ್ಚಲದ ಪರಮವಿಶ್ವಾಮಿತ್ರಮುನಿವರ್ಯ
ಬಚ್ಚಬಯಲಾದ ಪರಬ್ರಹ್ಮೋಪದೇಶದಿಂ ತ್ರೈಭುವನಮರಿವಂದದಿ
ಮೆಚ್ಚವರನಿಂಗುತ್ತ ಮಹಾರಾಜ ಋಷಿಯಾದ
ನೆಚ್ಚರಿಯನೆನೆಂದು ಬಣ್ಣಿಸುವೆ ಕುವಲಯದಿ
ಸಚ್ಚರಿತ ಮಹಾಲಿಂಗ ಜಂಗಮವೆ ಕೆಳೆನುತೆ ವರಯೋಗಿ ಸೂಚಿಸಿದನು"[೧೩]

"ಗೌತಮಮುನೀಶ ಪಾಂಚಾಲಕುಲದಲ್ಲಿ ಜನಿಸಿ
ಪೂತ ಪರಬ್ರಹ್ಮೋಪದೇಶದಿಂ ಜಗಮೆರಿಯೆ
ಖ್ಯಾತಮುನಿಜಾತನೋಳ್ ಸಂಪೂಜ್ಯನಾಗುತ್ತ ನೆರೆ ಮೆರೆದನಾ ಮಹಿಮನು
ಮಾತಂಗವಂಶದೋಳ್ ಜನಿಸಿದಾಸಾಂಖ್ಯಮುನಿ
ಪ್ರೀತಿಯಿಂ ಶೈವೋಪದೇಶದಿಂದ ನೆರೆಪಡೆದು
ಜಾತಕರ್ಮವ ಮೀರಿ ಬಸಿತ ರುದ್ರಾಕ್ಷಿಗಳ ತಳೆದು ಪಾವನನಾದನು"[೧೪]

"ಕಂಚುಗಾರರ ಕುಲದಿ ಜನ್ಮಿಸಿದ ರೋಮಜನು
ಪಂಚಾಕ್ಷರಿಯ ಪರಮ ಮಂತ್ರೋಪದೇಶದಿಂ
ಸಂಚಿತಗಾಮಿ ಪ್ರಾರಬ್ಧಗಳನೆಲೆಗಳೆದು ತ್ರೈಭುವನಮೆರವಂದದಿ
ಅಂಚಿತ ಮಹಾಪ್ರಳಯಕೊಂದೊಂದು ರೋಮಗಳ
ಸಂಚಯಗಳುದುರಿದವು ಬಳಿಕ ಪ್ರಳಯಂಗಳಿಗೆ
ವಂಚಿಸದೆ ಪರಮ ಪಂಡಿತನಾದನೆಲೆದೇವ ಮಹಾಲಿಂಗಲಾಲಿಸುವುದು"[೧೫]

"ಬೇಡನಹ ವಾಲ್ಮೀಕಿ ಶೈವಲಾಂಛನಗಳಿಂ
ಕೊಡಿ ವಿಪ್ರಕುಲಕ್ಕೆ ವರನಾದ ಜಗಮರಿಯೆ
ಬೇಡಾದ ಶಿವನಸನ್ಮಾರ್ಗಕ್ಕೆ ತನ್ಮಹಿಮೆ ಭಾವಿಪಡೆ ಭೂತಳದೊಳ್
ರೂಢಿಯೊಳ್ ಕೌಂಡಿಲ್ಯಮುನಿ ನಾವಿದಂಬಳಿಕ
ಗಾಡಿಯಿಂ ಭಸಿತರುದ್ರಾಕ್ಷಿಗಳ ನೆರೆ ತಳೆದು
ಗೂಢಪದಕಂಕಣನ ಭಜಿಸುತ್ತ ಲೋಕದೊಳ್ ಮನುಬ್ರಹ್ಮ ತಾನಾದನು"[೧೬]

"ಭಾರದ್ವಜಂ ಬಡಗಿಮಗನಾಗಿ ಸಂಜನಿಸಿ
ಮಾರಹರನಂಗ್ರಿಯಂ ಭಜಿಸುತ್ತ ಲೋಕದೊಳು
ಸಾರ ಮಂತ್ರೋಪದೇಶವನಾಂತು ಸಕಲ ವರ್ಣಂಗಳಿಗೆ ಗುರುವಾದನು
ನಾರದ ಮುನೀಶ ದಾಸಿಯ ಗರ್ಭದೊಳಗೊಗೆದು
ಗೌರಿಯರಸನ ಪಾದಮಂ ನಂಬಿ ಭೂತಳೆದ
ಸಾರಶ್ರೌತ್ರಿಯರ ಗುರುವಾದ ನೆಲೆ ಮಹಾಲಿಂಗಜಂಗಮನೇ ಲಾಲಿಸುವುದು"[೧೭]

"ಮಾಂಡವ್ಯಮುನಿವರಂ ಮಾದಿಗಂ ಭಾವಿಪೊಡೆ
ಚಂಡಿಕಾವರನ ಲಾಂಛನಗಳಂ ತಳೆದು ಭೂ
ಮಂಡಲದಿ ಸಂಪೂಜ್ಯನಾಗುತ್ತ ಸರ್ವ ಗೋತ್ರಂಗಳಿಗೆ ವರನಾದನು
ಪಂಡಿತೋತ್ತಮ ವ್ಯಾಸ ಕಬ್ಬಲಿಗನೆಂದೆನಿಸಿ
ಖಂಡಶಶಿಧರನಂಪೆಗಳ ಕೀರ್ತನಂಗೈದು
ಮಂಡಿತ ಮಹಾಭಸ್ಮರುದ್ರಾಕ್ಷಿಗಳ ತಳೆದು ಮುನಿಜಾಲವರನಾದನು"[೧೮]

ಕವಿಯು ಜಾತಿ -ಕುಲಗಳನ್ನು ಅವರ ವೃತ್ತಿಗಳನ್ನು ತಿಳಿಸಿರುವನು. ಶ್ರೇಷ್ಠ ಮುನಿಗಳ ಕುರಿತು ಮೊದಲಿನ ನಂತರ ಮಂತ್ರೋಪದೇಶಗಳಿಂದ ಇವರು ಪ್ರಶಿದ್ಧಿ ಪಡೆದಿರುವುದನ್ನು ತಿಳಿಸಿರುವನು. ಸಾಕಷ್ಟು ಮುನಿಗಳು ಕೀಳುಕುಲದಲ್ಲಿ ಹುಟ್ಟಿದವರೆಂದು ಸಮಾಜದಲ್ಲಿ ಹಲವಾರು ಜಾತಿ-ಕುಲಗಳಿಂದ ತುಂಬಿತ್ತು ಎಂದು ಗೊತ್ತಾಗುತ್ತದೆ. ಸಮಾಜದಲ್ಲಿ ಬಡವ, ಶ್ರೀಮಂತ, ಮೇಲ್ಜಾತಿ-ಕೀಳುಜಾತಿ ಮೊದಲಾದ ಪಂಗಡಗಳಿರುವುದನ್ನು ಪ್ರಸ್ಥಾಪಿಸಿದ್ದಾನೆ.

ಅಷ್ಟಾವರ್ಣಗಳ ಕುರಿತು ಕವಿಯು ಸೊಗಸಾಗಿ ಚಿತ್ರಿಸಿದ್ದಾನೆ. ಕವಿಯು ಮುನಿಗಳ

ಜಾತಿ ಮತ್ತು ಅವರ ವೃತ್ತಿ ಒಳಪಂಗಡಗಳು ಇದ್ದವು. ಪ್ರಾಚೀನ ಕಾಲದಲ್ಲಿ ಕವಿಯ ಸಮಕಾಲದಲ್ಲಿಯೂ ಸಮಾಜದಲ್ಲಿ ಹತ್ತು ಹಲವಾರು ಜಾತಿ-ಒಳಪಂಗಡಗಳು ಇದ್ದವು ಎಂದು ತಿರ್ಮಾನಿಸಲಾಗಿದೆ. ಕವಿಗೆ ಸಂಪ್ರದಾಯಗಳು ದೈವಕ್ಕನುಗುಣವಾಗಿ ಕೆಲಸ ಮೂಡನಂಬಿಕೆಗಳು ಸಮಾಜದಲ್ಲಿ ಬೇರೂರಿದ್ದವು ಎಂಬುದನ್ನು ಕಂಡುಕೊಂಡಿದ್ದಾನೆ. ಇವೆಲ್ಲವೂ ಆತನ ಸಮಕಾಲಿನ ಸಾಮಾಜಿಕದ ಕೊಡುಗೆಗಳಾಗಿವೆ.

ವಸಿಷ್ಠ ಮುನಿಯು ಸರ್ವವಲ್ಲಭೆಗೆ ಘನ ತರುಳ ನಾಗಂದುದಿಸಿ ಶೈವ ಉಪದೇಶದಿಂದ, ಮೊಚಿಗರ ಕುಲದಲ್ಲಿ ಹುಟ್ಟಿರುವ ಪರಮ ವಿಶ್ವಾಮಿತ್ರಮುನಿ ಪರಬ್ರಹ್ಮ ಉಪದೇಶದಿಂದ, ಗೌತಮನು ಪಂಚಾಲಕುಲದಲ್ಲಿ ಜನಿಸಿ, ಕಂಚುಗಾರ ಕುಲದಲ್ಲಿ ರೋಮಜ, ಬೇಡಕುಲದಲ್ಲಿ ವಾಲ್ಮೀಕಿ, ಬಡಗಿಯ ಮಗನಾಗಿ ಭಾರದ್ವಾಜ, ನಾರದನ್ನು ದಾಸಿಯ ಮಗನಾಗಿ, ಮಾದಿಗರ ಕುಲದಲ್ಲಿ ಮಾಂಡವ್ಯಮುನಿ, ಕಬ್ಬಿಗರ ಕುಲದಲ್ಲಿ ವ್ಯಾಸ, ಹೀಗೆ ಸಮಾಜದಲ್ಲಿ ಹತ್ತು ಹಲವಾರು ಜಾತಿಗಳಿರುವುದನ್ನೂ ಅವರು ಶ್ರೇಷ್ಠ ಮುನಿಗಳಾಗಿರುವುದನ್ನು ತಿಳಿಸಿರುವನು.

ಶ್ರೇಷ್ಠ ಮುನಿಗಳಾಗಿದ್ದರೂ ಇವರ ವೃತ್ತಿ ಜಾತಿ, ಕುಲ, ಆಹಾರ, ಕುರಿತು ತಿಳಿಸಲು ಕವಿಯು ಶ್ರಮಪಟ್ಟಂತ್ತಿದೆ. ಮೊಚಿಗರು ಎಂದರೆ ಸಂಪ್ರದಾಯಕವಾಗಿ ಚಪ್ಪಲಿಗಳನ್ನು ಹೊಲೆಯುವವರು ಇವರು ಜನಸೇವೆಯಲ್ಲಿ ತೊಡಗಿರುವವರು. ಕಂಚುಗಾರರು ಎಂದರೆ ಪಾತ್ರೆ, ಮೂರ್ತಿಗಳನ್ನು ತಯಾರಿಸುವವರು. ಬೇಡರು ಪ್ರಾಣಿಗಳ ಬೇಟೆಯಾಡುವದು, ಅದರ ಮಾಂಸವನ್ನು ಆಹಾರವಾಗಿ ಸ್ವೀಕರಿಸುವಂತವರು. ಬಡಗಿಗಳು ಎಂದರೆ ಸಮಾಜದಲ್ಲಿ ಮನೆಗಳನ್ನು ಶೃಂಗರಿಸಲು ಪೀಠೋಪಕರಣಗಳ ತಯಾರಕರು. ಮಾದಿಗರು, ಕಬ್ಬಿಗರು ಹೀಗೆ ಹಲವಾರು ಜಾತಿಗಳು ಸಾಮಾಜಿಕ ಸಂಸ್ಕೃತಿಯನ್ನು ಪ್ರಚುರಪಡೆಸಿವೆ. ಇವರೆಲ್ಲರೂ ವೃತ್ತಿಯಿಂದ ಸಮಾಜದಲ್ಲಿ ಶ್ರೇಷ್ಠರಾದವರು.

ಬಸವಕವಿಯು ಸಮಾಜದಲ್ಲಿಯ ಹಲವಾರು ಜಾತಿ-ಕುಲಗಳಿಂದ ತುಂಬಿಹೋಗಿರುವದನ್ನು ಅವರವರ ಜಾತಿಗಳಿಗೆ ಅನುಸಾರವಾಗಿ ವೃತ್ತಿಗಳನ್ನು ಕೈಗೊಳ್ಳುತ್ತಿದ್ದರು ಎನ್ನುವದು ಮೇಲುಜಾತಿ-ಕೀಳುಜಾತಿಗಳು ಎಂದು ವಿಂಗಡನೆ ಮಾಡಿ ಗೌಡಿಕೆ, ಜಾಡಗೌಡಿಕೆ, ರೆಡ್ಡಿ ನಾಯಕ, ಕುಲಕರ್ಣಿ ಊರು ಹಿರೇತನ ಮಾಡುವ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುವಿಕೆ ಸಮಾಜದಲ್ಲಿ ಇಂತ ಶ್ರೇಷ್ಠರಿಂದ ಕೆಲಸ -

ಕಾರ್ಯಗಳು, ಸಮಸ್ಯಗಳ ನಿವಾರನೆ, ಒಂದು ಗ್ರಾಮ ಸಕಲ ವೃತ್ತಿಗಳಿಂದ ತುಂಬಿ ಸಮಾಜವು ಅತ್ಯುತ್ತಮವಾಗಿತ್ತೆಂದು ಸೊಗಸಾಗಿ ನಿರೂಪಿಸಿದ್ದಾನೆ.

೫.೬ ಸ್ತ್ರೀಯರ ಗುಣ ಮತ್ತು ಸೌಂದರ್ಯ :

ಬಸವ ಕವಿಯು ಮಹಿಳೆಯರ ಸ್ಥಾನಮಾನಗಳನ್ನು, ಅವರಲ್ಲಿರು ಗುಣಗಳು ಅವರನ್ನು ಸೌಂದರ್ಯಪ್ರೀಯರು ಎಂಬುದನ್ನು ಗುರುತಿಸಿ ಅವರ ಸರ್ವಾಂಗಗಳ ವರ್ಣನೆಯನ್ನು ಮಾಡಿರುವನು.

"ಕಾಂತಪದ ಭಕ್ತೆಯರ್ ಕರ್ಮಪಥ ಮುಕ್ತೆಯರ್
ಶಾಂತಿರಸಲೋಲೆಯರ್ ಸುಗುಣಮಣಿ ಮಾಲೆಯರ್
ಭ್ರಾಂತಜನದೊರೆಯರ್ ಭವಮಾರ್ಗಹಾರೆಯರ್ ಭಾಲಾಕ್ಷಣಮ ಧ್ಯಾನಿಪರ್
ಸ್ವಾಂತಿಯರ್ ಮದನಹರನಂತಸಮ ಚೆಲ್ವಿಕೆಯ
ನಾಂತಿಹರು ತದ್ದೇಶದೊಳಗಿರ್ಪ ಘನತರದ
ಕಾಂತೆಯರು ನಿರುತ ನಿಶ್ಚಿಮತೆಯರು ತಾವಲ್ಲದಿಲ್ಲ ದುಷ್ಟಸ್ತ್ರೀಯರು".[೧೯]

"ವಿಧಿಪತ್ನಿಯಂತಸಮ ಚಾತುರ್ಯಯುಕ್ತಿಯರ್
ಮಿಧುಕಾಂತಿಯಂತಮಲ ಸೌಭಾಗ್ಯರಕ್ತಿಯರ್
(ಮಿಧು) ಸತಿಯಂತಿರದೆ ಲೋಕೋಪಕಾರಿಯರ್ ದುರ್ಮಾರ್ಗಸನ್ಮುಕ್ತಿಯರ್
ವಿಧಿತಾನುಸೂಯ್ಯರುಂಧತಿಯಂತೆ ಸಾಧ್ವಿಯರ್
ಮದನಸತಿಂತಿರದೆ ಸೌಮದಯ್ನಾಂತಿಹರು
ಮದವಳಿದ ಮಾನಿಯರಲ್ಲದಿಲ್ಲಾ ದೇಶಮಂಡಲದಿ ದುಃಸ್ತ್ರೀಯರು".[೨೦]

ಕವಿಯು ತನ್ನ ಸಮಕಾಲೀನ ಸ್ತ್ರೀಯರನ್ನು ಕಂಡ ದೃಷ್ಠಿ ಸಮಾಜದಲ್ಲಿ ಸ್ತ್ರೀಯರು ಸಕಲ ಗುಣಗಳಿಂದ ಶ್ರೇಷ್ಠರೆಂದು ಹೇಳಿದ್ದಾನೆ. ಅವರ ಪ್ರತಿಯೊಂದು ಗುಣಗಳನ್ನು ಕುಲಂಕಷವಾಗಿ ಚರ್ಚಿಸಿದಂತಿದೆ. ಮಹಿಳೆಯರ ಕುರಿತಾದ ಹೊಗಳಿಕೆ ಭಾವನೆಯನ್ನು ಕಾಣುತ್ತೇವೆ. ಕವಿಗೆ ಮಹಿಳೆಯರ ಕುರಿತು ಗೌರವ ಭಾವನೆಗಳು ಇರುವುದು ಸಮಾಜದಲ್ಲಿ ಅವಳಿಗೆ ಒಳ್ಳೆಯ ಸ್ಥಾನಮಾನಗಳಿರುವುದನ್ನು ಹೇಳಿರುವನು.

ತನ್ನ ಸಮಕಾಲೀನ ಮಹಿಳೆಯರಲ್ಲಿ ಭಕ್ತಿ, ಶಾಂತಿ, ತಾಳ್ಮೆ, ಸಹನೆ, ಒಳ್ಳೆಯ

ಗುಣಗಳಿಂದ ಪ್ರತಿಷ್ಠೆಯನ್ನು ಪಡೆದಿದ್ದರು. ಅವರಲ್ಲಿ ಯಾವುದೇ ರೀತಿಯ ಕಪಟಗುಣಗಳಿಲ್ಲದಿರುವುದು ಅವರು ಮದನ ಸತಿಯರು ಸೌಂದರ್ಯವತಿಯರು. ಲೋಕದ ಉಪಕಾರಿಗಳು ಎಂದಿರುವುದು ಮಹಿಳೆಯರಿಗೆ ಆಗಿನ ಕಾಲದಲ್ಲಿ ದೊರೆತಿರುವ ಗೌರವಗಳು. ಋಗ್ವೇದದಲ್ಲಿಯು ಮಹಿಳೆಯರಿಗೆ ಶ್ರೇಷ್ಠ ಸ್ಥಾನಮಾನಗಳಿದ್ದವು ಎಂಬುದನ್ನು ನೆನಪಿಸಿದಂತಿದೆ. ಮಹಿಳೆಯಿಂದಲೇ ಸಮಾಜ ಸುಧಾರಣೆಯಾಗುವುದೆಂದು ಭಾವಿಸಿದಂತಿದೆ. ತನ್ನ ಪರಿಸರದಲ್ಲಿ ದುಷ್ಟ ಸ್ತ್ರೀಯರು ಇಲ್ಲವೆಂದು ಹೇಳಿದ್ದಾನೆ.

"ಬಿಡುಮುಡಿದ ಮಲ್ಲಿಗೆಯ ಮುಗುಳುಗಳು ಸೂಸುತಿರೆ
ಕಡೆಗಣ್ಣುಗಳ ಕಾಂತಿ ಕುಡಿಮಿಂಚು ಬೀರುತಿರೆ
ತೊಡೆಗಳಭಾರಕ್ಕೆ ಸರ್ವಾಂಗ ಬಳ್ಕುತಿರೆ ಬಡನಡುವಿನ ಬಲಾಜನಂ
ಕಡವರದ ಸೌಧಗಳನೇರುತ್ತೆ ತಮತಮಗೆ
ಮೃಡರೂಪ ಮಹಾಲಿಂಗ ಜಡೆಯ ಜಂಗಮವರನ
ಸಡಗರವ ನೋಡುತ್ತ ಕರಜಡಜಗಳ ಮುಗಿದು ಬೆಡಗಿನಿಂದ ಬಣ್ಣಿಸಿದರು"[೨೧]

ಇಲ್ಲಿ ಬಸವಕವಿಯು ರಸಿಕ ಚಕ್ರಿಯಾಗಿ ಕಂಗೊಳಿಸುತ್ತಾನೆ. ಕರ್ನಾಟಕದ ವರ್ಣನೆಯನ್ನು ಈ ಹಿಂದೆಯೆ ವಿವರವಾಗಿ ಪರಿಚಯಿಸಲಾಗಿದೆ. ಬಸವತೀರ್ಥದಿಂದ ನೀರುತರುವ ನಾರಿಯರ ಚಿತ್ರಣ ಶೃಂಗಾರ ರಸದ ಕಾರಂಜಿಯಾಗಿದೆಯೆಂದರೆ ಅತಿಶಯೋಕ್ತಿಯಾಗಲಾರದು.

"ಬಡನಡುವುಬಳ್ಳುತಿರೆ ಬಟ್ಟಮೊಲೆಯದುರುತಿರೆ
ನಿಡುಜಡೆಯು ಚಿನ್ನೊಳಗೆಯಾಡುತ್ತಿರೆ ಕಡೆಗಣ್ಣ
ಕುಡಿಮಿಂಚ ಸೊಡರು ಬಿತ್ತರಲಾಗ ಕನ್ನವುರಮಳ್ಳಾಡೆ ಜಘನಂಗಳು
ಪೊಡೆರೆ ಕಾಲುಂಗುರಗಳೊದರುತಿರೆ ನಿರಿಗಳಂ
ಅಡಿಗಡಿಗೆ ಬೆಡಗಿನಿಂದೊದೆವುತ್ತ ಕಡವರದ
ಕೊಡಪೊತ್ತ ಚೆಲ್ವೆಯರ ಗಡಣದಿಂ ಕಂಗೊಳಿಸಿತಾ ತೀರ್ಥ ಭೂಪಾಲನೆ"[೨೨]

ಇಲ್ಲಿ ಕವಿಯ ನಿರೀಕ್ಷಣಾ ಶಕ್ತಿ ರಸಿಕರನ್ನು ನಿಜವಾಗಿಯೂ ಆನಂದಪಡಿಸುತ್ತದೆ. ನೀರೆಯರು ನೀರಿಗೆಗಳನ್ನು ಅಡಿಗಡಿಗೆ ಬೆಡಗಿನಿಂದ ಒದೆವುತ್ತಿದ್ದರಂತೆ. ಕೊಡಮುಡಿಯಭಾರದಿಂದ ಕೊರಳು ಕೊಂಕುತ್ತಿದ್ದಿತಂತೆ ಇಂತಹ ವರ್ಣಣೆಗಳಿಂದ

ಕವಿ ಸಹಜವಾದ ನಿರೂಪಣೆಗಳಿಂದ ರಸಿಕರ ರಸಿಕತೆಯನ್ನು ಜಾಗೃತಗೊಳಿಸುತ್ತಿದೆ.

ಈ ಪದ್ಯದಲ್ಲಿ ಕವಿಯು ಸೂಕ್ಷ ನಿರೀಕ್ಷಣಾ ಶಕ್ತಿಯು ರಸಿಕರನ್ನು ನಿಜವಾಗಿಯೂ ಮಂತ್ರಮುಗ್ಧರನ್ನಾಗಿಸುತ್ತಾನೆ. ಇಂಥ ರಸವತ್ತಾದ ವರ್ಣನೆಗಳಿಂದ ಕವಿ ಸಹಜವಾದ ನಿರೂಪಣಾ ಕೌಶಲದಿಂದಲೂ ಕಾವ್ಯ ಮನೋಹರವಾಗಿದೆ. ಭಕ್ತರ ಭಕ್ತಿಯನ್ನು ರಸಿಕರ ರಸಿಕತನವನ್ನು ಬಡಿದೆಪ್ಪಿಸಿ ಮಹಾಲಿಂಗೇಶ್ವರರ ಪ್ರಶಾಂತ ಭವ್ಯ ವ್ಯಕ್ತಿತ್ವದ ದರ್ಶನ ಮಾಡಿಸಿ, ದಿವ್ಯ ಉಪದೇಶ ಕೇಳಿಸಿ ಮಹಾಲಿಂಗಲೀಲೆಯು ಸಾರ್ಥಕವಾಗುತ್ತದೆ.

"ಮುತ್ತಿನಾರುತಿ ಪಿಡಿದು ಮಹರಾಜನರ್ಧಾಂಗಿ
ವೃತ್ತಸ್ತನಭಾರದಿಂ ಬಳ್ಳುವಂತಾಗ
ಚಿತ್ತಜಾಂತಕ ಸಂಘಗಳಿಗೆರಗಿ ಬೆಳಗುತ್ತ ಜಯತೆಂದು ಕೊಂಡಾಡಲು
ಮತ್ತೆ ಗಜಗಮನೆಯರು ತಮತಮಗೆ ಕೈಮುಗಿಯೆ
ಬಿತ್ತರದ ಚತುರಂಗಬಲಕೆ ಬೀಳ್ಕೊಟ್ಟು ನೃಪೆ
ನತ್ತೆ ಸುಖಮಿರ್ದನಾ ಮಹಿಮನಂ ಓಲೈಸಿ ಗಿರಿಜಾತೆ ಲಾಲಿಸುವುದು"[೨೩]

ಕವಿಯು ಮಹಾರಾಜನ ಪತ್ನಿಯು ಮುತ್ತಿನಾರತಿ ಹಿಡಿದಾಗ ಅಂಗಗಳನ್ನು ವರ್ಣಿಸಿರುವುದು. ರಾಜರ ಪತ್ನಿಯರು ಸುಂದರವಾಗಿರುತ್ತಿದ್ದರು. ಅವರ ಅಂಗಾಂಗಳು ಸುಂದರವಾಗಿರುತ್ತಿದ್ದವು ಎನ್ನುವುದರಲ್ಲಿ ಕವಿಯು ರಸಿಕತೆಯಿಂದ ಮೆರೆದಿದ್ದಾನೆ. ಆತನ ರಸಿಕತೆಯ ಭಾವನೆಗಳು ತೋರ್ಪಡಿಸಿವೆ.

ಹೀಗೆ ಬಸವಕವಿಯು ತನ್ನ ಸಮಕಾಲೀನ ಮಹಿಳೆಯರ ಗುಣಗಳು ಒಳ್ಳೆಯದಾಗಿದ್ದು ಅವರ ಅಂಗಾಂಗಗಳ ವರ್ಣನೆ ಅವನ ರಸಿಕತನವನ್ನು ಪ್ರಸ್ಥಾಪಿಸಿದ್ದಾನೆ.

೫.೭ ರೋಗಗಳು :

ಮಹಾಲಿಂಗಲೀಲೆಯಲ್ಲಿ ಬಸವಕವಿಯು ಹಲವು ರೋಗಗಳ ಕುರಿತು ತಿಳಿಸಿರುವನು.

"ಮಾರತೋಪದ್ರವದ ರೋಗಮದು ಬಿಡದೆನ್ನ
ಘೋರಿಸುತ್ತಿರೆ ಕಂಡು ಕಾರುಣ್ಯದೇಳ್ಗೆಯಿಂ"[೨೪]

"ಬಸವರಾಜಂಗೆಂದು ಭಕ್ತಿಯಿಂ ನಿರ್ಮಿಸಿದ

ಮಿಸುಪ ಪದರಕ್ಷೆಗಳ ಕಂಡತುಳ ಮತ್ಸರದಿ
ಬಿಸರದಿಂ ತಾ ಮೆಟ್ಟವೇಳೆ ನಲು ಕೊಡದೊಡಂ ಬಿಡದೆ ಮಧು ವರಸಂಕ್ಯಾನು
ನಿಸರದಿಂದ ಮೆಟ್ಟಲ್ಕೆ ದೇಹತೊನ್ನುಮದಾಗಿ
ಬಸಿಮುತಿರೆ ಕ್ರಿಮಿಗಳಿಂ ಕೊಳೆತೊಂದು ದಿನ ದಾಸಿ
ವಸವ ತರಲೆಂದುಸುರಿ ತಾ ಬರಲ್ಕಾಗಲ್ಲಿ ಮುಂಬಿನೊಳು ಕಂಗೊಳಿಸುವ"೨೫

"ಕುಲಭ್ರಷ್ಟನಿವನೆಂದು ಸರ್ವ ವಿಪ್ರೋತ್ತಮರು
ತಿಳಿದು ಪುರಮಂ ಬಿಡಿಸಿ ಹೊರಹಾಕಲಾ ಶ್ವಪಚ
ಲಲನೆಯೊಳು ಬಹುಕಾಲ ಸ್ಮರಸುಖದಿ ಬಾಳುತಿರೆ ಘನತೊನ್ನುಮಾವರಿಸುತ
ಮುಳ ಕೀವು ಸುರಿವುತ್ತ ದೇಹಮದು ಕೊಳೆವುತಿರೆ
ಪೊಲಗೇರಿಯಂ ಬಿಟ್ಟು ಸುಡುಗಾಡದೊಳ್ ಬಂದು
ಕಳವಳಿಸಿ ಬಿದ್ದು ಹರಣಗಳೆವುತಿರಲಿಲ್ಲ ಬೂದಿಯೊಳು ಮಲಗಿರ್ಪುವಾ"೨೬

"ಬತ್ತಿರದ ಕಣ್ಬೇನೆ ಬರಲು ಬೀಗರು ಕೂಡಿ
ಇತ್ತ ನೋಡೈ ಲಿಂಗವಿದೆಯೆಂದು ಹಾಸ್ಯದಿಂ
ಕತ್ತಲದ ಮನೆಯಲ್ಲಿ ಕಬ್ಬಿಣದ ಬಳ್ಳುವಂ ಕೈಗೆ ತೋರಲ್ ತುಂಬುವ"೨೭

"ಇರಲವನಕಾಯ್‌ದೊಳ್ ಘನತರದ ಮಲರೋಗ
ಪರಿಪರಿಯ ಬಾಂದೆಯಿಂ ನೋಯಿಸುತ್ತಿರಲಾಗ
ಪರಮವೈದ್ಯರ ಕರೆಸಿ ಪರಕಿಸುತ ಬೇಷಜಗಳಂ ಮಾಡೆ ತದ್ರೋಗವು
ಪೊರೆಯೇರಿ ದಿನಕೊಂದು ಚಂದದಿಂ ನೆರೆಕಾಡು
ತಿರೆ ಮನದಿ ಮರಗುತ್ತ ಪೂರ್ವಸಂಚಿತಕರ್ಮ
ದುರವಣಿಯ ತಗ್ಗಿಸುವರಾಶಿನುತ ಗೋವಿಂದರಾಜನುಮ್ಮಳಿಸುತ್ತಿರೆ"೨೮

"ಮತ್ತೊಂದು ದಿನದಲಿ ಮಹರಾಜನೇರುತಿಹ
ಬಿತ್ತರದ ಸ್ವರ್ಗಗಾಮಿನಿಯೆಂಬ ತುರಗಮದು
ತತ್ತರಿಸಿ ಚಾಂದಣಿಯ ಬೇನೆಯಿಂ ಬಿದ್ದೊಡನೆ ಸಂಕಟದಿ ಪೊರಳಾಡುತ
ಮತ್ತೆ ಪರಮೌಷಧಿಯ ಮಾಡಿದರೆ ರೋಗಮದು

ಒತ್ತರಿಸಿ ಕಾಡುತ್ತೆ ವೃದ್ಧಿಯಾಗುತ್ತಿರಲು
ಚಿತ್ತದೊಳು ಮರಗುತಿರೆ ಮಾಲೋಜಿ ಭೂಪಾಲನಸುಗಿಳೆದುದೇನೆಂಬೆನು"[೨೯]

ಹಿಂದೆ ಸಮಾಜದಲ್ಲಿ ದುರ್ಗವ್ವನ ಬೇನೆ, ಕಾಲರಾದಂತಹ ರೋಗಗಳ ಭೀಕರತೆಯನ್ನು ನೆನಪಿಗೆ ತರುತ್ತದೆ. ಅಂದರೆ ಬ್ರಾಹ್ಮಣನಿಗೆ ಹರಕೆ ಹೊರುವುದರಿಂದ ಚರ್ಮರೋಗ ನಿವಾರಣೆಯಾಗುತ್ತದೆ. ಯಮನೂರು ದರ್ಗಾದ ಕೆರೆಯ ತೀರ್ಥ ರೋಗನಿವಾರಕ ಎನ್ನುವ ನಂಬಿಕೆಗಳನ್ನು ಗಮನಿಸಬೇಕು. ಹಾಗೆ ಬಸವಕವಿಯು ಮಹಾಲಿಂಗಲೀಲೆಯಲ್ಲಿ ಮಾರುತೋಪದ್ರವ ರೋಗ, ತೊನ್ನು ರೋಗ, ಘನತೊನ್ನುರೋಗ, ಕಣ್ಬೇನೆ, ಮಲರೋಗ, ಚಾಂದಣಿಯ ರೋಗಗಳು ಬಸವಕವಿಯ ಕಾಲದಲ್ಲಿ ಘೋರವಾಗಿದ್ದವು. ಇವುಗಳು ಔಷಧಿಗಳಿಂದ ಬೇಗನೆ ನಿವಾರಣೆಯಾಗುತ್ತಿರಲಿಲ್ಲವೆಂದು ಕವಿಯು ತೊನ್ನು ರೋಗವನ್ನು ಘನತೊನ್ನುರೋಗವೆಂದು ಅದರ ಭೀಕರತೆ, ಅದರ ನೋವು ಗಂಭೀರವಾಗಿರುವುದನ್ನು ಹೇಳಿರುವನು. ಸಂಪ್ರದಾಯದಲ್ಲಿ ದೇವರಲ್ಲಿ ನಂಬಿಕೆಯುನ್ನಿಟ್ಟು ಹರಕೆಗಳನ್ನು ಮಾಡಿ ತಮಗೆ ಅಂಟಿದ ನೋವನ್ನು ನಿವಾರಣೆಗೊಳಿಸಿಕೊಳ್ಳುತ್ತಿದ್ದರು. ಇಂತಹ ನೋವುಗಳನ್ನು ನಿವಾರಣೆಗೆ ಭಕ್ತಿ ಪೂಜೆ ಪ್ರಾರ್ಥನೆ ಮಂತ್ರಗಳ ಜಪಗಳನ್ನು ಮಾಡಿ ಪರಿಹರಿಸಿಕೊಳ್ಳುತ್ತಿದ್ದ ಸಂಪ್ರದಾಯವಿತ್ತು ಎಂದು ಬಸವಕವಿಯು ವಿವರಿಸಿದ್ದಾನೆ.

೫.೮ ವೈಧವ್ಯ :

"ಗಂಡನಿಲ್ಲದ ಬಾಲೆ ರಂಡಿತನದಿಂದಾನು
ಖಂಡ ಶರ್ಕರೆ ಪಾಲು ಕೊಂಡು ಕುಡಿಸಿರ್ದೆ ಗಡ
ಬಂಡು ಮಾಡಿದೆ ಮಗನೆ ಹಿಂಡು ಬಳಗದೊಳೆನ್ನ ಕೇಡಿಂಗೆ ನೆಲೆಯಿಲ್ಲವು
ಪುಂಡಭೂಪತಿಯಾನೆ ಶುಂಡಾಲಶುಂಡಿಲಕೆ
ತುಂಡಲದ ಉಂಡಿಯೋಲು ನೀ ಮಡಿದ ಬಳಿಕ ಭೂ
ಮಂಡಲದೊಳೆನಗಾರುಗತಿಯುಂಟು ನೋಡುವುಡೆ ಕುವರ ಮಹಾಲಿಂಗಾಖ್ಯನೆ"[೩೦]

ಬಸವ ಕವಿಯು ತನ್ನ ಕೃತಿಯಲ್ಲಿ ಕೆಲವುಕಡೆ ದುಃಖದ ಉನ್ನತ ಛಾಯೆಯನ್ನು ಚಿತ್ರಿಸಿದ್ದಾನೆ. ಮಹಾಲಿಂಗಾಖ್ಯೆಯನ ತಾಯಿಯಾದ ಗಂಗವ್ವೆಯು ಮಗನಿಗಾಗಿ ಹಲಬುತ್ತಾಳೆ.

ಸಮಾಜದಲ್ಲಿ ಕವಿಯು ಹೆತ್ತವರಿಗೆ ಹೆಗ್ಗಣ ಮುದ್ದು ಎನ್ನುವಂತೆ ಬಾಲ್ಯದಲ್ಲಿಯೇ ಮದುವೆಯಾಗಿ ಗಂಡನನ್ನು ಕಳೆದುಕೊಂಡಕಿಗೆ ಸಮಾಜದಲ್ಲಿ ರಂಡಿ ಎನ್ನುವ ಮಾತು ನಮ್ಮ ಸಂಸ್ಕೃತಿಯಲ್ಲಿ ಪ್ರಚಲಿತವಿರುವುದನ್ನು ಹೇಳಿದ್ದಾನೆ.

ತಾಯಿ ಮಗುವಿನ ಮೇಲಿರುವ ಅತಿಯಾದ ಪ್ರೀತಿಯನ್ನು ಕೊಂಡು ಹಾಲುಸಕ್ಕರೆಯನ್ನು ಕುಡುಸುತ್ತಿರುವುದು ಒಂದೇ ಗಂಡು ಮಗುವಿನ ಪ್ರಾಮುಖ್ಯತೆಯ ಕುರಿತು ಕವಿ ಗುರುತಿಸುವನು.

ಸಮಾಜದಲ್ಲಿ ಗಂಡ, ಮಕ್ಕಳು ಇಲ್ಲದೆ ಜೀವನ ನಡೆಸುವುದು ಆಗುವುದಿಲ್ಲ. ಇಲ್ಲಿ ಮಹಿಳೆಯರಿಗೆ ಆಗತಕ್ಕ ನೋವನ್ನು ಗುರುತಿಸಿದ್ದಾನೆ. ನಮ್ಮ ಒಳ್ಳೆಯ ಸಂಸ್ಕೃತಿಯಲ್ಲಿ ಗಂಡನನ್ನು ಕಳೆದುಕೊಂಡ ಸ್ತ್ರೀಗೆ ಯಾವುದೇ ಶುಭಕಾರ್ಯಕ್ರಮಗಳಲ್ಲಿ ಭಾಗವಹಿಸುವಂತಿಲ್ಲ. ಭಾಗವಹಿಸಿದರೆ ಅದು ಅನಿಷ್ಟವೆಂಬುದನ್ನು ಕವಿಯು ಅದಕ್ಕೆ ರಂಡಿತನ ಎಂದಿರುವುದು ಎದ್ದು ಕಾಣುತ್ತದೆ.

ಸಮಾಜದಲ್ಲಿ ಮಹಿಳೆ ಬದುಕಬೇಕಾದರೆ ಆಕೆ ಒಳ್ಳೆಯ ಜೀವನ ಸಾಗಿಸಲು ಆಕೆಯು ವಿವಾಹವಾಗಿ ಗಂಡ ಜೊತೆಗೆ ಮಕ್ಕಳನ್ನು ಪಡೆದರೆ ಮಾತ್ರ ಆಕೆಗೆ ಒಳ್ಳೆಯ ಸ್ಥಾನಗಳು ಸಿಗುತ್ತಿದ್ದವು ಎಂಬುದನ್ನಿಲ್ಲಿ ಹೇಳುತ್ತಾನೆ.

“ನಂಬೆಣ್ಣನೆಂಬ ನಾಮವನಾಂತು ಪ್ರೇಮದಿಂ
ಅಂಬಿಕಾಪತಿಯ ಪಾದಾಂಬುಜಂಗಳ ಬಿಡದೆ
ನಂಬಿ ಪೂಜಿಸಿ ನಿತ್ಯ ಪಡಿಹೊನ್ನುಗಳು ಪಡೆದು ಶಂಬರಾರಿಯ ತಾಪದಿಂ
ರಂಬೆಯರಿಗಿತ್ತು ಮೆರೆವುತ್ತೆಖಿಳ ಮಹಿಮಾವ
ಲಂಬನದೊಳಿರುತಿರಲು ಒರ್ವಸತಿ ಕುವರಂಗೆ
ನಂಬೆಣ್ಣನೆಂಬ ನಾಮವನ್ನಿಟ್ಟು ತತ್ಪುರದಿ ಸಲಹುತ್ತ ಸಂತಸದೊಳು”[೩೧]

ಸಮಾಜದಲ್ಲಿ ರಸಿಕತೆಯು ಒಂದು ವಿಶಿಷ್ಟವಾಗಿರುವಂತಹದ್ದು ಎಂಬುದನ್ನು ಕವಿಯು ಹೇಳಿದ್ದಾನೆ. ಇಲ್ಲಿ ನಂಬೆಣ್ಣನೆಂಬುವನು ಪ್ರತಿದಿನವೂ ಪಡಿಹೊನ್ನಗಳನ್ನು ರಂಬೆಯರಿಗೆ ಕೊಟ್ಟು ಮೆರೆಯುತ್ತಿದ್ದನು ಎನ್ನುವಲ್ಲಿ ಸಮಾಜದಲ್ಲಿ ಅಪ್ಸರೆಯರಿಗೆ ಸಾಕಷ್ಟು ಹಣ, ಬೆಳ್ಳಿ, ಬಂಗಾರವನ್ನು ಕೊಟ್ಟು ಅವರ ಸೌಂದರ್ಯ ಕಾಣುವಂತ ವಿಶಿಷ್ಟ ಪದ್ಧತಿಯೂ ಆಗಿನ ಕಾಲದಲ್ಲಿಯೂ ಇತ್ತು ಎನ್ನುವುದನ್ನು ಹೇಳುತ್ತಾನೆ.

ರಂಬೆಯರು ಸಮಾಜದಲ್ಲಿ ಅನೇಕ ಜನರನ್ನು ತಮ್ಮ ನೃತ್ಯದಿಂದ ಸಂತೋಷಗೊಳಿಸುತ್ತಿದ್ದರು. ಇವರು ವಿವಿಧ ಬಂಗೀಯ ನೃತ್ಯಗಳ ಮೂಲಕ ಸಂಗೀತದ ಮಾಯಾಲೋಕದಲ್ಲಿ ತೇಲಾಡಿಸುತ್ತಿದ್ದರು. ಅದಕ್ಕಾಗಿಯೇ ಅವರಿಗೆ ಜೀವನೋಪಾಯಕ್ಕೆ ಪಡಿಹೊನ್ನು ಕೊಡುತ್ತಿರುವುದನ್ನು ಕಾಣುತ್ತೇವೆ.

ಸಮಾಜದಲ್ಲಿ ಹುಟ್ಟಿದಂತ ಮಗುವಿಗೆ ಹೆಸರನ್ನಿಡುವುದು ನಮ್ಮ ಸಂಸ್ಕೃತಿ. ಮುಂದೆ ಆತನನ್ನು ಪ್ರೀತಿಯಿಂದ ಸಲುಹುದು ಒಂದು ವಿಶಿಷ್ಟಬಗೆಯಾಗಿದೆ. ಕವಿಯು ನಾಮವಿಡುವುದರ ಕುರಿತು ತಿಳಿಸಿರುವನು.

"ನೋಡೆಂದು ತೋರಿಸಲ್ ಚಿತ್ತದೊಳು ನೋಡುತ್ತ
ಕಾಡಿನೊಳು ಬಂದೆನ್ನ ಬೇಡಿ ಬುತ್ತಿಯನುಂಡ
ನಾಡೊಡೆಯನಲ್ಲೆಂದು ಬಾಡುತ್ತ ಮನದೊಳಗೆ ಮರುಗಿ ಕಂಬನಿದುಂಬಂತ
ಆಡಲೇನಕಟ ಜನದೊಳಗೆ ಎನ್ನನ್ನುನಗೆ
ಗೇಡು ಮಾಡಿದನೆಲಾ ಮುದಿಮಲ್ಲಿನಾಥಯ್ಯ
ಗಾಡದಿಂ ನಡೆಗೊಂಡು ಬಂದುದಕೆ ಫಲಮಾಗಲಿಲ್ಲ ಬಡ ಭೂತಳದೊಳು"[೩೨]

ಇಲ್ಲಿ ಕವಿಯು ಸಿದ್ಧೇಶನ ಕಾಯಕನಿಷ್ಠೆಯ ಕುರಿತು ಸೊಗಸಾಗಿ ತಿಳಿಸಲು ಮಲ್ಲಿಕಾರ್ಜುನನಿಗೆ ನಾಡೊಡೆಯನೆಂದು ಕರೆದಿರುವುದು ಅತಿಯಾದ ಗೌರವವನ್ನು ಕೊಟ್ಟಿದ್ದಾನೆ. ಮಲ್ಲಿಕಾರ್ಜುನನ ಮೂಲಕ ಸಿದ್ಧೇಶನನ್ನು ಪರೀಕ್ಷೆಗೆಗೊಳಪಡಿಸಿದಂತಿದೆ.

ಮಲ್ಲಿಕಾರ್ಜುನ ಇಲ್ಲದಿರುವುದು. ಅದರಿಂದ ಮನಸ್ಸಿಗೆ ನೋವಾಗಿರುವುದು ಜಗತ್ತಿನಲ್ಲಿಯೇ ಸಹಿಸಲಾಗದ ಅವಮಾನ ನಗೆಗೇಡು ಮಾಡಿದನು. ಮಲ್ಲಿಕಾರ್ಜುನನನ್ನು ಮುದಿಮಲ್ಲಿನಾಥ ಎಂದು ಬೈದದ್ದು ಇಲ್ಲಿ ಸಿದ್ಧೇಶನು ದುಃಖಿಸುವಂತೆ ಓದಿದವರ ಹೃದಯ ಕಂಬನಿಯುವಂತೆ ಸಿದ್ಧೇಶನಲ್ಲಿ ದುಃಖವನ್ನು ತುಂಬಿದ್ದಾನೆ.

ಅರುಣೋದಯ : ಕೃತಿಯಲ್ಲಿ ಹಲವು ರೀತಿಯ ವರ್ಣನೆಗಳಲ್ಲಿ ಅರುಣೋದಯದ ಕುರಿತು ಪ್ರಸ್ತಾಪಿಸಿದ್ದಾನೆ.

"ಬೀರಿತ್ತು ಕತ್ತಲೆಯು ಜಾರಿತ್ತು ಮುಂಬೆಳಗು
ತೋರಿತ್ತು ತಂಗಾಳಿ ಬೀರಿತ್ತು ಚಕ್ರನೆಲ

ವೇರಿತ್ತು ಜನ್ನವಕ್ಕಿಯ ದುಗುಡ ಹೇರಿತ್ತು ತಾವರೆಗೆ ಸಂತಸಮದು
ಸೇರಿತ್ತು ನೈದಿಲೆಯಾರಿತ್ತು ಭ್ರಮರಾಳಿ
ಹಾರಿತ್ತು ವಿಹರತಲೆ ಹಾಡಿತ್ತು ಪೊಳ್ತುದಲೆ
ದೋರಿತ್ತು ಬಳಿಕವರ ನೇಮಕ್ಕೆ ಸಾರಿತ್ತು ತಕ್ಕಲದೊಳ ಜಗದಲಿ"[೩೩]

ಇಲ್ಲಿ ನಾಗಖ್ಯ ಮುಪ್ಪಿನಾಂಬೆಯರ ದಂಪತಿಗಳ ನಿಯಮ ಕೈಗೂಡಲು ಅವರು ಅಂದುಕೊಂಡಂತೆ ಕೆಲಸಗಳು ಸಾರಾಸಗತಗಿ ನಡೆಯಲು ಅರುಣೋದಯವನ್ನು ಕವಿಯು ಮಾಡಿಸಿದಂತಿದೆ. ಕವಿಯ ಪರಿಸರವು ಅರಣ್ಯದಿಂದ ಕೂಡಿರುವುದರಿಂದ ಕವಿಯೇ ಅರುಣೋದಯವನ್ನು ಸೃಷ್ಟಿಸಿ ಅದರ ವರ್ಣನೆಯನ್ನು ಸೊಗಸಾಗಿ ಮೂಡಿಬರಲು ಸ್ವಂತಿಕೆಯನ್ನು ಮೆರೆಸಿದಂತಿದೆ.

೫.೯ ಸಿದ್ಧೇಶನ ಸಾಮಾಜಿಕ ಕಾರ್ಯಗಳು :

"ಸೊಲ್ಲಪಳ್ಳೆಂಬ ಪೆಸರಂ ಬಿಡಿಸಿ ಭೂತಳದಿ
ಎಲ್ಲರರಿವಂತೆ ಶ್ರೀ ಸೊನ್ನಲಾಪುರವೆನಿಸಿ
ಅಲ್ಲಲ್ಲಿ ಲಿಂಗನದಿ ಜಾನಗಳ ನೆಲೆಗೊಳಿಸಿ ಭಕ್ತಿಪೂರ್ವಕದಿಂದಲಿ
ಅಲ್ಲಲ್ಲಿ ಮಠ ಶಿವಾಲಯಗಳಂ ನಿರ್ಮಿಸುತ
ಅಲ್ಲಲ್ಲಿ ಕರೆ ಬಾವಿಗಳ ಮಾಡಿ ಸಂತತಂ
ಸಲ್ಲಲಿತ ಕೈಲಾಸಮೆಂದೆನಿಸಿ ಸಿದ್ಧೇಶ್ವರಂ ಮೆರೆದನೆಂಬೆನು"[೩೪]

ಮಹಾಯೋಗಿ ಎಂದು ಕರೆಸಿಕೊಂಡಿರುವ ಸಿದ್ಧರಾಮನ ಶ್ರೇಷ್ಠ ಸಮಾಜದ ಜನರಿಗೋಸ್ಕರ ಮಹತ್ಕಾರ್ಯಗಳನ್ನು ಮಾಡಿರುವುದನ್ನು ಕವಿಯು ಇದೊಂದು ಸಮಾಜಸುಧಾರಣೆಯ ಘನಕಾರ್ಯ ಎಂದು ನಿರೂಪಿಸಿದ್ದಾನೆ. ಸಮಾಜದಲ್ಲಿ ಜನರು ಸುವ್ಯವಸ್ಥೆಯಿಂದಿರಲು ಭಕ್ತಿಯು ನೆಲೆಸಲೆಂದು ಲಿಂಗ ನದಿಗಳ ಸ್ಥಾಪನೆ, ಮಠಗಳು, ಶಿವಾಲಯಗಳು ನಿರ್ಮಿಸುವುದು. ಅಲ್ಲಲ್ಲಿ ಕೆರೆ ಬಾವಿಗಳನ್ನು ನಿರ್ಮಿಸುವುದು ಇವೆಲ್ಲವೂ ಸಮಾಜದಲ್ಲಿಯ ಅತ್ಯಂತ ಶ್ರೇಷ್ಠ ಘನಕಾರ್ಯಗಳನ್ನು ಕೈಗೊಂಡಿರುವುದು ಜನರ ಉದ್ಧಾರಕ್ಕೆಂದು ಜನರು ಸುಖ ಸಂತೋಷ ನೆಮ್ಮದಿಯಿಂದ ಬಾಳಿರೆಂದು ಈ ಕಾರ್ಯಗಳನ್ನು ಕೈಗೊಂಡಿರುವುದನ್ನು ಬಸವಕವಿಯು ನಿರೂಪಿಸುತ್ತಾ ಸಮಾಜದಲ್ಲಿಯ ಸಮಸ್ಯೆಗಳ ಕುರಿತು ಹೆಚ್ಚಿನ ಗಮನ ಹರಿಸಿದಂತಿದೆ.

"ಮಂಡಿತ ಪದಾರ್ಥಗಳ ಮೀಸಲವನಳಿದೆನುತ
ದಂಡದಿಂ ಪೊಡೆಯೆ ತಲೆವೊಡೆದು ಮಡಿದಿಳಿಯೊಳಗೆ
ದಿಂಡುಗೆಡಹಲು ಬಳಿಕ ಕಾಲ್ವಿಡಿದು ವಿಳೆದವನ ಪಿತ್ತಲದ ಚಿಪ್ಪಾಡಿಯೊಳ್"[೩೫]

ಬಸವಕವಿಯು ಸಮಾಜದಲ್ಲಿ ಅಕಸ್ಮಾತಾಗಿ ಸಹಜವಾಗಿ ಮರಣ ಹೊಂದಿದವರನ್ನು ಯಾರಿಗೂ ತಿಳಿಯದ ಹಾಗೆ ಮುಚ್ಚಿಡುವ ಸಂದರ್ಭಗಳನ್ನು ತಿಳಿಸಿರುವನು. ಹಿತ್ತಲವೆಂಬ ಶಬ್ದದಿಂದ ಸಮಾಜದಲ್ಲಿ ಮನೆಯ ನಿರ್ಮಾಣದ ಸಂದರ್ಭದಲ್ಲಿ ಹಿಂದುಗಡೆ ಹಿತ್ತಲವನ್ನು ದನಕರುಗಳನ್ನು ಕಟ್ಟಲು ನಿರ್ಮಿಸುತ್ತಿದ್ದರು. ಅದು ದನಗಳಿಗೆಂದೆ ಮೀಸಲಾಗಿದ್ದು. ಚಿಪ್ಪಾಡಿ ಎಂಬುದು ದನಗಳು ತಿಂದುಳಿದ ಮೇವನ್ನು ಚಿಪ್ಪಾಡಿಯೆಂದು ಹಿತ್ತಲುಗಳು ವಿಶಾಲವಾಗಿರುತ್ತಿದ್ದವು. ಕೆಲವೊಂದು ಸಂದರ್ಭದಲ್ಲಿ ಕೆಟ್ಟ ಸಮಾಜಬಾಹೀರ ಕೆಲಸಗಳು ಹಿತ್ತಲಲ್ಲಿ ನಡೆಯುತ್ತಿದ್ದವು ಎಂಬುದನ್ನು ತನ್ನ ಸಮಕಾಲೀನ ಸುವ್ಯವಸ್ಥೆಯಲ್ಲಿ ಹಿತ್ತಲಗಳ ನಿರ್ಮಾಣ ಪ್ರಚಲಿತದಲ್ಲಿತ್ತು ಎಂಬುದನ್ನು ನಿರೂಪಿಸಿದ್ದಾನೆ. ಸಮಾಜದಲ್ಲಿ ಮನೆಯು ವಿವಿಧ ಆಕಾರಗಳನ್ನು ಪಡೆದು ನಮ್ಮ ಪರಂಪರೆಯನ್ನು ಬಿಂಬಿಸಲು ಪ್ರಮುಖವಾಗಿದ್ದವು ಎಂಬುದು ತಿಳಿಯುತ್ತದೆ.

೫.೧೦ ಮೈಲಿಗೆಯ ಕುರಿತು :

"ಮತ್ತೊಂದು ದಿನ ತನ್ನ ಕುವರನನ್ನೊಡೆಗೊಂಡು
ಉತ್ತಮಾಂಗನೆ ನದಿಯ ತೀರಕ್ಕೆ ಪೋಗುತ್ತೆ
ಚಿತ್ತದನುರಾಗದಿಂ ಮೈಲಿಗೆಯ ವಸನಗಳ ತೊಳೆಯುತ್ತೆ ಮಿರಲಾಕ್ಷಣಂ
ಅತ್ತಿತ್ತಲೆಡೆಯಾಡಿ ಜಲಮದ್ಯದೊಳ್ ತರಳ
ನಿತ್ತಾಡುತಿರಲೊಂದು ಬಿತ್ತರಸುವಾರ್ವರನು
ಒತ್ತರದಿ ಬಂದು ಪಿಡಿದೆಳೆದು ನುಂಗಲು ಮಾತೆ ಕಾಣುತ್ತೆ ದುಃಖದಿಂದ"[೩೬]

ಕವಿಯು ಮೈಲಿಗೆಯ ಕುರಿತು ತಿಳಿಸಿದ್ದಾನೆ. ಇಲ್ಲಿ ಮಹಿಳೆಯರು ಮೈಲಿಗೆಯ, ಕೊಳೆಯಾದ ವಸ್ತುಗಳನ್ನು ತೊಳೆಯಲು ನದಿಗಳಿಗೆ ಹೋಗುತ್ತಿದ್ದರು ಅಥವಾ ಕೆರೆಗಳಿಗೆ ಹೋಗುತ್ತಿದ್ದರೆಂಬುದುದನ್ನು ತಿಳಿಯಬಹುದಾಗಿದೆ. ನದಿಗೆ ಒಂದು ಪವಿತ್ರವಾದ ಸ್ಥಾನವನ್ನು ಕೊಟ್ಟಿರುವುದರಿಂದ ಇಲ್ಲಿ ಯಾವುದೇ ರೀತಿಯ ಮೈಲಿಗೆಯನ್ನು ತೊಲೆಯುವ ಆಚರಣೆಯನ್ನು ರೂಢಿಸಿಕೊಂಡು ಬಂದಿದ್ದಾರೆ ಎನ್ನುವುದು ತಿಳಿಯುತ್ತದೆ.

ಇಂತ ನದಿಗಳಲ್ಲಿ ಜಲಚರ ಪ್ರಾಣಿಗಳು ಭಯಂಕರ ಕ್ರೂರ ಪ್ರಾಣಿಗಳಾದ ಮೊಸಳೆಯೂ ಇರುತ್ತಿದ್ದವು ಎಂಬುದು ತಿಳಿಯುತ್ತದೆ. ಜೊತೆಗೆ ಕವಿಯು ಮೊಸಳೆಗಳಿರುವುದರಿಂದ ಎಚ್ಚರಿಕೆಯನ್ನು ವಹಿಸಬೇಕೆಂದು ಹೇಳಿರುವಂತಿದೆ.

"ಸಕಲ ಪ್ರಮಥಾವಳಿಯ ಮೈಲಿಗೆಯ ವಸಗಳ
ನಿಕರಮಂ ಪೊತ್ತು ಹಳ್ಳಕೆ ಬಂದು ಮಡವಿನೊಳು
ಸುಕರದಿಂ ಮಾಚಿವಿಭು ತೊಳೆಯಾತಿರೆ ಬಸವೇಶನಾಕ್ಷಣದೊಳಾತಾಣದಾ
ನಿಕಟಕ್ಕೆ ಬಂದು ಸಾಷ್ಟಾಂಗದಿಂ ಪೊಡಮಟ್ಟು
ಅಖಿಲಾಪರಾಧಿನಾಂ ಪ್ರತಿಪಾಲಿಸೆಂದೆನುತ
ವಿಕಳದಿಂ ಕೊಂಡಾಡುತಿರೆ ಚನ್ನಬಸವೇಶ ದೂರದೊಳು ನಿಂತಿರ್ದನು"[೩೭]

ಸಮಾಜದಲ್ಲಿ ಮಾಚಿವಿಭು ಎಂಬ ವ್ಯಕ್ತಿಯು ಮೈಲಿಗೆಯ ಅರಿವೆಗಳನ್ನು ತೊಳೆಯಲು ಹಳ್ಳಕ್ಕೆ ಬಂದಿರುವುದನ್ನು ಕವಿಯು ಹಿಂದೆ ಮಲೀನವಾದ ವಸ್ತ್ರಗಳನ್ನು ಹಳ್ಳದಲ್ಲಿಯೇ ತೊಳೆಯುತ್ತಿದ್ದರು ಎಂಬುದನ್ನು ಪ್ರಸ್ತಾಪಿಸಿ ನದಿ ಹಳ್ಳಗಳು ಯಾವತ್ತು ನೀರಿನಿಂದ ಹರಿಯುತ್ತಿದ್ದವು. ಯಾವತ್ತೂ ನೀರು ಇರುತ್ತಿತ್ತು ಎಂದು ವಿವರಿಸಿದ್ದಾನೆ.

೫.೧೧ ಆಹಾರ ಧಾನ್ಯಗಳು :

ಬಸವಕವಿಯು ತನ್ನ ಸಾಮಾಜಿಕ ಪರಿಸರದಲ್ಲಿಯ ಆಹಾರಧಾನ್ಯಗಳ ಕುರಿತು ಪ್ರಸ್ಥಾಪಿಸಿದ್ದಾನೆ.

"ಪಿತ್ತಲೊಳು ಬಿತ್ತಿರ್ದ ಬತ್ತಗಳು ಮಳೆಗೆ ತೇ
ಲುತ್ತಿರಲು ಪೋಗಿ ತಾ ಕೊಂಡು ಬಂದಂಗನೆಗೆ
ಬಿತ್ತರದಿ ತೊಡಲವಳು ಹುರಿದು ಧಳಿಸುತ್ತೆಕ್ಕಿಗಳ ಮಾಡುತಾಕ್ಷಣದೊಳು"[೩೮]

"ಸಂಗಮೇಶ್ವರ ಭಕ್ತೆ ಬಸವೇಶ ಕೇಳಿನಗೆ
ಲಿಂಗಪೂಜಾ ಸಮಯದೊಳು ದಿವ್ಯಮಾಕ್ತಿಕರ
ರಂಗವಲ್ಲಿಯ ನೇಮಮುಂತಾದ ಕಾರಣಂ ಮುತ್ತುಗಳ ಮೂಗಂಡುಗಂ
ಓಂಗದಲಿ ಕೂಡು ಎನಲು ಬಿಳಿಜೋಳ ರಾಶಿಯನು
ತುಂಗಮುತ್ತುಗಳ ಮಾಡಿತ್ತನಾ ಮಹನಾಗ
ಜಂಗಮಗೆ ಕೇಳೆಂದು ಸಕರೋಜಿರಾಜನಿಗೆ ಮಹಾಲಿಂಗಮುನಿಪೇಳ್ದನು"[೩೯]

"ಇನಿದಾದ ಹುಗ್ಗಿಯನು ತಂದೀಯೆ ಬಾಂದವರು
ವನಜಾಕ್ಷಿ ಜೋಳಕ್ಕೆ ಸವಿನೋಡಿ ಮೋಹದಿಂ"[೪೦]

ಬಸವಕವಿಯು ತನ್ನ ಪರಿಸರವು ಮುಧೋಳದ ಸಮೀಪವಿರುವುದರಿಂದ ಒಣಬೇಸಾಯ ಮುಧೋಳ ನೀರಾವರಿ ಬೇಸಾಯವಿರುವುದರಿಂದ ತನ್ನ ಸಮಕಾಲೀನದಲ್ಲಿ ಕಬ್ಬು ಸಕ್ಕರೆಯನ್ನು ಹೆಸರಿಸಿರುವುದು ಭತ್ತ, ಜೋಳ ಪ್ರಮುಖ ಆಹಾರ ಧಾನ್ಯವಾಗಿತ್ತೆಂದು ಹೇಳಿದ್ದಾನೆ. ಜೊತೆಗೆ ಭತ್ತ ಗೋದಿಗಳನ್ನು ಬೆಳೆಯುವುದರಿಂದ ಹುಗ್ಗಿಯ ಎಂಬ ಉಲ್ಲೇಖವಾಡಿದ್ದಾನೆ. ಕೆಲವು ಕಡೆಗಳಲ್ಲಿ ಅಕ್ಕಿಯ ಉಲ್ಲೇಖವು ಸಿಗುತ್ತದೆ. ಹೀಗೆ ಕವಿಯು ತನ್ನ ಪರಿಸರದ ಹಲವಾರು ಆಹಾರಧಾನ್ಯಗಳನ್ನು ಹೆಸರಿಸಿದ್ದಾನೆ.

ತಿಂಡಿ-ತಿನಿಸುಗಳು :

ಬಸವಕವಿಯು ತನ್ನ ಕಾಲದ ತಿಂಡಿ ತಿನಿಸುಗಳ ಒಂದು ಪಟ್ಟಿಯನ್ನೇ ನೀಡುತ್ತಾನೆ. ಪಕ್ವನ್ನ, ಗುಳಿಗೆ, ಪಾಯಸ, ಗಾರಿಗೆ, ಗುಳ್ಳುಪಪ್ಪಡಿ, ಹೋಳಿಗೆ, ಕರಿಗಡಬು, ವಡೆ, ಹುಗ್ಗಿ ಮುಂತಾದವುಗಳನ್ನು ಬಸವಕವಿಯು ಹೆಸರಿಸಿದ್ದಾನೆ. ಹೀಗೆ ಹತ್ತು ಹಲವಾರು ತಿಂಡಿ ತಿನಿಸುಗಳು ಊಟದ ಪದಾರ್ಥಗಳನ್ನು ಪ್ರಸ್ಥಾಪಿಸಿರುವುದನ್ನು ಕಾಣುತ್ತೇವೆ.

೫.೧೨ ಹಣ್ಣು ಹಂಪಲುಗಳು :

ಕವಿಯು ಮಹಾಲಿಂಗಲೀಲೆಯಲ್ಲಿ ಹಲವು ಪ್ರಕಾರದ ಹಣ್ಣು ಹಂಪಲಗಳನ್ನು ಹೆಸರಿಸಿದ್ದಾನೆ.

"ಕದಳಿಕಂಟಕ ಕರಕ ಜಂಬುಚೂತ ಕಪಿತ್ಥ
ಮಧುರ ಫಲಸೀಳೆ ಜೆಂಬೀರ ಪನ್ನೀರಲವು
ವಿದಿತ ಪೀರುವ ನಾರಿಕೇಳದ್ರಾಕ್ಷಾಂಜೀರ ತರುವಲ್ಲರಿಗಳಿಂದಲಿ"[೪೧]
"ದಿಟ್ಟ ಶ್ರೀ ಬಸವದಂಡಾಧೀಶ ಕೂಷ್ಮಾಂಡಫಲದಲ್ಲಿ ಘನಲಿಂಗಮಂ"[೪೨]

"ಜಂಬು ಚೂತ ಕಪಿತ್ಥದ್ರಾಕ್ಷ್ಯಂಜುರದ ಫಲವ
ಕೊಂಬುವರ್ಪನ್ನೆರಡು ಸಾಸಿರಂ ಪನಸ ದಾ
ಳಿಂಬ ಪನ್ನೀರಲದ ನೀರು ಮೊದಲಾದಸಮ ಪರಿಪಕ್ವ ಫಲಜಾಲಮಂ
ಎಂಬುವರ್ಪನ್ನೆರಡು ಸಾಸಿರಂ ಖರ್ಜೂರಿಯ

ರಂಭಾದಿ ಪಂಚಭಕ್ಷ್ಯಗಳ ವರ ನೇಮದವ
ರಿಂಬಿನಿಂ ನೆಲಸಿರ್ದರಾ ಬಸವನಾಲಯದೊಳೆಂಬೆನಚ್ಚರಿಯನು”[೪೩]

ಕವಿಯು ವಿಶಾಲ ಭೌಗೋಳಿಕ ಪರಿಸರದಲ್ಲಿ ಜೀವಿಸಿದ್ದರಿಂದ ಅನೇಕ ರೀತಿಯ ಗಿಡಗಳು ಅವುಗಳಿಗೆ ಗಿಡಗಳಿಗೆ ಬಾರವಾಗುವಂತೆ ಹಣ್ಣುಗಳಾಗುತ್ತಿದ್ದವು ಎಂದು ಹೇಳುತ್ತೆ. ಜಂಬು, ಸೀತಾಫಲ, ಜಂಬೀರಹಣ್ಣು, ಪನ್ನೀರಲ, ದ್ರಾಕ್ಷಿ, ನಾರಿತೇಳ, ಅಂಜೀರ, ಕುಂಬಳ, ಪೇರಲ, ಖರ್ಜೂರ, ತೆಂಗು ಮುಂತಾದ ಫಲಗಳು ಪ್ರಸಿದ್ಧವಾಗಿದ್ದವು ಎಂದು ಹೇಳುತ್ತಾನೆ. ಇವುಗಳ ಸವಿಯನ್ನುಂಡ ಕವಿಯು ಇವುಗಳ ರಸರುಚಿಯ ಕುರಿತು ಮಹಲಿಂಗಲೀಲೆಯಲ್ಲಿ ವಿವರಿಸಿದ್ದಾನೆ.

೫.೧೩ ಪ್ರಾಣಿಗಳು :

“ಆನೆಯರೆಯಟ್ಟಿದೊಡೆ ಪುಲಿಯು ಘರ್ಜಿಸಿದೊಡಂ”[೪೪]

ಕವಿಯು ಪರಿಸರವು ಅರಣ್ಯದಿಂದ ಕೂಡಿರುವುದರಿಂದ ಅಲ್ಲಿ ಆನೆ, ಹುಲಿ, ಅಶ್ವ, ಮೊಲ, ನರಿ, ಕೋಳಿ, ಮೊಸಳೆ ಮುಂತಾದ ಪ್ರಾಣಿಗಳನ್ನು ಹೆಸರಿಸಿದ್ದಾನೆ. ಅಂದರೆ ಆನೆಗಳನ್ನು ರಾಜನು ಚತುರಂಗಬಲದಲ್ಲಿ ಶ್ರೇಷ್ಠತೆ ಮತ್ತು ಕುದುರೆಗಳು ಇರುವುದರಿಂದ ಇವುಗಳು ಸಾಕುಪ್ರಾಣಿಗಳಾಗಿದ್ದವು. ಇಲ್ಲಿ ಹುಲಿಯಂತ ಮತ್ತು ನರಿಯಂತಹ ಕ್ರೂರ ಪ್ರಾಣಿಗಳು ಇರುವುದನ್ನು ಅವುಗಳು ಪ್ರಮುಖ್ಯತೆಯನ್ನು ಇನ್ನೂ ಹಲವಾರು ಪ್ರಾಣಿಗಳನ್ನು ಹೆಸರಿಸಿದ್ದಾನೆ.

೫.೧೪ ಪಕ್ಷಿಗಳು :

ಕವಿಯು ತನ್ನ ಪರಿಸರದಲ್ಲಿ ಕಲರವವನ್ನುಂಟುಮಾಡುವ ಚಿಲಿಪಿಲಿಗುಟ್ಟುವ ಸಾಕುವ ಪಕ್ಷಿಗಳನ್ನು ಹೆಸರಿಸಿದ್ದಾನೆ.

“ತನಿವಣ್ಣುಗಳನುಂಡು ಚಪ್ಪರಿವ ಶುಕಗಳಿಂ
ಕೊನರುಗಳ ತಿಂದುಲಿದು ನಲಿವುತಿಹ ಪಿಕಗಳಿಂ
ಬನಪೂವುಗಳ ತಿಂದು ಉಂಡು ಝೇಂಕರಿಸುತ್ತ ಪಾಡುತಿಹ ಷಡ್ಪದಗಳಿಂ”[೪೫]

“ಅರಗಿಳಿಗಳಿಂ ದಳಿತ ಚೊತ ದ್ರಾಕ್ಷಾರಸವು”[೪೬]

"ಕುಮುದಕ್ಕೆ ಮುದವೇರಿ ಕಮಲಂಗಳೆದಿಯಾರೆ
ಭ್ರಮರಗಳು ಪಾರಾಡೆ ಚಕ್ರಗಳ ಮುಖಬಾಡೆ
ಪ್ರಮುದವದು ಜೊನ್ನವಕ್ಕಿಗೆ ಕೂಡೆ ನಭದಲ್ಲಿ ತಾರಾಳಿಗಳು ಮೂಡಲು
ತಿಮಿರಾಳಿ ತಲೆದೋರೆ ಪಕ್ಷಿಗಳು ನೆರೆಸಾರೆ
ಭ್ರಮಿಸಿ ಕಳ್ಳರು ಕೂಡೆ ಪಾಣ್ಬೆಯರು ನಲಿದಾಡೆ
ಕಮಲಾಪ್ತನಸ್ತಿಮಯ ಕಾಲದೊಳಗಿಂತಾಗುತ್ತಿರಲತ್ತಲಾ ಕಾದಲರ್"[೪೭]

ಪಕ್ಷಿಗಳು ಕಿವಿಗಳಿಗೆ ಇಂಪಾದ ಧ್ವನಿಯನ್ನು ನೀಡುತ್ತವೆ. ಇವು ವಿವಿಧ ತರಹದ ಬಣ್ಣಗಳಿಂದ ಕಣ್ಣಿಗೆ ಮುದವನ್ನು ನೀಡುತ್ತವೆ. ಪರಿಸರದಲ್ಲಿ ವಿವಿಧ ತರಹದ ಪಕ್ಷಿಗಳಿರುವುದು ಕಂಡುಬಂದಿದೆ. ಶುಕಗಳು, ಪಿಕಗಳು, ಷಟ್ಪದಗಳು, ಗಿಳಿಗಳು, ಭ್ರಮಗಳು, ಜೋನ್ನಪಕ್ಷಿ, ಗೂಗೆಗಳು, ನವಿಲು ಮುಂತಾದ ಪಕ್ಷಿಗಳ ಸಂಕುಲವನ್ನೇ ಹೆಸರಿಸಿದ್ದಾನೆ. ಕವಿಯ ಪರಿಸರವು ಹಸಿರು ಬಂಜರು ಅರಣ್ಯ ಪ್ರದೇಶದಿಂದ ಕೂಡಿರುವುದರಿಂದ ಅನೇಕ ರೀತಿಯ ಫಲ ಪುಷ್ಪಗಳು ಸಿಗುವುದರಿಂದ ಇಲ್ಲಿ ಅನೇಕ ವಿದದ ಪಕ್ಷಿಗಳು ಜೀವಿಸಿದ್ದವು ಎಂದು ತನ್ನ ಕೃತಿಯಲ್ಲಿ ಪ್ರಸ್ಥಾಪಿಸಿದ್ದಾನೆ.

೫.೧೫ ಪುಷ್ಪಗಳು :

ಕವಿಯ ಪರಿಸರದಲ್ಲಿ ಅನೇಕ ರೀತಿಯ ಪುಷ್ಪಗಳಿರುವುದನ್ನು ತಿಳಿಸಿರುವನು. ಪುಷ್ಪಗಳು ಕಣ್ಣಿಗೆ ಅಂದವನ್ನು ಬ್ರಮರಗಳಂತೆ ಕೀಟಗಳಿಗೆ ಆಹಾರ ಸರ ರುಚಿಯನ್ನೀಡುವುದರಿಂದ ಇವುಗಳ ಪ್ರಾಮುಖತೆ ಹೆಚ್ಚಾಗಿದೆ. ಹೂವುಗಳು ಎಂತವರ ಮನಸ್ಸನ್ನು ಸೂರೆಗೊಳ್ಳುತ್ತವೆ. ಕೆಲವು ಅಂದವಾಗಿದ್ದರೆ ಕೆಲವು ಸುಗಂಧವನ್ನು ಸೂಸುತ್ತವೆ. ಇದರಿಂದ ಇವುಗಳನ್ನು ಪೂಜೆಗೆ ಮುಡಿಯಲು, ಹಲವಾರು ಕಾರ್ಯಕ್ರಮಗಳಿಗೆ ಇವುಗಳ ಅಂದಕ್ಕಾಗಿ ಬಳಸುವುದುಂಟು.

"ಮುದಿತ ಜಂಪಕ, ಜಾಜಿ, ಬಕುಳ, ಯೂಥಿಕೆ ಕುಂದ
ಬದಗಿರ್ಪ ಸೌಗಂಧ ಕನಕೇತರೆ ಮುಖ್ಯ
ಮದುರಸಕೆ ಮಾತೃಕಾಸ್ಥಾನವೆಂಬಂದದಿಂ ಮನಕೆ ಮಂಜುಲವಾದುದು"[೪೮]

ಇಲ್ಲಿ ಚಂಪಕ, ಜಾಜಿ, ಬಕುಳ, ಯೂಥಿಕೆ, ಕುಂದ, ತಾವರೆ, ಎಕ್ಕಿವಕ್ಕಿ ಹೂ

ಮುಂತಾದವುಗಳಿಂದ ಪೂಜೆಗೆ ಸಲ್ಲುವಂತಹ ಹೂಗಳನ್ನು ಕವಿಯು ಅವುಗಳ ಸೂಸುವ ಸುಗಂಧದ ಕುರಿತು ಕವಿಗೆ ಹೂವಿನ ಮೇಲೆ ಭಕ್ತಿಯಿರುವುದನ್ನು ಕಾಣುತ್ತೇವೆ. ಅದಕ್ಕಾಗಿ ಕವಿಯು ವಿವಿಧ ರೀತಿಯ ಹೂವುಗಳನ್ನು ಹೆಸರಿಸಿದ್ದಾನೆ.

೫.೧೬ ಆಯುಧಗಳು :

"ಒತ್ತಿದರೆ ಸೊನ್ನಿಂಗೆ ಹತ್ತದಲೆ ಹಾರಿಗಳ
ಸುತ್ತುವರಿದು ಭಾಣದಿಂದೆತ್ತಿ ಪೂಡೆಯಲ್ಕೆ ಕತರಿಸದಳ್ಳನಿತವು"[೪೯]

ಇಲ್ಲಿ ಕವಿಯು ಸಮಾಜದಲ್ಲಿ ಬಳಕೆಯಿರುವ ಕೆಲವು ಆಯುಧಗಳನ್ನು ಹೆಸರಿಸಿದ್ದಾನೆ. ಆಯುಧಗಳು ಯುದ್ಧಕ್ಕೆ ಬಾವಿ ತೆಗೆಯಲು ಪ್ರಾಣಿಗಳ ಬೇಟೆಗೆ ವಿವಿಧ ಆಯುಧಗಳನ್ನು ಹೆಸರಿಸಿದ್ದಾನೆ. ಯುದ್ಧದಲ್ಲಿ ಖಡ್ಗ ಕತ್ತಿಗಳು ಬೇಟೆಯಾಡಲು ಬಾಣ, ಭರ್ಚಿ, ಚೂರಿಗಳನ್ನು ಬಾವಿ ತೆಗೆಯಲು ಹಾರಿ, ಭಾಣಗಳನ್ನು ಬಳಸುತ್ತಿದ್ದರು. ಹೀಗೆ ತನ್ನ ಸಮಕಾಲೀನ ವಿವಿಧ ಕಾರ್ಯಗಳಿಗೆ ವಿವಿಧ ಆಯುಧಗಳನ್ನು ಬಳಸುವುದರ ಕುರಿತು ಪ್ರಸ್ಥಾಪಿಸಿದ್ದಾನೆ.

೫.೧೭ ಸಾಮಾಜಿಕ ವ್ಯವಸ್ಥೆ :

"ಪರಿಮಳದ ಪನ್ನೀರುಗಳ ನೆಗಳುತಿಹ ಪರಮ
ತರಳಾಕ್ಷೀಯರ ಬೆಡಗಿನಿಂದಪ್ಪುತಿಹ ದಿವ್ಯ
ತರಮಾದ ಅರವಟಿಕೆಗಳು ಅನ್ನಛತ್ರಂಗಳಿಂದಿರದಲೊಪ್ಪುತಿಹುವ
ಪರಿವುತಿಹ ನದನದಳಿಂ ಪಲ್ವಲಂಗಳಿಂ
ಪರಮ ಪಟ್ಟಣಗಳಿಂದಗ್ರಹಾರಂಗಳಿಂ
ದರಿದನಿಸುತಿಹ ದೇಶ ಮಹಾಲಿಂಗ ಮುನಿವರನ ಕಣ್ಗೆ ಮಂಜುಲವಾದುದು"[೫೦]

ಬಸವಕವಿಯು ತನ್ನ ಕಾಲದಲ್ಲಿಯ ಪಟ್ಟಣ ವ್ಯವಸ್ಥೆ ಶಿಕ್ಷಣದ ವ್ಯವಸ್ಥೆಯನ್ನು ಸುಂದರವಾಗಿ ಎಲ್ಲಿ ನಡೆಯುತ್ತಿತ್ತು ಎಂಬುದನ್ನು ತಿಳಿಸಿರುವನು. ಸಾಮಾಜಿಕ ಸುವ್ಯವಸ್ಥೆಯಲ್ಲಿ ಒಂದಾಗಿರುವ ಅರವಟಿಕೆಗಳ ನಿರ್ಮಾಣ. ಅರವಟಿಕೆಗಳು ಜನರ ತೃಷೆಯನ್ನು ಈಡೇರಿಸುತ್ತಿದ್ದವು. ಜನರಿಗೆ ನೀರಿಗಾಗಿ ಗಲ್ಲಿಗಳಲ್ಲಿ ಅಲ್ಲಲ್ಲಿ ರಸ್ತೆಗಳ ಬದಿಯಲ್ಲಿ ಅರವಟಿಕೆಗಳನ್ನು ಸ್ಥಾಪಿಸುತ್ತಿದ್ದರು. ಇದರಿಂದ ಸಮಾಜದಲ್ಲಿಯ ಕುಡಿವ ನೀರಿನ ಸೌಲಭ್ಯ ಅತ್ಯುತ್ತಮವಾಗಿರುವುದು ಕಂಡುಬರುತ್ತದೆ.

ಅಗ್ರಹಾರಗಳು ಸಮಾಜವನ್ನು ಸುಶಿಕ್ಷಿತರನ್ನಾಗಿ ಮಾಡುವ ಪ್ರಮುಖ ಕೇಂದ್ರಗಳಾಗಿದ್ದವು. ಅಗ್ರಹಾರಗಳು ಶಿಕ್ಷಣ ಕೇಂದ್ರಗಳಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಇದರಿಂದ ಪ್ರಾಚೀನ ಕಾಲದಲ್ಲಿಯೂ ಅಗ್ರಹಾರಗಳಲ್ಲಿ ಶಿಕ್ಷಣ ನಡೆಯುತ್ತಿತ್ತು ಎಂದು ಗೊತ್ತಾಗುತ್ತಿದೆ. ಇದರಿಂದ ಬಸವಕವಿಯ ಕಾಲದಲ್ಲಿಯೂ ಅಗ್ರಹಾರಗಳಲ್ಲಿ ಶಿಕ್ಷಣ ನಡೆಯುತ್ತಿತ್ತು ಎನ್ನುವುದರಗೋಸ್ಕರ ಸಾರ್ವಜನಿಕ ಸುವ್ಯವಸ್ಥೆಯನ್ನು ಪ್ರಸ್ಥಾಪಿಸಿದ್ದಾನೆ. ಹೀಗೆ ಸಮಾಜದ ಒಳ್ಳೆಯ ಕೆಲಸಗಳು ಈ ತೆರನಾಗಿರುವುದನ್ನು ನಿರೂಪಿಸಿದ್ದಾನೆ.

"ಅರಗಿಳಿಗಳಿಂ ದಳಿತ ಜೊತ ದ್ರಾಕ್ಷಾರಸವು
ಮರುತಹಲೆಯಿಂ ಬೀಳ್ದೆ ಜಂಬಾ ದಾಳಿಮಸಾರ
ತರ ಘರ್ಷಣದ ಘಾತದಿಂದ ಧರೆಗೆ ಬೀಳ್ದೊಡೆದ ತೆಂಗಿನೆಳೆನೀರಂಗಳು
ವರ ಸರಸ್ವತಿ ಭಾಗೀರಥಿ ಯಮಾನೆಯೂಲ್ ಬಿಡದೆ
ಪರಿವುತಿರೆ ತದ್ದೇಶ ನರರಿಂಟಿ ಬಾಳುತ್ತೆ
ಮರಳಿ ತತ್ತೆರುಗಳಿಗದೇ ಸಾರನುಣಿಸುತ್ತೆ ಪೊರೆವರುದ್ಯಾವನಗಳ"[೫೧]

ಕವಿಯು ಕಲ್ಪನಾ ಲೋಕದಲ್ಲಿ ಗರಿಬಿಚ್ಚಿ ಹಕ್ಕಿ ಹಾರಾಡಿದಂತೆ ಚಿತ್ರಿಸಿದ್ದಾನೆ. ಮಾರುತಗಳಿಂದ ತೆಂಗಿನ ಫಲಗಳು ಕೆಳಗೆ ಬಿದ್ದು ಅದರ ನೀರು ಭೂಮಿಯ ಮೇಲೆ ಸರಸ್ವತಿ, ಭಾಗೀರತಿ, ಯಮುನಾ ನದಿಗಳಾಗಿ ಹರಿದಿವೆ ಎಂಬುದು ಕವಿಯ ಕಲ್ಪನೆಯು ಆಘಾದವಾಗಿರುವುದು ಕಂಡುಬರುತ್ತದೆ. ಅಂದರೆ ಸರಸ್ವತಿ, ಭಾಗೀರಥಿ, ಯಮುನಾ ನದಿಗಳು ಹಿಂದೂ ದೇಶದಲ್ಲಿ ಶ್ರೇಷ್ಠವಾದವುಗಳು. ಇವೆಲ್ಲವೂ ಸುಂದರಭರಿತವಾದ ಸಿಹಿನೀರಿನಿಂದ ತೆಂಗಿನ ನೀರಿನಿಂದಲೇ ಹರಿಯುತ್ತವೆ ಎನ್ನುವುದರಲ್ಲಿ ನದಿಯ ಪವಿತ್ರತೆ ತೆಂಗಿನ ಮಹತ್ವವನ್ನು ವಿವರಿಸಿದ್ದಾನೆ.

೫.೧೮ ಉಡುಗೆ-ತೊಡುಗೆ :

ಸಮಾಜದ ಶ್ರೀಮಂತಿಕೆಗೆ ಸಮಾಜದಲ್ಲಿ ಮನುಷ್ಯನ ಶಿಸ್ತುಬದ್ಧತೆಗೆ ಆತನ ಉಡುಗೆ ತೊಡುಗೆಯೇ ಕಾರಣ. ಸಮಾಜದಲ್ಲಿ ಗೌರವಾದರಗಳು ದೊರೆಯಲು ಒಂದೊಂದು ಸಂದರ್ಭದಲ್ಲಿ ಬೇರೆಬೇರೆ ಬಟ್ಟೆಗಳನ್ನು ಧರಿಸುವುದರಿಂದ ಆತ ಶ್ರೇಷ್ಠನಾಗುತ್ತಾನೆ.

ನಮ್ಮ ಸಂಪ್ರದಾಯದಲ್ಲಿ ಪ್ರಾಚೀನ ಕಾಲದಲ್ಲಿ ಮರದ ತೊಗಟೆಗಳನ್ನು ಗಿಡದ

ತಪ್ಪಲುಗಳನ್ನು ಮೈಯನ್ನು ಮುಚ್ಚಲು ಧರಿಸುವುದುಂಟು. ಬರಬರುತ್ತ ಆತನ ಜ್ಞಾನ ಸಂಸ್ಕೃತಿಗಳು ಬದಲಾದಂತೆ ಆತನ ವಸ್ತ್ರ ವಿನ್ಯಾಸ ಬದಲಾಗುತ್ತ ಬಂದಿತು. ಈಗ ಆತನ ವ್ಯಕ್ತಿತ್ವವನ್ನು ಆತನ ಶಿಸ್ತುಬದ್ಧ ಅರಿವೆಗಳಿಂದ ಗೊತ್ತಾಗುತ್ತದೆ. ಅವರ ಉಡುಪುಗಳಿಂದ ಜಾತಿ, ಕುಲ, ಕಾರ್ಯಗಳು ಮುಂತಾದವುಗಳನ್ನು ತಿಳಿಸಲು ಸಹಾಯವಾಗುತ್ತವೆ.

"ಚಿತ್ತರದಿ ಭಸಿತ ರುದ್ರಾಕ್ಷಿಗಳನಂಗದೊಳು
ಚಿತ್ತಜಾಂತಕ ತಳೆದು ಮಲಿನಾಂಬರಂಗಳಂ
ಸುತ್ತಿಕೊಂಡಾಕ್ಷಣಂ ಕಚ್ಚುಟವನಾಂತಿರದೆ ನೆರೆಗಂಬಳಿಯ ಗೊಂಪಿಯಿಂ
ಸತ್ತಕರ ಪಗಲಿನೊಳ್ ಪೊತ್ತಾಗಿ ಕೆಂಬಾವಿ
ಉತ್ತಮದ ಬಾಜಾರದೊತ್ತಿನೊಳಗೆಡೆವಿಡದೆ
ಮೃತ್ಯುಹರ ಭೋಗಣ್ಣನಾಲಯವ ಕೇಳುತ್ತ ಮುಂದೆಸೆಗೆ ನಡೆಗೊಂಡನು"[೫೨]

"ನೀಲಲೋಚನೆಯುಟ್ಟ ಪೀತಾಂಬರವ ತನ್ನ
ಸೂಳೆ ಬೇಡಲು ಬಂದು ವಿಟಜಂಗಮೋತ್ತಮಂ
ಭಾಳಾಕ್ಷಪದಭಕ್ತ ಬಸವೇಶನಂ ಕೇಳೆ ನಲವೇರಿ ಮಾನಸದೊಳು
ನೀಲಪಂಕಜನೇತ್ರೆಯನು ಕರೆಸಿ ಶಾಲಿಯಂ
ಒಲಿದೀಯ ಬೇಕೆನಲು ಶರಣೆಂದು ನಮಿಸಲ್ಕೆ
ನೀಳಕರ ಪಲ್ಲವದಿ ತಜ್ಜಂಗಮಂ ಸೆಳೆಯಲೇನೆಂದು ಬಣ್ಣಿಸುವೆನು"[೫೩]

"ಲೆಕ್ಕವಿಲ್ಲದೆ ಪೀತ ವಸನಗಳು ಬರುತಿರಲಾ
ಲೆಕ್ಕಿಸುತ ವಿಟಜಂಗಮಂ ಮನದಿ ಹಿಗ್ಗುತ್ತೆ"[೫೪]

ಮಲೀನ ಅಂಬರಗಳನ್ನು ಸುತ್ತಿಕೊಂಡು ಕಾಫೀನಧರಿಸಿ, ನೆರೆಗಂಬಳಿ ಹೊದೆದುಕೊಂಡು ಬೋಗಣ್ಣ ಬಜಾರದಲ್ಲಿ ಹೋಗುವುದು. ಇಲ್ಲಿ ಬಳಕೆಯಾದಂತ ವಸ್ತುಗಳು, ಸೀರೆಗಂಬಳಿ, ಕೌಪೀನಗಳು ಮುಖ್ಯವಾಗಿವೆ. ಮಹಿಳೆಯರು ಪೀತಾಂಬರಗಳನ್ನು ಧರಿಸುತ್ತಿದ್ದರು ಎಂಬುದು ತಿಳಿಯುತ್ತದೆ. ಬೆಲೆಬಾಳುವ ಉಡುಪಾಗಿದ್ದು ಇವುಗಳನ್ನು ಮಹಿಳೆಯರು ವಿವಿಧ ಪ್ರಮುಖ ಕಾರ್ಯಗಳಲ್ಲಿ ಧರಿಸುತ್ತಿದ್ದರು ಎಂಬುದನ್ನು ಕವಿಯು ತನ್ನ ಸಮಕಾಲೀನ ಸಮಾಜ ವ್ಯವಸ್ಥೆಯಲ್ಲಿ ಉಡುಗೆ ತೊಡುಗೆಗಳು ಪ್ರಮುಖ ಪಾತ್ರವಹಿಸಿದ್ದವು ಎಂದು ವಿವರಿಸಿದ್ದಾನೆ.

೫.೧೯ ಸಮಾರೋಪ :

ಬಸವಕವಿಯು ಸಾಮಾಜಿಕ ಸಂಬಂಧಗಳು, ಸಾಮಾಜಿಕ ವ್ಯವಸ್ಥೆ, ದೈವ, ಕುಟುಂಬದ ಮೂಲಕ ಸಾಮಾಜಿಕ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುವ ಹಲವಾರು ಅಂಶಗಳಿಂದ ಪ್ರಸ್ಥಾಪಿಸಿದ್ದಾನೆ. ಸಮಾಜ ವ್ಯವಸ್ಥೆಯಲ್ಲಿ ತನ್ನ ಬೌಗೋಳಿಕ ಪರಿಸರವನ್ನೇ ಪ್ರಮುಖವಾಗಿ ಆಧಾರವಾಗಿಟ್ಟುಕೊಂಡು ಸಮಾಜಿಕ ವ್ಯವಸ್ಥೆಯನ್ನು ರೂಪಿಸಿದಂತಿದೆ.

ಸಮಾಜದಲ್ಲಿಯ ದಂಪತಿಗಳ ಆದರ್ಶತೆ ಅವರ ಕೆಲಸ ಕಾರ್ಯಗಳ ಕುರಿತು ಸಾಮಾಜಿಕ ವ್ಯಕ್ತಿತ್ವ, ಜಾತಿಗಳು, ಮಹಿಳೆಯರ ಗುಣ ಮತ್ತು ಸೌಂದರ್ಯ, ರೋಗಗಳು, ದುಃಖ, ಮೈಲಿಗೆ, ಆಹಾರಧಾನ್ಯ, ತಿಂಡಿತಿನಿಸುಗಳು, ಹಣ್ಣುಹಂಪಲ, ಪ್ರಾಣಿಗಳು, ಪಕ್ಷಿಗಳು, ಹೂವುಗಳು, ಆಯುಧಗಳು, ಉಡುಗೆ-ತೊಡುಗೆಗಳನ್ನು ಬಹಳಷ್ಟು ವಿವರವಾಗಿ ವಿವರಿಸಿದ್ದಾನೆ. ಇದರಿಂದ ನಮ್ಮ ಸಂಪ್ರದಾಯ, ನಂಬಿಕೆ, ಸಂಸ್ಕೃತಿಗಳ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳನ್ನು ಕೂಲಂಕುಷವಾಗಿ ಚರ್ಚೆಗೆ ಕೈಗೆತ್ತಿಕೊಂಡಂತಿದೆ. ಇವುಗಳ ಮೂಲಕ ಸಾಮಾಜಿಕ ಜೀವನವನ್ನು ಹೇಗೆ ಸುವ್ಯವಸ್ಥಿತವಾಗಿಟ್ಟುಕೊಳ್ಳಬೇಕೆಂಬ ಹಲವಾರು ಅಂಶಗಳು ಬೆಳಕಿಗೆ ಬಂದಿವೆ. ಹೀಗೆ ಕವಿಯು ಹಲವಾರು ಅಂಶಗಳನ್ನು ಸಾಮಾಜಿಕ ಅಂಶಗಳಿಂದ ಪ್ರಸ್ಥಾಪಿಸಿದ್ದಾನೆ.

ಕೊನೆಯ ಟಿಪ್ಪಣಿಗಳು :

೧. ಜಾನಪದ ಕೈಪಿಡಿ – ಡಾ. ಎಚ್. ಜೆ. ಲಕ್ಕಪ್ಪಗೌಡ, ಪುಟ ೫೧೮
೨. ಮಹಾಲಿಂಗಲೀಲೆ – ಸಂಧಿ ೪, ಪದ್ಯ ೧೪, ಪುಟ ೩೮
೩. ಮಹಾಲಿಂಗಲೀಲೆ – ಸಂಧಿ ೪, ಪದ್ಯ ೧೫, ಪುಟ ೩೯
೪. ಮಹಾಲಿಂಗಲೀಲೆ – ಸಂಧಿ ೭, ಪದ್ಯ ೩೪, ಪುಟ ೭೩
೫. ಮಹಾಲಿಂಗಲೀಲೆ – ಸಂಧಿ ೭, ಪದ್ಯ ೩೮, ಪುಟ ೭೪
೬. ಮಹಾಲಿಂಗಲೀಲೆ – ಸಂಧಿ ೮, ಪದ್ಯ ೩, ಪುಟ ೭೭
೭. ಮಹಾಲಿಂಗಲೀಲೆ – ಸಂಧಿ ೧೦, ಪದ್ಯ ೧೧, ಪುಟ ೯೩
೮. ಮಹಾಲಿಂಗಲೀಲೆ – ಸಂಧಿ ೧೦, ಪದ್ಯ ೧೨, ಪುಟ ೯೩
೯. ಮಹಾಲಿಂಗಲೀಲೆ – ಸಂಧಿ ೧೦, ಪದ್ಯ ೧೬, ಪುಟ ೯೪
೧೦. ಮಹಾಲಿಂಗಲೀಲೆ – ಸಂಧಿ ೧೦, ಪದ್ಯ ೧೭, ಪುಟ ೯೪
೧೧. ಮಹಾಲಿಂಗಲೀಲೆ – ಸಂಧಿ ೧೦, ಪದ್ಯ ೧೮, ಪುಟ ೩೧
೧೨. ಮಹಾಲಿಂಗಲೀಲೆ – ಸಂಧಿ ೩, ಪದ್ಯ ೨೭, ಪುಟ ೩೧
೧೩. ಮಹಾಲಿಂಗಲೀಲೆ – ಸಂಧಿ ೩, ಪದ್ಯ ೨೮, ಪುಟ ೩೧
೧೪. ಮಹಾಲಿಂಗಲೀಲೆ – ಸಂಧಿ ೩, ಪದ್ಯ , ಪುಟ ೩೧
೧೫. ಮಹಾಲಿಂಗಲೀಲೆ – ಸಂಧಿ ೩, ಪದ್ಯ ೩೦, ಪುಟ ೩೧

೧೬. ಮಹಾಲಿಂಗಲೀಲೆ – ಸಂಧಿ ೩, ಪದ್ಯ ೩೧, ಪುಟ ೩೨
೧೭. ಮಹಾಲಿಂಗಲೀಲೆ – ಸಂಧಿ ೩, ಪದ್ಯ ೩೩, ಪುಟ ೩೨
೧೮. ಮಹಾಲಿಂಗಲೀಲೆ – ಸಂಧಿ ೪, ಪದ್ಯ ೨೪, ಪುಟ ೪೧
೧೯. ಮಹಾಲಿಂಗಲೀಲೆ – ಸಂಧಿ ೪, ಪದ್ಯ ೨೫, ಪುಟ ೪೧
೨೦. ಮಹಾಲಿಂಗಲೀಲೆ – ಸಂಧಿ ೧೨, ಪದ್ಯ ೩೫, ಪುಟ ೧೩೦
೨೧. ಮಹಾಲಿಂಗಲೀಲೆ – ಸಂಧಿ ೧೨, ಪದ್ಯ ೧೧, ಪುಟ ೧೨೪
೨೨. ಮಹಾಲಿಂಗಲೀಲೆ – ಸಂಧಿ ೧೨, ಪದ್ಯ ೪೭, ಪುಟ ೧೩೩
೨೩. ಮಹಾಲಿಂಗಲೀಲೆ – ಸಂಧಿ ೧, ಪದ್ಯ ೨೩, ಪುಟ ೨
೨೪. ಮಹಾಲಿಂಗಲೀಲೆ – ಸಂಧಿ ೧೪, ಪದ್ಯ ೨೩, ಪುಟ ೧೪೯
೨೫. ಮಹಾಲಿಂಗಲೀಲೆ – ಸಂಧಿ ೧೪, ಪದ್ಯ ೬೫, ಪುಟ ೧೫೯
೨೬. ಮಹಾಲಿಂಗಲೀಲೆ – ಸಂಧಿ ೧೫, ಪದ್ಯ ೭೫, ಪುಟ ೧೭೬
೨೭. ಮಹಾಲಿಂಗಲೀಲೆ – ಸಂಧಿ ೧೭, ಪದ್ಯ ೪, ಪುಟ ೨೦೮
೨೮. ಮಹಾಲಿಂಗಲೀಲೆ – ಸಂಧಿ ೨೦, ಪದ್ಯ ೨, ಪುಟ ೨೫೫
೨೯. ಮಹಾಲಿಂಗಲೀಲೆ – ಸಂಧಿ ೭, ಪದ್ಯ ೨೨, ಪುಟ ೭೪
೩೦. ಮಹಾಲಿಂಗಲೀಲೆ – ಸಂಧಿ ೭, ಪದ್ಯ ೩೪, ಪುಟ ೭೩
೩೧. ಮಹಾಲಿಂಗಲೀಲೆ – ಸಂಧಿ ೧೦, ಪದ್ಯ ೩೬, ಪುಟ ೯೯
೩೨. ಮಹಾಲಿಂಗಲೀಲೆ – ಸಂಧಿ ೫, ಪದ್ಯ ೨೨, ಪುಟ ೫೪
೩೩. ಮಹಾಲಿಂಗಲೀಲೆ – ಸಂಧಿ ೧೦, ಪದ್ಯ ೪೧, ಪುಟ ೧೦೦
೩೪. ಮಹಾಲಿಂಗಲೀಲೆ – ಸಂಧಿ ೧೬, ಪದ್ಯ ೨೬, ಪುಟ ೧೮೭
೩೫. ಮಹಾಲಿಂಗಲೀಲೆ – ಸಂಧಿ ೭, ಪದ್ಯ ೩೫, ಪುಟ ೭೮
೩೬. ಮಹಾಲಿಂಗಲೀಲೆ – ಸಂಧಿ ೧೪, ಪದ್ಯ ೧೨, ಪುಟ ೧೪೬
೩೭. ಮಹಾಲಿಂಗಲೀಲೆ – ಸಂಧಿ ೧೬, ಪದ್ಯ ೧೮, ಪುಟ ೧೮೫
೩೮. ಮಹಾಲಿಂಗಲೀಲೆ – ಸಂಧಿ ೧೬, ಪದ್ಯ ೮೦, ಪುಟ ೨೦೧
೩೯. ಮಹಾಲಿಂಗಲೀಲೆ – ಸಂಧಿ ೧೮, ಪದ್ಯ ೨೮, ಪುಟ ೨೩೩
೪೦. ಮಹಾಲಿಂಗಲೀಲೆ – ಸಂಧಿ ೪, ಪದ್ಯ ೧೫, ಪುಟ ೩೯
೪೧. ಮಹಾಲಿಂಗಲೀಲೆ – ಸಂಧಿ ೧೫, ಪದ್ಯ ೫೭, ಪುಟ ೧೭೯
೪೨. ಮಹಾಲಿಂಗಲೀಲೆ – ಸಂಧಿ ೧೬, ಪದ್ಯ ೬೪, ಪುಟ ೧೯೭
೪೩. ಮಹಾಲಿಂಗಲೀಲೆ – ಸಂಧಿ ೫, ಪದ್ಯ ೧೨, ಪುಟ ೪೮
೪೪. ಮಹಾಲಿಂಗಲೀಲೆ – ಸಂಧಿ ೪, ಪದ್ಯ ೧೭, ಪುಟ ೩೯
೪೫. ಮಹಾಲಿಂಗಲೀಲೆ – ಸಂಧಿ ೪, ಪದ್ಯ ೧೬, ಪುಟ ೩೯
೪೬. ಮಹಾಲಿಂಗಲೀಲೆ – ಸಂಧಿ ೫, ಪದ್ಯ ೧೬, ಪುಟ ೪೯
೪೭. ಮಹಾಲಿಂಗಲೀಲೆ – ಸಂಧಿ ೪, ಪದ್ಯ ೧೫, ಪುಟ ೩೯
೪೮. ಮಹಾಲಿಂಗಲೀಲೆ – ಸಂಧಿ ೧೧, ಪದ್ಯ ೮, ಪುಟ ೧೦೫
೪೯. ಮಹಾಲಿಂಗಲೀಲೆ – ಸಂಧಿ ೪, ಪದ್ಯ ೨೦, ಪುಟ ೪೦
೫೦. ಮಹಾಲಿಂಗಲೀಲೆ – ಸಂಧಿ ೪, ಪದ್ಯ ೧೬, ಪುಟ ೩೯
೫೧. ಮಹಾಲಿಂಗಲೀಲೆ – ಸಂಧಿ ೧೧, ಪದ್ಯ ೪೫, ಪುಟ ೧೧೪
೫೨. ಮಹಾಲಿಂಗಲೀಲೆ – ಸಂಧಿ ೧೬, ಪದ್ಯ ೭೧, ಪುಟ ೧೯೯
೫೩. ಮಹಾಲಿಂಗಲೀಲೆ – ಸಂಧಿ ೧೬, ಪದ್ಯ ೭೨, ಪುಟ ೧೯೯

ಅಧ್ಯಾಯ – ೬

ರಾಜಕೀಯ ಅಂಶಗಳು

ಅಧ್ಯಾಯ – ೬

ರಾಜಕೀಯ ಅಂಶಗಳು

೬.೧ ಪ್ರವೇಶ :

ಬಸವಕವಿಯ ವಿರಚಿತ ಮಹಾಲಿಂಗಲೀಲೆಯಲ್ಲಿ ರಾಜಕೀಯ ಅಂಶಗಳು ಬೆಳಕಿಗೆ ಬಂದಿರುವುದನ್ನು ಕಾಣುತ್ತೇವೆ. ಭಾರತ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಅನೇಕ ಅರಸು ಮನೆತನಗಳು ರಾಜಕೀಯದಿಂದ ವೈಭವಯುತವಾಗಿ ಕಂಗೊಳಿಸಿರುವುದನ್ನು ಕಾಣುತ್ತೇವೆ. ಶ್ರೇಷ್ಠ ಅರಸ ಮನೆತನಗಳಾದ ಕದಂಬ, ಪಲ್ಲವರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯದಲ್ಲಿ ಯುದ್ಧ, ಆಡಳಿತ, ಆಡಳಿತದಲ್ಲಿ ತಂದಂತಹ ಸುಧಾರಣೆಗಳು, ಧರ್ಮ, ಸಾಮಾಜಿಕ, ಆರ್ಥಿಕ, ವಿಷಯಗಳೊಂದಿಗೆ ರಾಜಕೀಯ ವಿಷಯದಲ್ಲಿ ಸಾಕಷ್ಟು ಗಮನಹರಿಸಿರುವುದು. ಆಗಲೂ ಜನ ವ್ಯವಸ್ಥಿತವಾಗಿರುವುದನ್ನು ಕಾಣುತ್ತೇವೆ. ಜೊತೆಗೆ ರಾಜಕೀಯ ಕೆಲವು ಅಂಶಗಳು ವಂಶಪರಂಪರಾಗತವಾಗಿ ಬಂದಿವೆ.

ಕವಿಯು ಪ್ರತಿಪಾದಿಸುವ ವಿಚಾರಗಳಿಂದ ರಾಜಕೀಯವನ್ನು ಗುರುತಿಸುವುದು ಅವನ ಉದ್ಧೇಶವಾಗಿತ್ತು. ಇಲ್ಲಿನ ಹಲವಾರು ವಿಷಯಗಳು ರಾಜಕೀಯ ಮೌಲ್ಯಗಳನ್ನು ತಿಳಿಸುತ್ತದೆ. ಕೃತಿಯಲ್ಲಿ ಬರುವ ರಾಜರಾಣಿಯರು, ರಾಜನ ಗುಣ, ರಾಜನ ಶಾಸನ, ರಾಜನ ಭಕ್ತಿ, ವಾದ್ಯಗಳು ಚತುರಂಗಬಲ, ಯುದ್ಧ, ಆಯುಧಗಳು ಮುಂತಾದವುಗಳ ವಿವರಣೆಯು ಬಸವಕವಿಯ ಕಾಲದ ರಾಜಕೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಆಕರ ಸಾಮಗ್ರಿಗಳಾಗಿವೆ.

೬.೨ ರಾಜರಾಣಿಯರು :

ಮೋದಪುರ (ಮುಧೋಳ) ವನ್ನು ಆಳುತ್ತಿದ್ದ ಮಾಲೋಜಿ ಭೂಪತಿಯು ತನ್ನ ರಾಜ್ಯದಲ್ಲಿ ಧರ್ಮಕ್ಕೆ ಮಹತ್ವ ಕೊಟ್ಟಿರುವುದನ್ನು ಕಾಣುತ್ತೇವೆ. ನರಗಟ್ಟಿಯಲ್ಲಿದ್ದ ಮುನಿನಾಥನ ಕೀರ್ತಿಯನ್ನು ತಿಳಿದುಕೊಂಡು ಆತನ ಪಾದಕಮಲಗಳನ್ನು ಕಾಣಲು ಹಪಿಸುತ್ತಿರುವುದು, ಅದಕ್ಕಾಗಿ ಚತುರಂಗ ಬಲದೊಡನೆ ವೈಭವದಿಂದ ಸಕಲ ಸಂಭ್ರಮದಿಂದ ನರಗಟ್ಟಿಗೆ ಬರುವುದು, ಮಾಲೋಜಿಯ ರಾಣಿಯು ಮುನಿನಾಥಂಗೆ ಮುತ್ತಿನಾರತಿಯನ್ನು ಒಡಿಯುವುದು ರಾಜನಲ್ಲಿ ಮತ್ತು ಆತನ ಮಕ್ಕಳಲ್ಲಿ ಪೂಜೆ, ಭಕ್ತಿಯ ಕುರಿತು ಆಸಕ್ತಿ.

[illegible]

[illegible]

[illegible]

[illegible]

ಆತನ ರಾಜ್ಯದಲ್ಲಿಯ ಜನರ ಭಕ್ತಿಗೆ ಮಹತ್ವ ಕೊಟ್ಟಿರುವುದನ್ನು ತಿಳಿಸಿದ್ದಾನೆ. ಹೀಗೆ ಕರಿಕಾಲ ಚೋಳರಸ, ಮಾದವರಸ, ಬಿಜ್ಜಳ, ಮಂತ್ರಿ ಬಸವೇಶ, ನರಸಿಂಹಬಲ್ಲಾಳ, ಮಂತ್ರಿ ಪದ್ಮರಸ, ಮಾದವರಸ, ದಾಶಾರ್ಹನೆಂಬ ಕೇರಳಾದೀಶ, ಆತನ ಪಟ್ಟದ ರಾಣಿ, ವಜ್ರಬಾಹುಕ ಮತ್ತು ಆತನ ಪಟ್ಟದರಸಿ ಹೀಗೆ ಹಲವಾರು ರಾಜ ರಾಣಿಯರ ಕುರಿತು ವಿಷಯಗಳು ಪ್ರಸ್ತಾಪವಾಗಿವೆ.

೬.೩ ರಾಜನ ಗುಣ :

ಕವಿಯು ಮೋದಪುರವನ್ನು ಆಳುತ್ತಿದ್ದ ಮಾಲೋಜಿಯು ಹಲವು ಶ್ರೇಷ್ಠ ಗುಣಗಳಿಂದ ಪ್ರಸಿದ್ಧಿ ಪಡೆದಿರುವುದನ್ನು ರೂಪಿಸುತ್ತಾನೆ.

"ಪೂರ್ವಜನ್ಮಾಂತರದಿ ನಾ ಮಾಡಿದಘದಿಂದ
ಪೂರ್ವಸುತ ಮೃತವಾದ ಲೋಕಾಪಾವಾದಕ್ಕೆ
ಉರ್ವಿಪತಿ ಗುರಿಯಾದನೆಂದಿರದೆ ಮರಗುತ್ತ ಒರಗುತ್ತ ಭೂತಳದೊಳು
ಉರ್ವಿ ಶೋಕಾಬ್ಧಿಯೊಳು ಹೊರಳುತ್ತ ನರಳುತ್ತ
ಜೀವ ವನಿತೆಯ ನುಡಿಗೆ ಮನಗುಂದಿ ಭೂಕಾಂತ
ಉರ್ಮಿಜನ ಕೇಳುತಿರೆ ಆ ಕ್ಷಣದಿ ಮಹಾಲಿಂಗನಡಿಗಳ್ಗೆ ಬಿನ್ನೈಸಿದಂ"[೧]

ರಾಜನು ಲೋಕಪವಾದಕ್ಕೆ ಗುರಿಯಾಗಿರುವುದು ರಾಜನು ಪೂರ್ವಜನ್ಮದಲ್ಲಿ ನಂಬಿಕೆಯಿಟ್ಟವನಾಗಿದ್ದನು. ಪೂರ್ವಜನ್ಮದಲ್ಲಿ ನಂಬಿಕೆಯನ್ನು ಇಟ್ಟಿರುವುದು. ತನ್ನ ರಾಜ್ಯದಲ್ಲಿ ಆಗಿರುವ ಅನಾಹುತಗಳಿಗೆ ಮಮ್ಮಲ ಮರುಗುವಿಕೆ, ತನ್ನ ರಾಜ್ಯದಲ್ಲಿ ತನ್ನ ಅಳಲನ್ನು ಸಮಸ್ಯೆಯನ್ನು ತೊಂದರೆಗೊಳಪಟ್ಟ ಶೋಕದಲ್ಲಿ ಮುಳುಗಿರುವ ಮಹಿಳೆ ಪುರುಷರೆನ್ನದೆ ಅವರ ನುಡಿಗೆ ಮನವನ್ನು ಅರ್ಪಿಸಿ ಸಮಸ್ಯೆಗಳನ್ನು ಪರಿಹರಿಸುತ್ತಿದ್ದನು. ಎಂಬುದರಲ್ಲಿ ಜನತೆಯಲ್ಲಿ ಜನತೆಯಾಗಿದ್ದ ರಾಜನು ಎಂದು ಕವಿಯು ನಿರೂಪಿಸಿದ್ದಾನೆ.

"ಮತ್ತೊಂದು ದಿನಗಳಲ್ಲಿ ಮಹರಾಜನೇರುತಿಹ
ಬಿತ್ತರದ ಸ್ವರ್ಗಗಾಮಿನಿಯೆಂಬ ತುರಗಮದು
ತತ್ತರಿಸಿ ಚಾಂದಣಿಯ ಬೇನೆಯಿಂ ಬಿದ್ದೊಡನೆ ಸಂಕಟದಿ ಪೊರಳಾಡುತ
ಮತ್ತೆ ಪೌರಮೌಷೇಧಿಕ ಮಾಡಿದರೆ ರೋಗಮದು

ಬತ್ತರಿಸಿ ಕಾಡುತ್ತ ವೃದ್ಧಿಯಾಗುತ್ತಿರಲು
ಚಿತ್ತದೊಳು ಮರಗುತಿರೆ ಮಾಲೋಜಿ ಭೂಪಾಲನಸುಗಳೆದುದೇನೆಂಬೆನು"[೨]

ಈ ಪದ್ಯದಲ್ಲಿ ಮಾಲೋಜಿಯು ಶೋಕತಪ್ತನಾಗಿರುವುದನ್ನು ಕಾಣುತ್ತೇವೆ. ಮಾಲೋಜಿಯು ತನ್ನ ಪ್ರೀತಿಯ ಪ್ರಾಣಿ ಕುದುರೆಯು, ಅದಕ್ಕೆ ಪ್ರೀತಿಯಿಂದ 'ಸ್ವರ್ಗಾಮಿನಿ'ಯೆಂಬ ಹೆಸರನ್ನಿಟ್ಟಿರುವುದು ರಾಜನಿಗೆ ಸಕಲ ಪ್ರಾಣಿಗಳಲ್ಲಿ ದಯಯಿರುವುದು, ಪ್ರೀತಿಯ ಪ್ರಾಣಿಗಳಿಗೆ ಶ್ರೇಷ್ಠ ಹೆಸರನಿಟ್ಟು ಕರೆಯುವುದು. ಪ್ರೀತಿಯ ಪ್ರಾಣಿ ಬೇನೆಯಿಂದ ನರಳಾಡುತ್ತಿದ್ದಾಗ ಅದರ ಸಂಕಟವನ್ನು ಗುಣಪಡಿಸಲು ಔಷದಿಯವನ್ನು ಕೊಡುತ್ತಿರುವುದು ರಾಜನಲ್ಲಿ ಪ್ರಾಣಿಗಳನ್ನು ಕಾಪಾಡುವ, ಸಾಕುವ ಗುಣಗಳಿರುವುದು ಅದಕ್ಕಾಗಿ ಶೋಕದಿಂದ ಮರುಗುತ್ತಿರುವುದು ರಾಜನಲ್ಲಿರುವ ಶ್ರೀಮಂತ ಗುಣಗಳನ್ನು ಬಸವಕವಿಯು ತನ್ನ ಕೃತಿಯಲ್ಲಿ ಪ್ರಸ್ತಾಪಿಸಿದ್ದಾನೆ.

೬.೪ ರಾಜನ ವಚನ :

ರಾಜನು ಜನರ ರಕ್ಷಣೆಗೆ ಭಾಷೆಯನ್ನು ಕೊಡುವುದು ಸರ್ವೇಸಾಮಾನ್ಯ. ರಾಜನು ತನ್ನ ಆಡಳಿತದಲ್ಲಿ ಧಾರ್ಮಿಕ, ಸಾಮಾಜಿಕ, ರಾಜಕೀಯ, ಯುದ್ಧ, ಅತಿವೃಷ್ಠಿ, ಅನಾವೃಷ್ಠಿ ಸಂದರ್ಭಗಳಲ್ಲಿ ಮತ್ತು ಜನರು ಆರೋಗ್ಯ ಸುಖ ಸಂತೋಷದಿಂದಿರಲು ಅವರನ್ನು ಕಾಪಾಡಿಕೊಂಡು ಹೋಗುವುದು ರಾಜನ ಕರ್ತವ್ಯವಾಗಿದೆ. ಕೆಲವು ಸಲ ತನ್ನ ಸೇವಕರಿಗೆ ತನ್ನ ಪ್ರಜೆಗಳಿಗೆ ವಿವಿಧ ರೀತಿಯ ಆಸೆಗಳನ್ನೀಡೇರಿಸಲು ಭಾಷೆಯನ್ನು ಕೊಡುವುದು ನಮ್ಮ ಸಂಸ್ಕೃತಿಯಲ್ಲಿ ಕಂಡುಬಂದಿದೆ.

"ದಾನಪತ್ರವನಿತ್ತಮೇಲೆ ನರಗಟ್ಟಿಯನು
ಮಾನಸದಿ ಮರದೊಮ್ಮೆ ಮರಳಿ ಬಯಸಿದರೆನಗ
ಮಾನಶ್ರೀ ಪಾಂಡುರಂಗಕ್ಷೇತ್ರ ಮಧ್ಯದಲ್ಲಿ ಗೋಹತ್ಯವನು ಮಾಡಿದ
ಮಾನವನ ಗತಿಯಾಗಲುಳಿದ ವಿಪ್ರಜನಾಳಿ
ಕೊನಿಟ್ಟು ನೆನಪಿಸಿದರೆ ಕಾಶಿಯೊಳು ಶ್ರೀವಿಶ್ವ
ಮಾನಿತನ ಪೂಜೆಯನು ಶಿವರಾತ್ರಿಯೊಳಗಳಿದ ಹಾನಿಂಗೆ ಗುರಿಯಾಗಲಿ"[೩]

"ಜಿನ್ನರಿಗೆ ಜಿನ್ನನಾಲಯದಲ್ಲಿ ವೈಷ್ಯವರಿ

ನಿನ್ನು ವೆಂಕಟಗಿರಿಯ ಮಧ್ಯದಲಿ ಗೋಹತ್ಯೆ
ವನ್ನು ಮಾಡಿದನ ಗತಿಯಾಗಿರಲಿ ಶೂದ್ರಾದಿ ಸಕಲ ಜಾತಿಗಳೆಲ್ಲರು
ಬಿನ್ನಣದಿ ನಿಜದೈವ ನೆಲಸಿರ್ಪ ಕ್ಷೇತ್ರದೊಳು
ಚೆನ್ನಾಗಿ ಪಂಚಮಹಾಪತಕವ ನೆಸಗುತ್ತ
ಬನ್ನಬಡುವಾ ಪಾಪ ಮುನ್ನಾಗಲವರಿಂಗೆ ನಿಜಪುರಕೆ ಕುಂದೆಣಿಸಲು"[೪]

"ಎನ್ನ ರಾಜಾಲಯದೊಳನ್ನು ಕಳ್ಳರು ಬಂದು
ಕನ್ನವನು ಒಡೆದು ವರ ಚಿನ್ನೆಯರ ವಾಸದೊಳ್
ನನ್ನಿಯಂ ಪೂರೈಸಮ ಚಿನ್ನದಾಭರಣ ಮಣಿಖಚಿತ ವರಮಾಲೆಗಳನು
ಬಿನ್ನಣದ ಗಳಸೊತ್ರಗಳನೆಲ್ಲನೊಳಕೊಂಡು
ಘನ್ನ ಘಾತಕರೋಡಲೆಚ್ಚುತ್ತ ಬಲಸಹಿತ
ಬೆನ್ನತ್ತಿ ನಾ ಬರಲು ನಿನ್ನ ಭೂಮಿಯೊಳಗಿರಲು ಮುಟ್ಟುದಿರ್ಪುದೆ ಭಾಷೆಯು"[೫]

"ಈ ನುಡಿಗೆ ತಪ್ಪಿದರೆ ಪುಷ್ಪವತಿಯಾದಸಮ
ಮಾನಿನಿಯ ಸಂಪರ್ಕವೆಸಗಿರ್ದ ಪಾತಕನ
ಹಾನಿಗೀಡಾಗುವೆನು ಮತ್ತೆಲ್ಲದಲಿ ಪರಮ ಘೋರ್ಪಡೆಯ ರಾಯರುಗಳ
ಮಾನಿಸುವ ವಂಶಕ್ಕೆ ಬಾಹಿರನಲಾ ಬಳಿಕ
ಸೌನಿವರ ಮಹಾಲಿಂಗ ಮದ್ಭಕ್ತಿಗ್ರಾಮವನು
ಸಾನುರಾಗದಿ ಬಿಡದೆ ಕೈಗೊಂಡು ಕರಣಿದಿಂ ಪಾಲಿಪುದು ಭೂತಳದೊಳು"[೬]

ಕವಿಯು ಪ್ರಾಚೀನಕಾಲದಲ್ಲಿ ದಾನಪತ್ರಗಳನ್ನು ನೀಡುವುದು ಸಾಂಸ್ಕೃತಿಕವಾಗಿ ತಲೆತಲಾಂತರದಿಂದ ಬಂದಿದೆ. ಮುಂದೆ ಯಾವುದೇ ರೀತಿಯ ತಕರಾರುಗಳು ಬರಬಾರದೆಂದು ದಾನಪತ್ರಗಳನ್ನು ನೀಡುತ್ತಿದ್ದರು. ದಾನಪತ್ರಗಳು ಭೂಮಿಯ ಕೊಟ್ಟುದರ ಕುರಿತಾಗಿ ಪ್ರತಿವರ್ಷ ದವಸ ದಾನ್ಯಗಳ ಕುರಿತು ಬಂಗಾರ, ಹಣದ ಕುರಿತು ಇರುವುದನ್ನು ಕಾಣುತ್ತವೆ. ದಾನಪತ್ರ ವಚನ ಕೊಟ್ಟಮೇಲೆ ಅದನ್ನು ಮರಳಿ ಪಡೆಯದಿರುವುದು ನಮ್ಮ ಸಂಸ್ಕೃತಿ. ಕೊಟ್ಟಂತಹ ಭಾಷೆಯನ್ನು ಯಾವ ಸಂದರ್ಭದಲ್ಲೂ ಮರಳಿ ಪಡೆಯುತ್ತಿರಲಿಲ್ಲ ಎಂಬುದನ್ನು ತಿಳಿಸಿರುವನು.

ಇಲ್ಲಿ ರಾಜನು ದಾನಪತ್ರವನ್ನು ಒಮ್ಮೆ ಮರಳಿ ಪಡೆಯಲು ಏನಾದರೂ ಬಯಸಿದರೆ

ನನಗೆ ಗೋಹತ್ಯಾ ಮಾಡಿದ ಪಾಪ ಬರಲಿ ಎಂಬುದನ್ನು ತಿಳಿಸಿರುವುದು. ಹಿಂದೂ ಸಂಸ್ಕೃತಿಯಲ್ಲಿ ಗೋವುಗಳನ್ನು ಪೂಜಿಸುವುದುಂಟು ಗೋವುಗಳು ಹಿಂದೂ ಸಂಸ್ಕೃತಿಯಲ್ಲಿ ವಿಶಿಷ್ಠ ಸ್ಥಾನವನ್ನು ಪಡೆದುಕೊಂಡಿರುವುದು ಅದು ಬೇಡಿದ್ದನ್ನು ಕೊಡುವ ಕಾಮಧೇನುವಾಗಿರುವುದರಿಂದ ನಮಸ್ಕರಿಸುವುದುಂಟು.

ನಮ್ಮ ಸಂಪ್ರದಾಯ ಗೃಹಪ್ರವೇಶದಂತಹ ವಿವಿಧ ಶುಭಕಾರ್ಯಗಳಲ್ಲಿ ಗೋವುಗಳನ್ನು ಪೂಜಿಸುತ್ತೇವೆ. ಹಿಂದಿನ ಕಾಲದಲ್ಲಿದ್ದ ನಿಯಮಗಳು ರಾಜನ ಕಾಲದಲ್ಲಿ ಗೋಹತ್ಯೆ ಮಾಡಿದವರಿಗೆ ಕಠಿಣ ಶಿಕ್ಷೆಯಿತ್ತು ಎಂಬುದು ಇದರಿಂದ ತಿಳಿಯುತ್ತದೆ. ಗೋಹತ್ಯ ಒಂದು ಮಹಾಪಾಪ ಎಂಬುದು ರೂಢಿಯಲ್ಲಿತ್ತು. ಪಂಚಮಹಾಪಾತಕಗಳು ಶ್ರೇಷ್ಠವಾದವುಗಳು. ಅವುಗಳಿಂದ ಆಗುವ ದುರಂತಗಳು ನನಗಾಗಲಿ ಎಂದು ಹೇಳಿರುವುದು ಪಂಚಮಹಾಪಾತಕಗಳ ಮಹತ್ವವನ್ನು ಕವಿಯು ಪ್ರಸ್ತಾಪಿಸಿದ್ದಂತಿದೆ.

ಕವಿಯು ರಾಜರ ಆಡಳಿತದಲ್ಲಿ ತಮ್ಮ ಸಾಮ್ರಾಜ್ಯದಲ್ಲಿ ಕಳ್ಳ ಇರುತ್ತಿದ್ದರು. ಅಂಥವರನ್ನು ದಂಡಿಸಿ ಮತ್ತೇ ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು. ಚಿನ್ನದ ಆಭರಣಗಳನ್ನು ಕದಿಯುತ್ತಿದ್ದರು. ಎಂಬುದರ ಕುರಿತು ಹೇಳಿರುವನು. ಇವರು ರಾಜನ ಚಿನ್ನಾಭರಣಗಳನ್ನು ಕದ್ದು ಮಹಾಲಿಂಗಮುನಿನಾಥನ ಪರಿಸರದಲ್ಲಿ ಇದ್ದರೆ ಆ ಕಳ್ಳರನ್ನು ನಾನು ಮುಟ್ಟುವುದಿಲ್ಲ ಎಂಬ ಮಾತಿನಲ್ಲಿ ಕವಿಯು ರಾಜನಲ್ಲಿದ್ದ ಶ್ರೀ ಮಹಾಲಿಂಗ ಮುನಿನಾಥನ ಮೇಲಿನ ಭಕ್ತಿಯು ಅಮೋಘವಾಗಿರುವುದು ಕಂಡುಬರುತ್ತದೆ.

ರಾಜನು ಕೊಟ್ಟಭಾಷೆಯನ್ನು ಮರಳಿ ಪಡೆದರೆ ಆತ ಘೋರ್ಪಡೆ ರಾಯರ ವಂಶಕ್ಕೆ ಬಾಹೀರ ಎನ್ನುವ ಕಠೋರತೆಯನ್ನು ಘೋರ್ಪಡೆ ವಂಶದಲ್ಲಿ ಕಾಣುತ್ತೇವೆ ಎಂದು ಕವಿಯು ನಿರೂಪಿಸುತ್ತಾನೆ.

ಹೀಗೆ ಕವಿಯು ಘೋರ್ಪಡೆ ವಂಶದ ಮಾಲೋಜಿ ರಾಜನ ಭಾಷೆಯು ಶ್ರೇಷ್ಠತೆಯನ್ನು ಪಡೆಯುವುದರ ಮೂಲಕ ಕೊಟ್ಟ ಮಾತನ್ನು ಯಾವ ಸಂದರ್ಭದಲ್ಲೂ ಮರಳಿ ಪಡೆಯುತ್ತಿರಲಿಲ್ಲ. ಕೊಟ್ಟ ಭಾಷೆಗೆ ತಪ್ಪಿ ನಡೆಯುತ್ತಿರಲಿಲ್ಲ ಎಂದು ಮಾಲೋಜಿರಾಜನನ್ನು ಹೊಗಳಿದಂತೆ ಕಾಣುತ್ತದೆ. ಭಾಷೆಯನ್ನಿಯುವುದು ಆಗಿನ ಕಾಲದಲ್ಲಿ ಪ್ರಚಲಿತದಲ್ಲಿತ್ತು ಎಂಬುದನ್ನು ಕವಿಯು ಪ್ರಸ್ತಾಪಿಸಿದ್ದಾನೆ.

[illegible]

"ಎಂಬ ನುಡಿಗೇಳುತಲೆ ದೇವ ಮಹಾಲಿಂಗಾಖ್ಯ
ಕುಂಬಿನಿಯು ಪಾತಾಳಕಿಳಿದೊಡಂ ರಾಕಾಬ್ಜ
ಬೀಮಬಶೀತಮನುಳಿದು ಬಿಸಿಯಾದೊಡಂ ಬಳಿಕ ಪಶ್ಚಿಮದಿಶಾಭಾಗದಿ
ಅಂಬುಜಾಹಿತಮಂಡ ಲುರಿಯಾದೊಡಂ ಬಿಡದೆ
ಅಂಬರಸಖಂ ತಂಪನಾಂತೊಡಂ ನಿಮ್ಮ ಪಾ
ದಾಂಬುಗಳಿಗಿತ್ತ ಮದ್ಭಾಷೆ ಜಗದೊಳಗೆಂದು ಬಂಜೆಯಾಗಿದ ಗುರುವರ"[೭]

ಭೂನಾಥನು ಕಂಭಿನಿಯು ಪಾತಾಳಕಿಳಿದರೂ ಇಳಿಯಬಹುದು. ಶಶಿಬಿಂಬ ಶ್ವೇತ್ಯವನ್ನುಳಿದು ಬಿಸಿಯಾದರೂ ಆಗಬಹುದು. ಸೂರ್ಯನು ತಂಪಾದರೂ ಆಗಬಹುದು. ಆದರೆ ನಿಮಗಿತ್ತ ಭಾಷೆಯು ಸುಳ್ಳಾಗದೆಂದು ಹೇಳುವಲ್ಲಿ ಕಾವ್ಯದ ಗರಿ ಬಿಚ್ಚಿದ ಹಕ್ಕಿಯಂತೆ ಆಗಸದಲ್ಲಿ ಹಾರಾಡಿದೆ.

"ಎಂದು ನಿರವಸಿ ಬಳಿಕ ಭೂಪಾಲನಂ ಕರೆದು
ಚೆಂದದಿರಂ ಚತುರಂಗ ಬಲಕೆ ಪರಮಾನ್ನಗಳ
ವೃಂದಮಂ ಎಡೆಮಾಡಿ ಸವಿಸವಿದು ನೆರೆನಂಜಿ ನೋಡುತ್ತಲೀಯನ್ನವು
ಇಂಥಮರನಾಥಂಗೆ ದುರ್ಲಭವಲಾ ಎಂದು
ಮಂದೈಪ ಭಕ್ತಿಯಿಂದಂದು ಕೊಂಡಾಡುತ್ತ
ಬಂದು ಮಾನಿನಿಯರುಂ ಸಹ ಮಹಾಪುರುಷರಿಗೆ ನಮಿಸುತ್ತ ಭಯಭಕ್ತಿಯಿಂ"[೮]

ಶೂರ ಭೂಪಾಲನು ತನ್ನ ಆಡಳಿತದಲ್ಲಿ ಚತುರಂಗ ಬಲಕ್ಕೆ ಬಹಳಷ್ಟು ಮಹತ್ವಕೊಟ್ಟಿರುವುದನ್ನು ಕಾಣುತ್ತೇವೆ. ಅದು ಶ್ರೇಷ್ಠತೆಯಿಂದ ಕೂಡಿದ್ದು ಚತುರಂಗ ಬಲಕ್ಕೆ ಪರಮಾನ್ನಗಳ ಎಡೆಮಾಡಿ ನೀಡಿರುವುದನ್ನು ಬಸವಕವಿಯು ರಾಜನ ವ್ಯಕ್ತಿತ್ವವನ್ನು ನಿರೂಪಿಸಿದ್ದಾನೆ. ಒಟ್ಟಿನಲ್ಲಿ ಕವಿಯು ತನ್ನ ಜನರಿಗಾಗಿ ಸಕಲ ಸೌಲಭ್ಯಗಳನ್ನು ನೀಡಿ ಅವರನ್ನು ಗೌರವಯುತವಾಗಿ ಕಾಣುವುದು ಜೊತೆಗೆ ರಾಜನು ವಿಶೇಷವಾಗಿ ದೈವವನ್ನು ನಂಬಿ ಸಂಪ್ರದಾಯವನ್ನು ಬಿಂಬಿಸುವ ಅನೇಕ ವಿಷಯಗಳನ್ನು ಪ್ರಸ್ತಾಪಿಸಿರುವನು.

೬.೫ ರಾಜನ ಭಕ್ತಿ :

ರಾಜನ ಸಂಪ್ರದಾಯದಲ್ಲಿ ದೈವರಾಧನೆಯು ಪ್ರಮುಖವಾಗಿದ್ದಿತು. ರಾಜನು ದೈವದಲ್ಲಿ ನಂಬಿಕೆಯನ್ನಿಟ್ಟವನಾಗಿರುವುದು ಮಹಲಿಂಗಲೀಲೆಯ ವಿವಿಧ ಸಂಧಿಗಳಲ್ಲಿ

ಕಂಡುಬರುವುದು.

"ಇಂತು ಸಂಭ್ರಮದಿಂದೆ ಭೂವಿರಕ್ತನ ಪದಕೆ
ಸಂತಸದ ಭಕ್ತಿಯಿಂ ವರಲಿಂಗ ಮುದ್ರೆಗಳ
ಸಂತತಿಯನಾಕ್ಷಣಂ ಪುರಭೂವಿ ಸೀಮೆಗಳಿಗೆಂಟಾಗಿ ನೆಲೆಗೊಳಿಸುತ
ಚಿಂತಿತ ಪದಾರ್ಥವನು ಶಿವಲಿಂಗ ಜಂಗಮಕೆ
ಮುಂತಿರದೆ ಕೊಟ್ಟುನಮಿಸುತ್ತಾಗ ಮೇದಿನೀ
ಕಾಂತ ಮಹಾಲಿಂಗನಂದಳಸಹಿತ ಹಿಂದಿರುಗಿ ಬರುತಿರ್ದ ಪುರದತ್ತಣಂ"[೯]

ರಾಜನು ತನ್ನ ರಾಜ್ಯದಲ್ಲಿ ಭಕ್ತಿಯು ನೆಲೆಯಾಗಿ ನಿಲ್ಲಲಿ ಎಂದು ಧರ್ಮಕ್ಕೆ ಗೌರವವನ್ನು ಕೊಟ್ಟು ತನ್ನ ಸಾಮ್ರಾಜ್ಯದಲ್ಲಿಯೇ ಜನರು ಭಕ್ತಿ ಪೂಜೆ ಪ್ರಾರ್ಥನೆಗಳನ್ನು ಕೈಗೊಂಡು ಅವರ ಸಮಸ್ಯೆಗಳನ್ನು ನಿವಾರಣೆಗೊಳಿಸಲು, ಜನತೆ ರಾಜ್ಯದಲ್ಲಿ ಸುಖ ಸಮೃದ್ಧಿಯಿಂದ ಜೀವನ ಪಾವನವಾಗಲೆಂದು ತನ್ನ ಪುರದ ಎಂಟು ದಿಕ್ಕುಗಳಲ್ಲಿ ಲಿಂಗಗಳನ್ನು ಸ್ಥಾಪನೆ ಮಾಡಿರುವುದನ್ನು ಪ್ರಸ್ತಾಪಿಸಿರುತ್ತಾನೆ. ಯಾವ ದಿಕ್ಕಿನಿಂದಲೂ ರಾಜ್ಯಕ್ಕೆ ಕುಂದುಂಟಾಗಬಾರದೆಂದು ತನ್ನ ಪುರದ ರಕ್ಷಣೆಗಾಗಿ ಲಿಂಗ ಸ್ಥಾಪನೆಯನ್ನು ಮಾಡಿದರಬಹುದೆಂದು ತಿಳಿಯುತ್ತದೆ.

ರಾಜನು ತನ್ನ ಸಂಸ್ಕೃತಿಯಲ್ಲಿ ಪುರದ ಅಥವಾ ರಾಜ್ಯದ ಜನತೆಯಲ್ಲಿ ಭಕ್ತಿಯು ಮಡಗಟ್ಟಲಿ ಎಂಬ ರಾಜಕೀಯ ಅಂಶಗಳು ಬೆಳಕಿಗೆ ಬರುವಂತೆ ತನ್ನ ಪುರಕ್ಕೆ ಯಾವ ದಿಕ್ಕಿನಿಂದಲೂ ಸಮಸ್ಯೆ ಬರದಹಾಗೆ ಎಂಟು ದಿಕ್ಕಿನಿಂದ ರಾಜ್ಯಕ್ಕೆ ಹಾನಿಯಾಗದಂತೆ ಶಿವಸ್ವರೂಪಿಯಾದ ಮಹಾಲಿಂಗಮುನಿನಾಥನೇ ಕಾವಲುಗಾರನಾಗಿರಲಿ ಎಂಬ ರಾಜನು ಭಕ್ತಿಗೆ ಮಹತ್ವ ಕೊಟ್ಟಿರುವುದು ತನ್ನ ಸಂಸ್ಕೃತಿಯಲ್ಲಿರುವುದನ್ನು ಪತ್ತೆ ಹಚ್ಚಿರುವನು.

"ಇಕ್ಷುಕಾಂಡಮುನಿರದೆ ಕೀಳ್ದೊಡಂ ಸೀಳ್ದೊಡಂ
ಪಕ್ಷದಲಿ ಕಡಿಕಂಡ ಮಾಡ್ದೊಡಂ ಮೋಳ್ದೊಡಂ
ಸುಕ್ಷಣದಿ ಗಾಣದೊಳಗಿಕ್ಕಲುಂ ತಿಕ್ಕೆಲುಂ ಕಕ್ಕುವದು ಸವಿಯುಣವನು
ಸಕ್ಷಮದ ಸದ್ಭಕ್ತರದರಂತೆ ನಿಜಗುಣವ
ನೀಕ್ಷಿಸುವ ಮಹಿಮರೋಳ್ ತೋರ್ಪಂತೆ ಭವದೀಯೆ
ಅಕ್ಷಯದ ಭಕ್ತಿ ನಲವಿತ್ತುದೀ ಜಂಗಮಕೆ ಮಾಲೋಜಿ ಭೂಪಾಲನೇ"[೧೦]

ರಾಜನ ಭಕ್ತಿ ಅಮೋಘವಾಗಿರುವುದರ ಕುರಿತು ತಿಳಿಯುತ್ತದೆ. ಕಬ್ಬನ್ನು ಕಿತ್ತು ಕಡಿಖಂಡ ಮಾಡಿ ಸೀಳಿದರೂ ಗುಣದೊಳಿಕ್ಕಿ ತಿಕ್ಕಿದರೂ ಅದು ಮತ್ತೇ ಮತ್ತೇ ಸವಿಯನ್ನು ಸೂಸುವುದು ಎಂದು ಬಸವಕವಿಯು ಭಕ್ತಿಯ ವರ್ಣನೆಯನ್ನು ಸೊಗಸಾಗಿ ನಿರೂಪಿಸಿದ್ದಾನೆ.

ಜೊತೆಗೆ ಕವಿಯು ಕಬ್ಬಿನ ರಸವನ್ನು ತೆಗೆಯಲು ಗಾಣವನ್ನು ಉಪಯೋಗಿಸುತ್ತಿದ್ದರು ಎಂದು ಕವಿಯು ಹೇಳುತ್ತಾನೆ. ಹಿಂದೆಯೂ ಗಾಣದ ಪರಿಚಯವಿತ್ತು ಎಂದು ತಿಳಿಯುತ್ತದೆ. ಹೀಗೆ ರಾಜನ ಭಕ್ತಿ ವಿಶೇಷವಾಗಿರುವುದನ್ನು ಕವಿಯು ತೋರ್ಪಡಿಸಿದ್ದಾನೆ.

೬.೬ ಶಾಸನದ ರಚನೆ :

ಶಾಸನಗಳು ಪ್ರಾಚೀನ ಕಾಲದ ಸಂಪ್ರದಾಯಗಳನ್ನು ತಿಳಿಸುವ ಜೀವಂತ ಸಾಕ್ಷಿಯಾಗಿವೆ. ಶಾಸನಗಳು ಧಾರ್ಮಿಕ, ರಾಜಕೀಯ, ಸಾಮಾಜಿಕ ಸಂಸ್ಕೃತಿಯನ್ನು ಬಿಂಬಿಸುವ ತಲಕಾವೇರಿಯಾಗಿವೆ. ಶಾಸನ ಎಂದರೆ ರಾಜಾಜ್ಞೆ ಎಂಬ ಅರ್ಥವನ್ನು ನೀಡುತ್ತದೆ.

"ನಿಶ್ಚಲದ ಮಹಿಮಂಗೆ ಘನಭಕ್ತಿಪೂರ್ವಕದಿ
ಅಚ್ಚಳಿಯದಿಹಯನ್ನ ರಾಜಮುದ್ರೆಗಳಿಂದೆ
ಅಚ್ಚೊತ್ತಿದಸಮ ಕಂಚಿನ ಪತ್ರಮಿದರಂತೆ ಲೋಕದೋಳ್ ನಿಜವೆಂಬುವ
ಎಚ್ಚರವ ತೋರ್ಪಂತೆ ಯತಿಚಂದ್ರನಾಜ್ಞೆಯಿಂ
ಪಶ್ಚಿಮದ ಧಾತ್ರಿಯಿಂ ಖನನಿಸುತ ಮುದ್ರೆಗಳ
ಇಚ್ಛೈಸುತಾ ಪೌರ ಭೂಮಿಗಳು ಗುರುವರಗೆ ನಿಚ್ಚವಾಗಿರಲೆಂದನು"[೧೧]

ಬಸವ ಕವಿಯು ಶಾಸನಗಳ ರಚನೆಯ ಕುರಿತು ವಿಶೇಷವಾಗಿ ಹೇಳಿರುವನು. ರಚನೆಯು ತಾಮ್ರ, ಕಂಚು, ಕಲ್ಲುಗಳ ಮೇಲೆ ಶಾಸನಗಳನ್ನು ಕೆತ್ತುತ್ತಿದ್ದರು. ಹಾಗೆಯೇ ಕವಿಯು ಕಂಚಿನಪತ್ರವನ್ನು ರಚಿಸಿರುವುದನ್ನು ತಿಳಿಸಿದ್ದಾನೆ. ಹಿಂದೆ ರಾಜರು ತಮ್ಮ ತಮ್ಮ ಆಡಳಿತ ಇರುವಿಕೆಯ ಕುರುಹುವಾಗಿ ಶಾಸನಗಳ ರಚನೆಯನ್ನು ಮಾಡಿಸುತ್ತಿದ್ದರು ಎಂಬುದನ್ನು ಕವಿಯು ಸಾದರಪಡಿಸುತ್ತಾನೆ.

ಶಾಸನಗಳಲ್ಲಿ ಹಲವು ಪ್ರಕಾರಗಳಿರುವುದನ್ನು ಕಾಣುತ್ತೇವೆ. ಶಿಲಾ ಶಾಸನಗಳು, ತಾಮ್ರಪಟ ಶಾಸನಗಳು, ಬಂಡೆಗಲ್ಲು ಶಾಸನಗಳು, ಯಾಪ ಶಾಸನಗಳು, ದಾನ ಶಾಸನಗಳು,

ಕ್ರಯ ಶಾಸನಗಳು, ವೀರ ಶಾಸನಗಳು, ವೀರಗಲ್ಲುಗಳು, ಮಹಾಸತಿಗಲ್ಲುಗಳು ಹೀಗೆ ಮುಂತಾದ ಶಾಸನಗಳಿರುವುದನ್ನು ಕಾಣುತ್ತೇವೆ. ರಾಜರು ತಮ್ಮ ವಿಷಯಗಳು ಶಾಸನಗಳ ಮೇಲೆ ಬರೆದ ಬರಹ ಮತ್ತು ವಸ್ತು ಅಚ್ಚಳಿಯದೇ ದೀರ್ಘಕಾಲ ಬಾಳಿಕೆ ಬರಲೆಂದು ಇವುಗಳ ಮೇಲೆ ಬರೆಯುತ್ತಿದ್ದರೆಂಬುದುದನ್ನು ತಿಳಿಯಪಡಿಸಿದ್ದಾನೆ.

ಶಾಸನಗಳು ರಾಜನ ಒಪ್ಪಿಗೆಯನ್ನು ಪಡೆದುಕೊಂಡು ರಾಜ್ಯದ ಮುದ್ರೆಯನ್ನು ಹಾಕಿ ಅವುಗಳನ್ನು ನುರಿತ ಕೆತ್ತನೆಕಾರರಿಂದ ರಚಿಸುತ್ತಿದ್ದರು. ರಾಜನು ಕಂಚಿನ ಪತ್ರದ ರಚನೆಗೆ ಆಜ್ಞೆಯನ್ನಿತ್ತು ಅದರಲ್ಲಿ ಪಶ್ಚಿಮದ ಧಾತ್ರಿಯನ್ನು ದಾನವಾಗಿ ಕೊಟ್ಟಿರು ವಿಷಯವನ್ನು ಅಚ್ಚೊತ್ತಿಸಿ ರಾಜನು ಪರೀಕ್ಷಿಸಿ ಕೊಡಲು ಅನುಮತಿಸಿದಾಗ ಅದನ್ನು ಜಾರಿಗೆ ತರಲಾಗುತ್ತಿತ್ತು ಎಂದು ಕವಿಯು ಸೊಗಸಾಗಿ ನಿರೂಪಿಸಿದ್ದಾನೆ.

ಶಾಸನ ಭಾಷೆಯು ಆಗಿನ ಕಾಲದಲ್ಲಿ ಪ್ರಚಲಿತದಲ್ಲಿದ್ದ ಸಂಸ್ಕೃತ, ಪ್ರಾಕೃತ, ಕನ್ನಡ, ತೆಲಗು ಮುಂತಾದ ಭಾಷೆಗಳಿಂದ ರಚನೆಗೊಂಡಿರುತ್ತಿದ್ದವು. ಶಾಸನಗಳು ಬ್ರಹ್ಮಿ, ಖರೋಷ್ಠಿ, ಚಿತ್ರಲಿಪಿಯನ್ನು ಬಳಸಿ ಬರೆಯುತ್ತಿದ್ದರು. ಹೀಗೆ ಶಾಸನಗಳ ಉಲ್ಲೇಖವನ್ನು ಬಸವಕವಿಯು ಸೊಗಸಾಗಿ ನಿರೂಪಿಸಿದ್ದಾನೆ.

೬.೭ ದಾನಪತ್ರ :

ಹಿಂದೆ ರಾಜರು ತಮ್ಮ ಆಡಳಿತದ ವೈಭವದಿಂದ ಹೊಳೆಯುವುದನ್ನು ಸಂಸ್ಕೃತಿಕ ಜೀವನವನ್ನು ತಿಳಿಸಲು ದಾನಪತ್ರವನ್ನು ಹೊರಡಿಸುತ್ತಾರೆ ಎಂಬುದು ಪ್ರಾಚೀನ ಕಾಲದಿಂದಲೂ ತಿಳಿಯುತ್ತದೆ. ದಾನಪತ್ರಗಳನ್ನು ರಾಜ್ಯದ ಕೆಲವು ಪುರಗಳನ್ನು ಹಾಗೂ ಭೂಪ್ರದೇಶಗಳನ್ನು ಹಾಗೂ ಬೆಲೆಬಾಳುವ ವಸ್ತುಗಳನ್ನು ದಾನವಾಗಿ ಕೊಡುವುದನ್ನು ಕಾಣುತ್ತೇವೆ. ಹಾಗೆಯೇ ಇಲ್ಲಿ ಮಾಲೋಜಿ ರಾಜನು ದಾನಪತ್ರವನ್ನು ಹೊರಡಿಸಿರುವ ಕುರಿತು ನೋಡಲಾಗಿ.

"ಧನ್ಯನು ಕಣಾಮಂತಿಯನ್ನಾಜ್ಞೆಯಾದಂತೆ
ಬಿನ್ನಣದ ಪತ್ರಮಂ ಚನ್ನಾಗಿ ಲೇಖಿಸಿದಿ
ನಿನ್ನ ಚದುರತ್ವಕ್ಕೆ ಮುನ್ನಾರು ಸರಿಯಿಲ್ಲ ಭಾವಿಮೊಡೆ ಭೂತದೊಳು
ಇನ್ನು ಮಹಾಲಿಂಗ ಪದಪತ್ರದಲಿ ನಮ್ಮವನ

ಭಿನ್ನವಿಲ್ಲದೆ ಬೆರೆದು ಅಚ್ಚೊತ್ತಿದಂತಿಹುದು
ನನ್ನಿಯಿಂದಾ ಪರಿಯ ತದ್ದಾನಪತ್ರದೊಳು ತೋರ್ಪಂತೆ ಭೂಕಾಂತನು"[೧೨]

"ಮಿಂಚುತಿಹ ವರವರ್ಣಸಂಚಯಾ ಶ್ರೀತಮಾದ
ಕಂಚಿನ ಸುಪತ್ರಕ್ಕೆ ವಂಚನಿಲ್ಲದೆ ಮುದದಿ
ಕಾಂಚನಂಚಿತ ಪರಮ ಸಿಕ್ಕ ಮುರ್ತುಪಗಳ ನೊತ್ತುತ್ತಮಾಕ್ಷಣದೊಳ್"[೧೩]

ಶಾಸನಗಳು ಪ್ರಶಸ್ತಿಯ ಅಥವಾ ರಾಜಾವಳಿಯ ಭಾಗ. ರಾಜಕೀಯ ಇತಿಹಾಸಕ್ಕೆ ಹೇಗೆ ಮುಖ್ಯವೋ ಹಾಗೆಯೇ ಶಾಸನದಲ್ಲಿ ದಾನವನ್ನು ಸ್ವೀಕರಿಸುವ ವ್ಯಕ್ತಿಯ ಮತ್ತು ದಾನದ ವಿವರಗಳನ್ನು ಹೇಳುವ ಭಾಗ ಸಂಸ್ಕೃತಿಕವಾಗಿ ಬಹುಮುಖ್ಯವಾಗುತ್ತದೆ. ಈ ಭಾಗದ ಅಧ್ಯಯನದಿಂದ ಅಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಿತ್ರವನ್ನು ಪುನಾರಚಿಸಬಹುದು. ದಾನವನ್ನು ಸ್ವೀಕರಿಸುವವನು ವ್ಯಕ್ತಿಯಾಗಿದ್ದರೆ ಅವನ ಪರಾಕ್ರಮದ ಅವನ ಪಾಂಡಿತ್ಯದ ವಿವರವಿರುತ್ತದೆ. ಇದರಿಂದ ಅಂದಿನ ಕಾಲದ ವೀರರ ಆದರ್ಶ ಅಥವಾ ವಿದ್ವಾಂಸರ ಅಧ್ಯಯನ ವಿಷಯಗಳು ಗೋಚರಿಸುತ್ತವೆ. ದಾನವು ಸಂಸ್ಥೆಗೆ ಕೊಡಲ್ಪಟ್ಟಿದ್ದರೆ ಸಮಾಜಕ್ಕೆ ಆ ಸಂಸ್ಥೆ ಸಲ್ಲಿಸುವ ಸೇವೆಯ ವಿವರ ಬರುತ್ತದೆ. ದೇವಾಲಯಗಳಿಗೆ ದಾನಕೊಟ್ಟಿದ್ದರೆ ಆ ದೇವಾಲಯಗಳಲ್ಲಿ ನಡೆಯದ ವಿಶೇಷ ಪೂಜೆಯ ವಿಚಾರಗಳು ಅದರ ಆಚರಣೆಯ ಆಚಾರ ವಿಚಾರಗಳು ಒಂದು ವೇಳೆ ಅದು ವಿದ್ಯಾಕೇಂದ್ರವಾಗಿದ್ದರೆ ಅದರ ವಿವರವಿರುತ್ತದೆ. ಅಗ್ರಹಾರಗಳಿಗೆ ಕೊಟ್ಟ ದಾನವಾಗಿದ್ದರೆ ಅಗ್ರಹಾರದ ಮಹಾಜನಗಳ ವರ್ಣನೆ ಅದರ ಅಧ್ಯಯನದ ವಿಚಾರಗಳು ಬರುತ್ತವೆ.

ದಾನವನ್ನು ರಾಜನಾದವನು ಮಾತ್ರವಲ್ಲ ಸಮಾಜದ ಎಲ್ಲಾ ಜಾತಿಯ, ಎಲ್ಲಾ ವರ್ಗದ ಜನ ನೀಡಿದ್ದಾರೆ. ಇಲ್ಲಿ ಅವರವರ ಜಾತಿಗಳಿಗೆ ವಿಶಿಷ್ಟವಾದ ಆಚರಣೆಗಳು ತಿಳಿದುಬರುವಂತೆಯೇ ಅವರ ಸಾಂಘೀಕ ಜೀವನದ ಚಿತ್ರವೂ ತಿಳಿದುಬರುತ್ತದೆ. ಅನೇಕ ವೃತ್ತಿಗಳಿಗೆ ಸಂಬಂಧಿಸಿದ ಪಾರಿಭಾಷಿಕ ಪದಗಳು ನಾನಾ ರೀತಿಯ ಸುಂಕದ ಹೆಸರುಗಳು ನಮಗೆ ಶಾಸನಗಳಿಂದ ತಿಳಿದುಬರುತ್ತವೆ.

ದಾನಪತ್ರವನ್ನು ಕಂಚಿನಲ್ಲಿ ತಯಾರಿಸುವುದು ದೀರ್ಘಕಾಲದ ಬಾಳಿಕೆಗೋಸ್ಕರವೆಂಬುದು ತಿಳಿದುಬರುತ್ತದೆ. ನಂತರ ರಾಜನು ತನ್ನ ರಾಜ್ಯದಲ್ಲಿ ದಾನಪತ್ರಗಳ ರಚನೆ ಮಾಡಲು ತನ್ನ ರಾಜ್ಯದಲ್ಲಿ ನುರಿತ, ಅನುಭವಿಕ, ಜಾಣ ಮಂತ್ರಿಗಳಿಂದ ಕೆಲಸ

ಕಾರ್ಯಗಳಿಗೆ ಅನಿಗೊಳಿಸುತ್ತಿದ್ದನು. ಮಂತ್ರಿಯು ನನ್ನ ಆಜ್ಞೆಯಂತೆ ಪತ್ರವಂ ಚನ್ನಾಗಿ ಬರೆದುದಕ್ಕೆ ನಿನ್ನ ಚದುರತ್ವಕ್ಕೆ ಯಾರೂ ಸರಿಯಲ್ಲರೆಂದು ಹೊಗಳಿರುವುದನ್ನು ಕಂಡರೆ ಒಳ್ಳೆಯ ಬರಹಗಾರರು ಯಾವಾಗಲೂ ಹೊಗಳಿಸಿಕೊಳ್ಳುತ್ತಿದ್ದರು. ಹೇಳಿದ್ದನ್ನು ಬರೆದುದಕ್ಕಾಗಿ ಮಂತ್ರಿಗಳಿಗೆ ಪ್ರಶಸ್ತಿಗಳನ್ನು ನೀಡುತ್ತಿದ್ದರೆಂಬುದು ತಿಳಿಯುತ್ತದೆ. ಹೀಗೆ ಕವಿಯು ದಾನಪತ್ರ ರಚನೆಯು ಜೊತೆಗೆ ಜಾಣ್ಮೆ ಬಳಸುವ ಲೋಹದ ಕುರಿತು ಕವಿಯು ಸಮಾಜಕ್ಕೆ ಗುರುತಿಸಿದ್ದಾನೆ.

ದಾನಪತ್ರಗಳು ಆಗಿನ ಕಾಲದ ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಹಿತ್ಯಿಕ, ಭಾಷಿಕ, ಸಾಂಸ್ಕೃತಿಕ ಅಂಶಗಳನ್ನು ಸಾದರಪಡಿಸುವಲ್ಲಿ ಅವಶ್ಯಕವಾಗಿರುವುದು ಕಂಡುಬಂದಿವೆ.

೬.೮ ರಣಭೇರಿ :

ರಾಜನು ಯುದ್ಧಕ್ಕೆ ಹೊರಡುವ ಸಂದರ್ಭಗಳಲ್ಲಿ ವಿವಿಧ ತರಹದ ವಾದ್ಯಗಳ ಬಳಕೆಯಾಗಿರುವುದನ್ನು ಕಾಣುತ್ತೇವೆ.

“ಸ್ವರ್ಗಗಾಮಿನಿಯೆಂಬ ವಾಜಿಯಂ ಕುಣಿಸುತ್ತ
ಭಾರ್ಗವನ ಪ್ರತಿಯನಿಪ ಘನಯುದ್ಧರಂಗದೊಳ್
ಘೋರ್ಗರೆವ ಭೇರಿ, ತಮ್ಮಟ, ಕಹಳೆ ಶಬ್ದಗಳ ದಿಗ್ಜಾಲ ಪೂರೈಸಲು
ಆರ್ಗಿವನ ಸರಾಸರಿ ಧಾತ್ರಿಯೊಳಗಿಲ್ಲೆಂದು
ಸ್ವರ್ಗಮಾರ್ಗದಿ ನೋಡಿ ಖೇಚರರ್ ಪೊಗಳುತಿರೆ
ನಿರ್ಗತ ಮಹಾಶೌರ್ಯದಿಂ ಭರದಿ ಬರುತಿರ್ದನಾರ್ಭಟವನೇನೆಂಬೆನು”[೧೪]

“ಭೇರಿ, ತಮ್ಮಟ, ಕಹಳೆ ನಿಸ್ತಾಳಗಳ ಶಬ್ದ”[೧೫]

ಯುದ್ಧಗೋಸ್ಕರ ಸೈನಿಕರಿಗೆ ಉತ್ಸಾಹ ಹುಮ್ಮಸ್ಸುಗಳನ್ನು ತುಂಬಲು ಯುದ್ಧಗಳಲ್ಲಿ ನಾನಾ ಬಗೆಯ ವಾದ್ಯಗಳನ್ನು ಬಾರಿಸುತ್ತಿದ್ದರು. ಯುದ್ಧಕೆಕ ಹೊರಡುವಾಗ ನಗಾರಿ, ಮಹಾನಗಾರಿ, ತಮ್ಮಟ, ನಿಸ್ಸಾಳ, ಢಕ್ಕೆ, ಡಮರುಗ ಇವು ಯುದ್ಧಗಳಲ್ಲಿ ಬಳಸುವ ಚರ್ಮವಾದ್ಯಗಳು. ಅಲ್ಲದೆ ವಿವಿಧ ರೀತಿಯ ಕಹಳೆಗಳನ್ನು ದೊಡ್ಡ ಧ್ವನಿ ಮಾಡಲು ಊದುತ್ತಿದ್ದರು. ಧ್ವಜಗಳನ್ನು ರಥ ಮತ್ತು ಅಂಬಾರಿಗಳಿಗೆ ಕಟ್ಟುತ್ತಿದ್ದರು. ಇವುಗಳಿಂದ

ಇಂಥವರ ರಥವೆಂದು ಗುರುತಿಸಲು ಸಹಾಯವಾಗುತ್ತಿತ್ತು. ಹೀಗೆ ಈ ವಾದ್ಯಗಳು ಶ್ರೇಷ್ಠ ರಾಜಕೀಯದಲ್ಲಿ ಪ್ರಮುಖ ಅಂಶಗಳಾಗಿವೆ ಎಂದು ಬಸವಕವಿಯು ಪ್ರಚುತಪಡಿಸಿದ್ದಾನೆ.

೬.೯ ಚತುರಂಗಬಲ :

"ಗಜತುರಗಸ್ಯಂದನ ಪದಾತಿಗಳ ಸಂದಣಿಯು
ನಿಜದಿ ಸಡಗರವಾಗೆ ಭೇರಿ ತಮ್ಮಟ ಢಕ್ಕೆ
ಧ್ವಜ ಕಾಳಿ ನಿಸ್ಸಾಳಗಳು ಬಿಡದೆ ಭೋರ್ಗರೆಯ ದಿಗ್ಭಿತ್ತಿಗಳು ಒಡೆವೊಲ್
ವಿಜಯಗುಣಶೀಲ ರಾಹುತ ಮಾನ್ಯ ಮಾಂಡಲಿಕ
ವಜ್ರ ವಾಜಿಗಳ ಕುಣಿಸುತಲಿ ಬರಲು ರಾಜಧ್ವಜ
ರಾಜ ಶ್ರೀಮೋದ ಪುರದರಸ ಪೊರವೊಂಟನೆನೆಂದಂಬೆನಚ್ಚರಿಯನು"[೧೬]

ಮೋದಪುರದ ಅರಸನು ರಾಜಕೀಯವಾಗಿ ಬಲಾಢ್ಯವಾಗಿರುವುದು ತಿಳಿದುಬರುತ್ತದೆ. ಕವಿಯು ಪತ್ರಿಪರಗಣಿಯ ಯುದ್ಧಕ್ಕಾಗಿ ಸೈನ್ಯವನ್ನು ಅಚ್ಚುಕಟ್ಟಾಗಿ ನಿರ್ಮಿಸಿದ್ದನು ಎಂಬುವುದು ತಿಳಿಯುತ್ತದೆ. ಈತನ ರಾಜ್ಯದಲ್ಲಿ ಭಕ್ತಿ ಮತ್ತು ಧರ್ಮಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿರುವುದು ಕಂಡುಬಂದಿದೆ. ಈತ ಮಹಾಲಿಂಗ ಮುನಿನಾಥನನ್ನು ಕಾಣಲು ತನ್ನ ಚತುರಂಗಬಲವನ್ನು ಶೃಂಗರಿಸಿಕೊಂಡು ಅನೇಕ ವಾದ್ಯಗಳಿಂದ ಮೆರವಣಿಗೆಯ ಮೂಲಕ ಹೊರಟಿರುವುದು. ಇದರಿಂದ ಆತನ ರಾಜ್ಯದಲ್ಲಿ ಧರ್ಮಕ್ಕೆ ಹೆಚ್ಚಿನ ಮಹತ್ವ ಕೊಟ್ಟಿರುವುದನ್ನು ಕಾಣುತ್ತೇವೆ. ರಾಜನು ಸೈನ್ಯವನ್ನು ಬೇರೆ ಬೇರೆ ಕಾರ್ಯಗಳಿಗೆ ತೊಡಗಿಸಿಕೊಳ್ಳುತ್ತಿದ್ದನು ಎಂಬುದು ತಿಳಿಯುತ್ತದೆ.

ಒಂದು ರಾಜ್ಯದ ಶ್ರೀಮಂತಿಕೆಯು ಆತನ ಚತುರಂಗಬಲದಿಂದ ತಿಳಿಯುತ್ತದೆ. ಯುದ್ಧದ ಸಂದರ್ಭದಲ್ಲಿ ಈ ನಾಲ್ಕು ಬಲಗಳು ಮಹತ್ವದ ಪಾತ್ರವನ್ನು ವಹಿಸುತ್ತಿದ್ದವು. ಕವಿಯು ಅಂದಿನ ಕಾಲದಲ್ಲಿ ಸೈನ್ಯವನ್ನು ಸೈನ್ಯದಳ (ಕಾಲ್ದಳ), ಅಶ್ವದಳ, ರಥದಳ, ಗಜದಳವೆಂದು ವಿಂಗಡಿಸಿ ಅವುಗಳಿಗೆ ಚತುರಂಗ ಬಲ ಎಂದು ಕರೆಯುತ್ತಿದ್ದರು. ಚತುರಂಗ ಬಲದ ಶ್ರೇಷ್ಠತೆಯಿಂದ ರಾಜನು ಯುದ್ಧದ ದೃಷ್ಟಿಯಲ್ಲಿ ವಿಜಯಿಯಾಗಿರುವುದನ್ನು ಮಹಾಲಿಂಗಲೀಲೆಯಲ್ಲಿ ಉಕ್ತವಾಗಿದೆ.

"ಬಳಿಕೊಂದು ವಾಸರದಿ ಶ್ರೀಮಂತರಾಜ್ಞೆಯಿಂ

[illegible]

ಇಳೆಯಾಣ್ಮ ಮಹಾಲಿಂಗನಾಜ್ಞೆಯಿಂ ಬೀಳ್ಕೊಂಡು
ಛಲದಿಂದ ಚತುರಂಗ ಬಲಸಹಿತ ನಡೆಗೊಂಡು ಪರರಾಜರಂ ಜಯಸುತ
ಕಲಿತನದ ಪೆರ್ಮೆಯಿಂ ಕದನಲಂಪಟರೆನಿಪ
ಬಲವಂತ ರಾಹುತರ ಸಂದಣಿಯ ಮಧ್ಯದೊಲ
ಗುಲಿವ ಕಹಳಾಧ್ವನಿಯ ಸಂಭ್ರಮದಿ ಬರುತಿರ್ದನೆಂದು ಬಣ್ಣಿಸುವೆನು"[೧೭]

೯.೧ **ಸೈನ್ಯದಳ** : ಅರಸು ಮಕ್ಕಳಿಗೆ ಯುದ್ಧ ಕಡ್ಡಾಯವಾಗಿತ್ತು. ಯುದ್ಧದ ಸಂದರ್ಭದಲ್ಲಿ ಇಡೀ ರಾಜಪರಿವಾರ ಸ್ತ್ರೀಯರು, ನಾಯಕರು, ಸೈನಿಕರು ಮುಂತಾದವರು ಯುದ್ಧಭೂಮಿಯಲ್ಲಿರಬೇಕಾಗುತ್ತಿತ್ತು.

ಸೈನಿಕರು ಯುದ್ಧಕ್ಕೆ ಹೊರಡುವಾಗ ಅತಿಯಾಗಿ ಧೈರ್ಯದಿಂದ ಮುನ್ನುಗ್ಗುತ್ತಿದ್ದರು. ಯುದ್ಧದ ಸಂದರ್ಭದಲ್ಲಿ ರಾಜನು ಮತ್ತು ಸೈನಿಕರು ಧರಿಸುವ ಉಡುಪುಗಳು ಬೇರೆ ಬೇರೆಯಾಗಿರುತ್ತಿದ್ದವು. ಯುದ್ಧದಲ್ಲಿ ರಾಜನು ಮತ್ತು ಸೈನಿಕರು ವಿಜಯಶಾಲಿಗಳಾಗಿಯೇ ಬರುತ್ತೇವೆ ಎಂಬ ದೃಢ ನಿರ್ಧಾರವನ್ನು ಮಾಡುತ್ತಿದ್ದರು. ಯುದ್ಧದಲ್ಲಿ ಹೋರಾಡುವಾಗ ಸೈನಿಕರ ಶೌರ್ಯಗುಣಕ್ಕೆ ಬಹಳ ಮಹತ್ವವಿರುತ್ತಿತ್ತು. ಘೋರವಾದ ರಣರಂಗದಲ್ಲಿ ವೀರಾವೇಶದಿಂದ ಹೋರಾಡುತ್ತಿದ್ದರು. ರಾಜರಲ್ಲಿ ಸೈನ್ಯ ಬಲವು ದೊಡ್ಡದಾಗಿರುತ್ತಿತ್ತು.

"ಮಿತ್ತ ಬಿತ್ತರದಿಂದೆ ಒತ್ತಿದರ್ ಮತ್ತಿದರ್
ಕತ್ತಿಗಳ ಕಿತ್ತಾಗ ಸೀಳಿದರ್ ಹೋಳಿದರ್
ಚಿತ್ತದೊಳ್ ಮದವೇರಿ ನೋಡಿದರ್ ಕೋಡಿದರ್ ಮುಂಬಲದಿ ಮೊರಾಂತರಂ
ನೆತ್ತರಮನದಿಗದೊಳ್ ಸುರಸಿದರ್ ಬೆರಸಿದರ್
ಸುತ್ತಿರಿಸಿ ಬಂಗಾಗ ಕಡೆಹಿದರ್ ಕೊಡಹಿದರ್
ಸತ್ತವರ ಮೆಟ್ಟುತ್ತೆ ಹಾರಿದರ್ ಹೊಂದಿದರ್ ಭೂಪಾಲಕನ ಬಲದವರ್"[೧೮]

ರಣರಂಗದಲ್ಲಿ ಹೋರಾಡುವಾಗ ಕಾಲಾಳುಗಳ ಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿತ್ತು. ಇವರು ಯುದ್ಧದಲ್ಲಿ ಮುಂಚೂಣಿಯಲ್ಲಿರುತ್ತಿದ್ದರು. ರಣರಂಗದಲ್ಲಿ ಸೈನಿಕರು ವೈರಿಗಳನ್ನು ಕತ್ತಿಯಿಂದ ಸೀಳುವುದು ರಣರಂಗದಲ್ಲಿ ರಕ್ತದ ಕಾಲುವೆಯನ್ನು ಹರಿಸಿ ಸತ್ತವರನ್ನು ತುಳಿಯುತ್ತ ಘೋರವಾದ ಯುದ್ಧ ನಡೆಯುತ್ತಿತ್ತು. ಯುದ್ಧಭೂಮಿಯಲ್ಲಿ ಸೈನಿಕರು ಪ್ರಾಣದ ಭಯ ತೊರೆದು ವೀರಾವೇಶದಿಂದ ಹೋರಾಡುತ್ತಿದ್ದರು. ಸೈನಿಕರು ವೈರಿಗಳನ್ನು

ಸದೆಬಡಿಯುವುದರಲ್ಲಿ ನಿಪುಣರಾಗಿದ್ದರು ಎಂದು ಬಸವಕವಿಯು ಗಂಭೀರತೆಯಿಂದ ಯುದ್ಧದ ಸಂದರ್ಭವನ್ನು ಬಣ್ಣಿಸಿದಂತಿದೆ.

೬.೨ **ಅಶ್ವದಳ** : ಯುದ್ಧದಲ್ಲಿ ಅಶ್ವದಳಕ್ಕೂ ಹೆಚ್ಚಿನ ಮಹತ್ವವಿತ್ತು. ಅಶ್ವಗಳನ್ನು ಪ್ರತ್ಯೇಕವಾಗಿ ತರಬೇತಿಗೊಳಿಸಿದ ಅಶ್ವದಳವಿತ್ತು. ಅವುಗಳನ್ನು ಪ್ರತ್ಯೇಕವಾಗಿ ತಮಗೆ ಶ್ರೇಷ್ಠತೆಯಿಂದ ಪ್ರೀತಿಯಿಂದ ಹೆಸರುಗಳನಿಟ್ಟು ಕರೆಯುತ್ತಿದ್ದರು.

"ರಣರಾಹುತರ್ ಬಳಿಕ ಧುಮುಕಿದರ್ ವಾಜಿಗಳ
ಕುಣಿಸುತ್ತ ಮಿಂಚುತಿಹ ಕರವಾಳಮಂ ಜಡಿದು"[೧೯]

"ಸ್ವರ್ಗಗಾಮಿನಿಯೆಂಬ ವಾಜಿಯಂ ಕುಣಿಸುತ್ತ
ಭಾರ್ಗವನ ಪುತಿಯೆನಿಪ ಘನಯುದ್ಧರಂಗದೊಳ್"[೨೦]

ಅಶ್ವದಳವು ಯುದ್ಧದಲ್ಲಿ ಹೋರಾಡಲು ಕತ್ತಿಯನ್ನು ಬೀಸಲು ಅನುಕೂಲವಾಗಿರುತ್ತಿತ್ತು. ರಾಜನು ವಿಶೇಷವಾಗಿ ಅಶ್ವದಳದ ಮೇಲೆ ಆಸಕ್ತಿ ವಹಿಸಿರುವುದನ್ನು ಕಾಣುತ್ತೇವೆ. ಆದ್ದರಿಂದ ರಾಜನು ತನ್ನ ಕುದುರೆಗೆ ಪ್ರೀತಿಯಿಂದ 'ಸ್ವರ್ಗಗಾಮಿನಿ' ಎಂಬ ಹೆಸರನ್ನಿಟ್ಟಿರುವುದು ಕಂಡುಬಂದಿದೆ.

೬.೩ **ರಥದಳ** : ಚತುರಂಗ ಬಲದಲ್ಲಿಯೇ ಶ್ರೇಷ್ಠವಾದದ್ದು ಮತ್ತು ಶೃಂಗಾರಗೊಳಿಸುವಂತದ್ದು ರಥ. ರಥಕ್ಕೆ ಅತ್ಯುತ್ತಮ ತರಬೇತಿಗೊಳಿಸಿದ ತುರುಗಳಿರುತ್ತಿದ್ದವು. ಯುದ್ಧದ ರಥಗಳನ್ನು ಸುಂದರವಾಗಿ ಅಲಂಕರಿಸಿ ಲಲಿತರತ್ನ ಪ್ರಭೆಯಿಂದ ಹೊಳೆಯುವಂತೆ ಮಾಡುತ್ತಿದ್ದರು. ರಥಗಳಿಗೆ ಧ್ವಜಗಳನ್ನು ಕಟ್ಟಿ ಇಂಥವರ ಪಡೆಯೆಂದು ಗುರುತಿಸಲು ಸಾಧ್ಯವಾಗುತ್ತಿತ್ತು ಎಂದು ಬಸವಕವಿಯು ಪ್ರಸ್ತಾಪಿಸಿದ್ದಾರೆ.

೬.೪ **ಗಜದಳ** : ಅರಸರ ಸೈನ್ಯದಲ್ಲಿ ಕುದುರೆಗಳಿಗಿಂತ ಪ್ರಮುಖ ಸ್ಥಾನವನ್ನು ಪಡೆದುಕೊಂಡಿತ್ತು. ಯುದ್ಧದಲ್ಲಿ ಆನೆಗಳನ್ನು ಒಂದು ಪ್ರತ್ಯೇಕ ಸಮೂಹವಾಗಿ ಬಳಸುತ್ತಿದ್ದರು. ಕವಿಯು ಆನೆಗಳನ್ನು ವಿವಿಧ ಕಾರ್ಯಗಳಿಗಾಗಿ ಬಳಸಿರುವುದನ್ನು ತೋರ್ಪಡಿಸುತ್ತಾನೆ.

ಹೀಗೆ ಬಸವಕವಿಯು ತನ್ನ ಕಾಲದ ಯುದ್ಧದ ವಿವರಣೆಯಲ್ಲಿ ಚತುರಂಗ ಬಲದ ಬಗೆಗೆ ಸಾಕಷ್ಟು ಮಾಹಿತಿಗಳನ್ನು ವಿವಿಧ ಸಂದಿಗಳ ಮೂಲಕ ಒದಗಿಸಿದ್ದಾನೆಂದು ಹೇಳಬಹುದು.

೬.೧೦ ಯುದ್ಧ :

"ಮಾರಾಂತ ಪ್ರತಿಭಟರ ಶಿರಸಂಗಳಂ ಖಡ್ಗ
ಧಾರೆಯಿಂದಿಳುಹುವೆಂ ಪಾತ್ರಿಪರಗಣ ದುರ್ಗ
ದಾರಮ್ಯರಾಜರಂ ಕೊಂದು ಕೂಗುವೆನೆಂದು ಗೋವಿಂದ ಮಹಾರಾಜನು
ಧೀರತನದಿಂ ಪಿತನ ಬಲದೊಳಗೆ ಬರುತಿರಲು
ಧಾರುಣಿಯು ಕಂಪಿಸುತ್ತಿರಲಾಗ ಕಹಳೆಗಳ್
ಚೀರಿದವದೇನೆಂಬೆನದ್ಭುತವನೀ ಜಗದಿ ಬಣ್ಣಿಸುವ ಕವಿಯಾವನು"[೨೧]

"ರಣರಾಹುತರ್ ಬಳಿಕ ದುಮುಕಿದರ್ ವಾಜಿಗಳ
ಕುಣಿಸುತ್ತ ಮಿಂಚುತಿಹ ಕರವಾಳಮಂ ಜಡಿದು
ಮಣಿಸುತ್ತೆ ತೋಣಿಯಂ ಕಡಿಕಂಡಮಂ ಮಾಡದದುರ್ಗವನ್ನೇರುತ
ಆಸೆವುತ್ತ ಪ್ರತಿಭಟರ ಶಿರಸಂಗಳಂ ತರಿದು
ರಣರಂಗ ದೊಳಗಪ್ಸರಾಂಗನೆಯ ರೊಡವೆರೆಯ
ಸೆನಸುತ್ತಮಿರೆ ಕಂಡು ಗೋವಿಂದ ಶಮಸೂರ ಕೋಪಾಗ್ನಿಯಿಂ ನುಡಿದನು"[೨೨]

ಮಲ್ಲಯುದ್ಧ, ಮಹಾಯುದ್ಧ ಹೀಗೆ ಹಲವು ಬಗೆಯ ಯುದ್ಧಗಳು ನಡೆಯುತ್ತಿದ್ದವು ಎಂಬ ಪ್ರಾಚೀನ ಕೆಲವು ಐತಿಹ್ಯಗಳಿಂದ ದೊರೆಯುತ್ತವೆ. ಬೇರೆ ಬೇರೆ ಯುದ್ಧದ ಪ್ರಕಾರಗಳಿಂದ ಜಯಶಾಲಿಯಾಗುತ್ತಿದ್ದರು. ಇಲ್ಲಿ ಪತ್ರಿಪರಗಣೆಯೆಂಬ ರಾಜ್ಯದ ಕೋಟೆಯನ್ನು ವಶಪಡಿಸಿಕೊಳ್ಳಲು ಮಾಲೋಜಿರಾಜನು ಮತ್ತು ತನ್ನ ಮಗನಾದ ಗೋವಿಂದನು ಜೊತೆಗೂಡಿ ವೀರಾವೇಶದಿಂದ ಹೋರಾಡಿ ವಶಪಡಿಸಿಕೊಂಡರು. ಹೀಗೆ ರಾಜರು ಅನೇಕ ರಾಜ್ಯಗಳನ್ನು ಹೋರಾಟದ ಮೂಲಕ ವಶಪಡಿಸಿಕೊಂಡಿರುವುದನ್ನು ಬಸವಕವಿಯು ಪ್ರಸ್ತಾಪಿಸಿದ್ದಾನೆ.

೬.೧೧ ಆಯುಧಗಳು :

ಯುದ್ಧಗಳು ನಡೆಯುತ್ತವೆ ಎಂದು ತಿಳಿದುಕೊಂಡಾಗ ಇದರಲ್ಲಿ ರಾಜ ಮತ್ತು ಸೈನಿಕರಿಗೆ ಪ್ರಮುಖವಾಗಿ ಹೋರಾಡಲು ಕೈಯಲ್ಲಿ ವಿವಿಧ ಆಯುಧಗಳಿರುವುದನ್ನು ಕಾಣುತ್ತೇವೆ. ಅಂತಹ ಕೆಲವು ಆಯುಧಗಳನ್ನು ಬಸವಕವಿಯು ಪ್ರಸ್ತಾಪಿಸಿದ್ದಾನೆ.

ಖಡ್ಗ : ಖಡ್ಗ ಅಥವಾ ಕತ್ತಿಯು ಆಯುಧಗಳಲ್ಲಿ ಇದು ಬಹಳ ಶ್ರೇಷ್ಠ.

ಪ್ರಮುಖವಾದದ್ದು. ಇದನ್ನು ಯುದ್ಧದ ಸಂದರ್ಭದಲ್ಲಿ ಪ್ರಮುಖ ಅಸ್ತ್ರವಾಗಿ ರಾಜರು, ಸೈನಿಕರು ಬಳಸುತ್ತಿದ್ದರು ಎಂಬುದು ಗೊತ್ತಾಗುತ್ತದೆ. ಇವುಗಳನ್ನು ವಿವಿಧ ಲೋಹಗಳಿಂದ ಮಾಡಿರುವುದು ಗೊತ್ತಾಗುತ್ತದೆ. ಇವುಗಳ ಪ್ರಕಾರಗಳು ಬೇರೆ ಬೇರೆ ಅಳತೆಯಲ್ಲಿ ಹೆಚ್ಚು ಕಡಿಮೆ ಸುಂದರವಾಗಿರುತ್ತಿದ್ದವು.

ಭರ್ಚಿ : ಯುದ್ಧದಲ್ಲಿ ವೈರಿಗಳಿಗೆ ದೂರದಿಂದಲೇ ಎಸೆಯಲು, ಚುಚ್ಚಲು ಇವು ಪ್ರಮುಖ ಅಸ್ತ್ರಗಳಾಗಿದ್ದವು. ಇವು ಬಹಳಷ್ಟು ಉದ್ದವಿರುವುದು ಗೊತ್ತಾಗುತ್ತದೆ. ಇವುಗಳನ್ನು ರಾಜರು ಬೇಟೆಯಾಡಲು ಸಹ ಬಳಸುತ್ತಿದ್ದರು.

ಬಾಣ : ಬಿಲ್ಲು, ಬಾಣಗಳನ್ನು ರಾಜರು ಯುದ್ಧದಲ್ಲಿ, ಪ್ರಾಣಿಗಳ ಬೇಡೆಯಾಡಲು ಅಲ್ಲಲ್ಲಿ ಇವುಗಳನ್ನು ಮುಖ್ಯ ಅಸ್ತ್ರವಾಗಿ ಬಳಸುತ್ತಿದ್ದರು ಎಂಬುದು ತಿಳಿಯುತ್ತದೆ. ಪ್ರಾಚೀನ ಕಾಲದ ಬೇಟೆಯಾಡಲು ಪ್ರಮುಖ ಅಸ್ತ್ರವಾಗಿತ್ತು ಎಂದು ಬಸವಕವಿಯು ಪ್ರಸ್ತಾಪಿಸಿದ್ದಾನೆ. ಜೊತೆಗೆ ಬಾಣಗಳನ್ನು ಇಡಲು ಹೆಗಲಿಗೆ ಭತ್ತಳಿಕೆ ಎಂಬ ಕೊಳವನ್ನು ಕಟ್ಟಿಕೊಳ್ಳುತ್ತಿದ್ದರು.

ಹೀಗೆ ಆಯುಧಗಳಿಗೆ ತುಕ್ಕು ಹಿಡಿಯಬಾರದೆಂದು ಅವುಗಳನ್ನು ಚರ್ಮದ ಚೀಲದಲ್ಲಿ ಹಾಕಿ ಇಡುತ್ತಿದ್ದರು. ಆಯುಧಗಳು ದೀರ್ಘಕಾಲದವರೆಗೆ ಬಾಳಿಕೆ ಬರಲಿ ಎನ್ನುವುದಕ್ಕೋಸ್ಕರ ಅವುಗಳನ್ನು ಸಂರಕ್ಷಿಸಿಡುವ ಪದ್ಧತಿಯೂ ಗೊತ್ತಿತ್ತೆಂಬುದು ಸ್ಪಷ್ಟವಾಗುತ್ತದೆ.

ನಮ್ಮ ಸಂಸ್ಕೃತಿಯಲ್ಲಿ ಆಯುಧಗಳಿಗೆ ಪ್ರಮುಖ ಸ್ಥಾನವನ್ನು ಕೊಟ್ಟಿರುವುದರಿಂದ ಪ್ರತಿವರ್ಷ ವಿಜಯದಶಮಿಯಂದು ಅವುಗಳನ್ನು ಪೂಜಿಸುತ್ತೇವೆ. ಪರಂಪರಾಗತವಾಗಿ ಮೈಸೂರು ಅರಸರಕಾಲದಲ್ಲಿಯೂ ವಿಜಯದಶಮಿಯಂದು ಪ್ರತಿವರ್ಷವೂ ಆಯುಧ ಪೂಜೆಗಳನ್ನು ವೈಭವಯುತವಾಗಿ ಮಾಡುತ್ತಿರುವುದನ್ನು ಕಾಣುತ್ತೇವೆ. ಹೀಗೆ ಆಯುಧಗಳು ಶ್ರೇಷ್ಠಸ್ಥಾನ ಪಡೆದು ಪೂಜಿಸಲ್ಪಡುತ್ತವೆ ಎಂಬುದನ್ನು ಬಸವಕವಿಯು ನಿರೂಪಿಸಿದ್ದಾನೆ.

೬.೧೨ ಸಮಾರೋಪ

ಬಸವಕವಿಯು ಮಹಾಲಿಂಗಲೀಲೆಯಲ್ಲಿ ರಾಜಕೀಯ ಅಂಶಗಳು ನಮ್ಮ ಸಂಸ್ಕೃತಿಯ ಅಂಶಗಳನ್ನು ಎತ್ತಿ ಹಿಡಿಯುವುದನ್ನು ಕಾಣುತ್ತೇವೆ. ತನ್ನ ಕೃತಿಯಲ್ಲಿ ರಾಜಕೀಯ ಅಂಶಗಳ ಕುರಿತು ವಿಶೇಷ ಗಮನ ಹರಿಸಿರುವುದನ್ನು ಕಾಣುತ್ತೇವೆ. ರಾಜಕೀಯ ಪ್ರಮುಖ

ಅಂಶಗಳಾದ ರಾಜ-ರಾಣಿಯರು, ರಾಜನ ಭಕ್ತಿ, ರಾಜನು ವಚನವನ್ನು ನೀಡುವುದು ಶಾಸನಗಳ ರಚನೆ, ದಾನ ಪತ್ರಗಳನ್ನು ಹೊರಡಿಸುವುದು, ಯುದ್ಧ ಆಯುಧಗಳು, ಯುದ್ಧ ವಾದ್ಯಗಳು, ಚತುರಂಗಬಲ ಹೀಗೆ ಹತ್ತು ಹಲವಾರು ಅಂಶಗಳ ಮೂಲಕ ರಾಜಕೀಯವಾಗಿ ಬಲಿಷ್ಠವಾಗಿತ್ತು ಎಂದು ನಿರೂಪಿಸಿದ್ದಾನೆ. ರಾಜನು ತನ್ನ ರಾಜ್ಯದಲ್ಲಿ ಜನರು ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಬಲಿಷ್ಠರಾಗಿದ್ದರು. ಜನರ ಸಮಸ್ಯೆಗಳಿಗೆ ಸ್ಪಂಧಿಸುವ ಮತ್ತು ಪ್ರಾಣೀಗಳಲ್ಲಿಯೂ ರಾಜನಿಗೆ ಕರುಣೆಯಿತ್ತೆಂಬುದು ಇಂತಹ ಎಲ್ಲ ಗುಣಗಳು ಮಾಲೋಜಿ ರಾಜನಲ್ಲಿದ್ದವು ಎಂಬುದನ್ನು ವಿಶೇಷವಾಗಿ ಹೇಳಿ ರಾಜಕೀಯ ಅಂಶಗಳು ಸಂಸ್ಕೃತಿಯ ಮೇಲೆ ಪ್ರಭಾವ ಬೀರಿವೆಯೆಂಬುದು ತಿಳಿಯುತ್ತದೆ.

ಕೊನೆ ಟಿಪ್ಪಣಿಗಳು :

೧) ಮಹಾಲಿಂಗಲೀಲೆ ಸಂಧಿ-೭, ಪದ್ಯ-೨೪, ಪುಟ-೭೧
೨) ಮಹಾಲಿಂಗಲೀಲೆ ಸಂಧಿ-೨೦, ಪದ್ಯ-೭, ಪುಟ-೨೫೫
೩) ಮಹಾಲಿಂಗಲೀಲೆ ಸಂಧಿ-೮, ಪದ್ಯ-೧೨, ಪುಟ-೮೦
೪) ಮಹಾಲಿಂಗಲೀಲೆ ಸಂಧಿ-೮, ಪದ್ಯ-೧೯, ಪುಟ-೮೧
೫) ಮಹಾಲಿಂಗಲೀಲೆ ಸಂಧಿ-೮, ಪದ್ಯ-೨೦, ಪುಟ-೮೧
೬) ಮಹಾಲಿಂಗಲೀಲೆ ಸಂಧಿ-೮, ಪದ್ಯ-೨೧, ಪುಟ-೮೧
೭) ಮಹಾಲಿಂಗಲೀಲೆ ಸಂಧಿ-೮, ಪದ್ಯ-೧೫, ಪುಟ-೮೦
೮) ಮಹಾಲಿಂಗಲೀಲೆ ಸಂಧಿ-೯, ಪದ್ಯ-೧೯, ಪುಟ-೮೯
೯) ಮಹಾಲಿಂಗಲೀಲೆ ಸಂಧಿ-೯, ಪದ್ಯ-೧೨, ಪುಟ-೮೮
೧೦) ಮಹಾಲಿಂಗಲೀಲೆ ಸಂಧಿ-೮, ಪದ್ಯ-೨೪, ಪುಟ-೮೨
೧೧) ಮಹಾಲಿಂಗಲೀಲೆ ಸಂಧಿ-೯, ಪದ್ಯ-೧೦, ಪುಟ-೮೨
೧೨) ಮಹಾಲಿಂಗಲೀಲೆ ಸಂಧಿ-೮, ಪದ್ಯ-೩೧, ಪುಟ-೮೪
೧೩) ಮಹಾಲಿಂಗಲೀಲೆ ಸಂಧಿ-೮, ಪದ್ಯ-೩೨, ಪುಟ-೮೪
೧೪) ಮಹಾಲಿಂಗಲೀಲೆ ಸಂಧಿ-೨೧, ಪದ್ಯ-೪, ಪುಟ-೨೫೯
೧೫) ಮಹಾಲಿಂಗಲೀಲೆ ಸಂಧಿ-೫, ಪದ್ಯ-೨೦, ಪುಟ-೫೨
೧೬) ಮಹಾಲಿಂಗಲೀಲೆ ಸಂಧಿ-೭, ಪದ್ಯ-೧೧, ಪುಟ-೬೮
೧೭) ಮಹಾಲಿಂಗಲೀಲೆ ಸಂಧಿ-೨೧, ಪದ್ಯ-೩, ಪುಟ-೨೫೯
೧೮) ಮಹಾಲಿಂಗಲೀಲೆ ಸಂಧಿ-೨೧, ಪದ್ಯ-೧೦, ಪುಟ-೨೬೦
೧೯) ಮಹಾಲಿಂಗಲೀಲೆ ಸಂಧಿ-೨೧, ಪದ್ಯ-೧೨, ಪುಟ-೨೬೧
೨೦) ಮಹಾಲಿಂಗಲೀಲೆ ಸಂಧಿ-೨೧, ಪದ್ಯ-೪, ಪುಟ-೨೫೯
೨೧) ಮಹಾಲಿಂಗಲೀಲೆ ಸಂಧಿ-೨೧, ಪದ್ಯ-೬, ಪುಟ-೨೫೯
೨೨) ಮಹಾಲಿಂಗಲೀಲೆ ಸಂಧಿ-೨೧, ಪದ್ಯ-೧೨, ಪುಟ-೨೬೧

ಅಧ್ಯಾಯ – ೭

ಜಾನಪದೀಯ ಅಂಶಗಳು

೭.೧. ಪ್ರವೇಶ

೭.೨. ಜಾನಪದೀಯ ವಾದ್ಯಗಳು

೭.೩. ಮುತ್ತಿನಾರತಿ

೭.೪. ಸ್ವಪ್ನಗಳು.

೭.೫. ಆಹಾರ ಪದಾರ್ಥಗಳು.

೭.೬. ಪಟ್ಟಣದ ಶೃಂಗಾರ

೭.೭. ಬೈಗುಳಗಳು.

೭.೮. ಅಳತೆ ಮಾನದಂಡಗಳು

೭.೯. ಸಂಪ್ರದಾಯಗಳು

೭.೧೦ ಜಾನಪದ ದೈವ.

೭.೧೧. ಜಾನಪದ ಧರ್ಮ.

೭.೧೨. ಸಮಾರೋಪ

ಅಧ್ಯಾಯ - ೭

ಜಾನಪದೀಯ ಅಂಶಗಳು :

೭.೧ ಪ್ರವೇಶ :

ಭಾರತ ಹಳ್ಳಿಗಳ ದೇಶ. ಜನರ ಮುಖ್ಯ ಕಸಬು ಕೃಷಿ. ಗ್ರಾಮೀಣ ಭಾಗದ ಜನ ಸಮುದಾಯದ ಪ್ರಮುಖ ಉದ್ಯೋಗ ಒಕ್ಕಲುತನವಾದ್ದರಿಂದ ಅವರ ಜೀವನ ಕ್ರಮವೇ ಜಾನಪದೀಯವಾಗಿದೆ. ಗ್ರಾಮೀಣ ಜನಾಂಗದ ನಂಬಿಗೆ, ಆಚರಣೆ, ಭಕ್ತಿ, ಶ್ರದ್ಧೆ, ಊಟ, ಉಡುಗೆ, ತೊಡುಗೆ, ನಂಬಿಕೆಗೆ ಸ್ವಪ್ನ, ಮಾಟ, ಮಂತ್ರ, ಹಬ್ಬ, ಹುಣ್ಣಿವೆ, ಜಾತ್ರೆ, ದೇವರು, ಇತ್ಯಾದಿ ಹತ್ತು ಹಲವು ಸಂಗತಿಗಳಲ್ಲಿ ಜಾನಪದೀಯ ಅಂಶಗಳು ಹಾಸು ಹೊಕ್ಕಾಗಿರುತ್ತವೆ. ಬಸವ ಕವಿ ರಚಿಸಿರುವ 'ಮಹಾಲಿಂಗ ಲೀಲೆ' ಯಲ್ಲಿ ಜಾನಪದೀಯ ಅಂಶಗಳು ಹೇರಳವಾಗಿವೆ. ಅವುಗಳನ್ನಿಲ್ಲಿ ನೋಡಬಹುದು.

ಬಸವ ಕವಿಯು ಮಹಾಲಿಂಗಲೀಲೆಯಲ್ಲಿ ಹತ್ತು ಹಲವಾರು ಜಾನಪದ ಅಂಶಗಳಿಂದ ತುಂಬಿದ ಕಣಿಯಾಗಿಸುವಲ್ಲಿ ಶ್ರಮಪಟ್ಟಂತಿದೆ. ಮಾನವನ ಜೀವನದಲ್ಲಿ ಸಾಮಾಜಿಕ, ಧಾರ್ಮಿಕ, ರಾಜಕೀಯ ವೈಭವಗಳನ್ನು ಬೆಳಕಿಗೆ ತರುವುದರ ಮೂಲಕ ಇದಕ್ಕೆ ಪರ್ಯಾಯವಾಗಿ ಶೃಂಗರಿಸಲು ಹತ್ತು ಹಲವಾರು ವಾದ್ಯಗಳು, ಪುರದ ಶೃಂಗಾರ, ಆಹಾರ ಪದಾರ್ಥಗಳಲ್ಲಿ, ಅಳತೆ ಮಾನಗಳಲ್ಲಿ ಮುಂತಾದ ವಿಷಯಗಳಲ್ಲಿ ಜಾನಪದೀಯ ಅಂಶಗಳು ಸಾಕಷ್ಟು ಇರುವುದನ್ನು ಕಂಡುಕೊಂಡಿದ್ದೇವೆ. ಮಾನವ ಸಂಪ್ರದಾಯದಲ್ಲಿ ಜನಪದ ಅಂಶಗಳು ಹಾಸುಹೊಕ್ಕಾಗಿವೆ ಎಂಬುದು ಮಹಾಲಿಂಗ ಲೀಲೆಯು ಸಾದರಪಡಿಸುತ್ತದೆ.

೭.೨ ಜಾನಪದೀಯ ವಾದ್ಯಗಳು :

"ಭೇರಿ, ತಮಟೆ, ಕಹಳೆ, ನಿಸ್ಸಾಳಗಳ ಶಬ್ಧ
ಪೋರಿಸಲ್ ದಿಕ್‌ತಟಧಿ ಭಕ್ತಾಳಿ ಬಿಡದೆ ಕೈ
ವಾರಿಸುತ ಜಯ ಜಯ ತುಘೇ ಚಾಂಗು ಭಲರೆಂದು ಕೊಂಡಾಡೆ ಕಾಮಿನಿಯರು
ಮಾರಹರನಿಗೆ ಮುತ್ತಿನಾರತಿಗಳಂ ಬೆಳಗಿ
ಚಾರು ಚರಣಕ್ಕೆರಗಿ ಪರಸುತ್ತ ಲಾಕ್ಷಣದಿ
ಭೂರಿಸಂಭ್ರದಿಂದೆ ತತ್ಪುರವನೋಳ್ ಪೊಕ್ಕು ಬರುತ್ತಿರ್ದರೇನೆಂಬೆನು"[೧]

ಸಮಾಜದಲ್ಲಿ ಕೆಲವು ಸಂಭ್ರಮಗಳಲ್ಲಿ ಮಹಾನ್ ವ್ಯಕ್ತಿಗಳನ್ನು ಕರೆತರಲು ಸಂಪ್ರದಾಯದಲ್ಲಿರುವ ಭೇರಿ, ತಮಟೆ, ಕಹಳೆ, ನಿಸ್ಸಾಳೆ, ಡಕ್ಕೆ, ಡಮರು ಮುಂತಾದ ವಾದ್ಯಗಳು ಚರ್ಮ ಮತ್ತು ಹಲಗೆಗಳ ಮೂಲಕ ಮಾಡಿರುವುದು ನಮ್ಮ ಜಾನಪದ ಸಂಸ್ಕೃತಿಯನ್ನು ಬಿಂಬಿಸುತ್ತದೆ. ವಾದ್ಯಗಳ ಧ್ವನಿಯ ಗಂಭೀರತೆಯನ್ನು ಇವು ಯುದ್ಧದ ಸಂದರ್ಭದಲ್ಲಿ ಚತುರಂಗ ಬಲಕ್ಕೆ ವೀರತೆಯನ್ನು, ಉತ್ಸಾಹವನ್ನು ತುಂಬಿ ಹುರಿದುಂಬಿಸುತ್ತವೆ. ಇಂತಹ ಸಂದರ್ಭದಲ್ಲಿ ಜಯಕಾರಗಳನ್ನು ಕೂಗುವುದು ಜನಪದರ ಸಂಪ್ರದಾಯವಾಗಿದೆ ಎಂದು ಹೇಳಬಹುದು.

೭.೩ ಮುತ್ತಿನಾರತಿ :

ನಮ್ಮ ಸಂಪ್ರದಾಯದ ಸಂಸ್ಕೃತಿಯಲ್ಲಿ ಮುತ್ತಿನಾರತಿಯು ಶ್ರೇಷ್ಠತೆಯನ್ನು ಪಡೆದುಕೊಂಡಿದೆ. ಕೆಲವು ಸಂಪ್ರದಾಯಗಳಲ್ಲಿ ಹಲವು ಸಂದರ್ಭಗಳಲ್ಲಿ ಭಕ್ತಿ, ಗೌರವದ ಸಂಕೇತವಾಗಿ ಮುತ್ತಿನಾರತಿಯನ್ನು ಬೆಳಗಿಸುವುದು ವಾಡಿಕೆಯಾಗಿದೆ. ಇದು ವಿವಿಧ ಸಂಪ್ರದಾಯಗಳಲ್ಲಿ ಪರಂಪರಾಗತವಾಗಿ ಬಂದಿದೆ. ಇವತ್ತೂ ಕೂಡಾ ಹಬ್ಬಹರಿದಿನಗಳಲ್ಲಿ ವಿವಾಹಗಳ ಸಂದರ್ಭಗಳಲ್ಲಿ ಊರಿಗೆ ಶ್ರೇಷ್ಠ ವ್ಯಕ್ತಿಗಳ ಆಗಮನದ ಸಂದರ್ಭದಲ್ಲಿ ಯುದ್ಧಕ್ಕೆ ರಾಜನು ಹೊರಡುವ ಸಂದರ್ಭಗಳಲ್ಲಿ, ಜನನ-ಮರಣ ಹೀಗೆ ಹಲವು ಸಂದರ್ಭಗಳಲ್ಲಿ ಆರತಿಯನ್ನು ಬೆಳಗಿಸಿಕೊಳ್ಳುವ ಶ್ರೇಷ್ಠ ಸಂಸ್ಕೃತಿಯನ್ನು ಕಾಣುತ್ತೇವೆ. ಕವಿಯು ಮುತ್ತಿನಾರತಿಯ ಕುರಿತು. ಪೂಜ್ಯನೀಯವಾಗಿದೆ. ಅದು ಸಂಸ್ಕೃತಿಯಲ್ಲಿ ಶ್ರೇಷ್ಠ ಸ್ಥಾನ ಪಡೆದಿದೆ ಎಂದು ನಿರೂಪಿಸುತ್ತಾನೆ.

೭.೪ ಸ್ವಪ್ನಗಳು :

ಕನಸುಗಳು ಕಾಲ್ಪನಿಕ ಲೋಕದ ಜೀವಂತ ಕುರುಹುಗಳು, ಎನ್ನುವುದು ಬಸವಕವಿಯ ಮಹಾಲಿಂಗಲೀಲೆಯಿಂದ ತಿಳಿಯುತ್ತವೆ. ಇವು ಸಾಂಪ್ರದಾಯಕವಾಗಿ ಕಲ್ಪನೆಯ ಮೂಲಕ ನಮ್ಮ ಸಂಸ್ಕೃತಿಯನ್ನು ಬಿಂಬಿಸುತ್ತವೆ.

ಬಸವಕವಿಯು ಈ ಪದ್ಯಗಳನ್ನು ನೋಡಲಾಗಿ,

"ಕಂದಮೂಲಾದಿಗಳ ಸೇವಿಸುವ ಪಲವು ದಿನ
ಸಂದು ಮಾರ್ಕಂಡೇಯನಾಶ್ರಯದಿ ವರ ತಪವ
ಚಂದದಿಂ ನಿರ್ಮಿಸುತ ಬಳಿಕೊಂದು ವಾಸರದಿ ತನುಶೋಷಣೆಯ ಶ್ರಮವನು

ಪೊಂದಿ ಶಿವಯೋಗನಿದ್ರಾಮುದ್ರಪರವಶದಿ
ಕುಂದದಮಲಾನಂದ ಮಹಾಲಿಂಗನಿರಲಂದು
ಬಂದು ಗಂಗಾದರಂ ನಿಜರೂಪಮಂ ತೋರಿ ಸ್ವಪ್ನದೊಳ್ ಸೂಚಿಸಿದನು."[೨]

"ಮುನ್ನ ಕೈಲಾಸದಾಸ್ಥಾನದೊಳ್ ಪೇಳ್ದಂತೆ
ಪನ್ನಗಧಂ ಬಂದು ಸ್ವಪ್ನದೋಳ್ ಸೂಚಿಸುತ"[೩]
"ಭರದಿಂದ ತತ್ಪಾದ ತೀರ್ಥಪ್ರಸಾದಗಳ
ಶರಣೆಂದು ಸೇವಿಸುತ ಸಂತತಂ
ಹರುಷದಿಂದಿಹುದೆಂದು ಹರ ಪೇಳ್ದು ಸ್ವಪ್ನದೋಳ್ ನಿಜರೂಪಮಂ ತೋರುತ"[೪]

"ಎಚ್ಚರಿಸಿ ಪೋಗಲ್ಕೆ ಸತಿಪತಿಗಳೀರ್ವರುಂ
ಅಚ್ಚರಿಯಲಾ ಭ್ರಾಂತ ಸ್ವಪ್ನದಿಂಗಿತಮೇನು
ಕಿಚ್ಚುಗಣ್ಣನು ಪೇಳ್ದ ಬಚ್ಚ ಬರಿ ಪರ ಬೊಮ್ಮದಚ್ಚಾದ ಜಂಗಮವಿದು
ನಿಚ್ಚವಾಗಿಹ ಮಾತು ನಿಜವೆಂದು ಭಾವದೊಳ್
ಮೆಚ್ಚುತ್ತ ಮನದ ಪಂಶಯದ ಗಂಟಂ ಬಿಡದೆ
ಬಿಚ್ಚುತ್ತಿರಾ ಸಮಯದೊಳು ನೇಮ ಕೈಗೂಡಿತೆಂಬಂತೆ ಮುಂಗೋಳಿಯು"[೫]

"ಶ್ರೀ ಗಿರಿಸುತಾಕಾಂತನಾ, ಸಮಯಮಂ ತಿಳಿದು
ರಾಗದಿಂದಗಜಾತೆ ಮುಖ್ಯ ಪುಮಥರಿಗೊರೆದು
ಭುಗಗನಮರಿವಂತೆ ಬಂದನಾನತ ಭಕ್ತಿ ಪರಿಪಾಲನೆಂದೆಂಬುದ
ಈಗ ತೋರುವ ತೆರದಿ ಸ್ವಪ್ನದೊಳಗೆಚ್ಚರಿಸಿ
ನಾಗಪತಿ ಮುಷ್ಟಿನಾಯಕರಿಗೆ ಪ್ರೇಮದಿಂ
ಬೋಗಿಪತಿಸೂತ್ರ ಸೂಚಿಸಿದನದೇನೆಂಬೆನಚ್ಚರಿಯು ಭೂಗತದೋಳು"[೬]

"ಏಕಾಂತಮಂದಿರದಿ ಸಕಲ ಸೌಭಾಗ್ಯದಿಂ
ಶ್ರೀಕಾಂತನಪ್ರಿಯಂ ಸ್ಮರಿಸುತ್ತ ಮಾಲೋಜಿ
ಶಯನಗೈದಿರಲು ಮಹಾಲಿಂಗನ ಸುಲೀಲೆಯಂ
ಭೂಕಾಂತನಾ ರಾತ್ರಿಯೋಳ್
ಲೋಕಾಂತರಾಳದೋಳ್ ಪ್ರಕಟಿಸುವ ಕಾರಣದಿ

ಮೂಕಾಂತನಕ್ಷಿಪದ ಪಂಕೇಜಪೂಜಿತನು
ಮೂಕಾಂತೆ ಸಹಿತ ಬಂದಾಕ್ಷಣದಿ ಸ್ವಪ್ನದೋಳ್ ಸೂಚಿಸಿದನೇನೆಂಬೆನು"[೭]

"ಯೋಗನಿದ್ರಾಮುದ್ರೆಯಿಂದಿರುವ ಸಮಯದೋಳು
ರಾಗದಿಂ ಸ್ವಪ್ನಸೂಚನೆಂದೋರಿತೇನೆಂಬೆ
ಯೋಗಿವರ ಮಹಾಲಿಂಗ ನಾನಿರ್ಪೆ ಶ್ರೀರಜತಪುರಭೂಮಿಯೋಳು ಸಂತತಂ
ಈಗ ಪೂಜಾರ್ಪಣಗಳಿಲ್ಲದಲ್ಲಿ ಬಹುಕಾಲ
ದೇಗುಲವ ಬಿಟ್ಟು ನಿಕ್ಷೇಪದಿಂದಿಹೆನೆನ್ನ
ಬೇಗದಿಂದಲಿ ತೆಗೆದು ಪಾಲಿಸುವದೆಂದೆನುತ ಶೂನ್ಯಲಿಂಗವು ಪೇಳಲು"[೮]

ಹೀಗೆ ಮುಂತಾದ ಪದ್ಯಗಳ ಮೂಲಕ ಬಸವಕವಿಯ ಕನಸುಗಳ ಮಾಹಿತಿ ನೀಡಿರುವುದು ನಮ್ಮ ಸಂಸ್ಕೃತಿಯ ಜಾನಪದೀಯ ಮುಖ್ಯ ಅಂಶವಾಗಿದೆ. ಬಸವಕವಿಯು ಮಹಾಲಿಂಗ ಮುನಿನಾಥರು ಶಿವಯೋ ಗನಿದ್ರಾ ಪರವಶನಾಗಿರಲು ಗಂಗಾಧರನು ಸ್ವಪ್ನದಲ್ಲಿ ತೋರಿರುವದು.

ಯೋಗಿಗುರುಲಿಂಗ ಜಂಗಮನ ಸ್ವಪ್ನದಲ್ಲಿ ಶಿವನುಮಹಾಲಿಂಗ ಜಂಗಮನ ಕುರಿತು ಹೇಳಿರುವದು ನಾಗಖ್ಯನು ಮತ್ತೆ ಮುಪ್ಪಿನಾಂಬೆಯರು ಈ ಸತಿಪತಿಗಳು ಮಲಗಿರಲು ಪರಶಿವನು ಸ್ವಪ್ನದಲ್ಲಿ ತೋರಿರುವುದು ಮೋದಪುರವನ್ನಾಳುತ್ತಿದ್ದ ಮಾಲೋಜಿಭೂಪತಿಗೆ ಬಿದ್ದ ಕನಸಿನಲ್ಲಿ "ನೀನಾಳ್ದ ರಾಜ್ಯದಲ್ಲಿದ್ದ ಮಹಾಲಿಂಗ ಮುನಿರಾಜನ ಪಾದಕಮಲಗಳನ್ನು ಕಾಣಬೇಕೆಂದು" ಪರಶಿವನು ಸೂಚಿಸುವನು ಹೀಗೆ ಮುಂತಾದ ಕನಸುಗಳ ಮೂಲಕ ಮಹಾಲಿಂಗೇಶ್ವರರ ಮೂಲಕ ವೀರಶೈವಧರ್ಮದಲ್ಲಿ ಭಕ್ತಿಯನ್ನು ಹೆಚ್ಚಾಗುವಂತೆ ಮಾಡಿರುವುದನ್ನು ಕಾಣುತ್ತೇವೆ.

ಹೀಗೆ ಕನಸುಗಳು ಹಿಂದಿನ ಕಾಲದಲ್ಲಿ ಸಂಚಾರವಿಲ್ಲದ್ದರಿಂದ ಕುದುರೆಗಳ ಮೂಲಕ ವ್ಯಕ್ತಿಗಳ ಮೂಲಕ ಸುದ್ದಿ ಪತ್ರಗಳನ್ನು ತಲುಪಿಸುವ ಹಾಗೆ ಇಲ್ಲಿ ಕನಸುಗಳು ಮುಂದಿನ ಚಟುವಟಿಕೆಗೆ ದಾರಿದೀಪವಾದಂತಿವೆ ಹಿಂದಿನ ಕಾಲದಲ್ಲಿ ಕನಸುಗಳು ಜಾನಪದೀಯ ಅಂಶಗಳಲ್ಲಿ ಪ್ರಮುಖವಾಗಿದೆ ಬಸವ ಕವಿಯು ಕನಸುಗಳ ಮೂಲಕ ಆಚರಣೆ, ವೈವಿಧ್ಯ, ವೈಭವ ಆಗಮನ ಮುಂತಾದವುಗಳ ಕುರಿತು ಹೇಳಿರುವುದು ನಿಜಕ್ಕೂ ಆಚರ್ಯವನ್ನುಂಟು ಮಾಡುತ್ತದೆ.

“ಮುತ್ಥಳಿಯ ಬಂಗಾರ ಪತ್ತಾರನಗ್ನಿಯೊಳು
ಬಿತ್ತರದಿ ಕಾಸುವನು ಮತ್ತೊತ್ತಿ ಬಡಿಯುವನು
ಮತ್ತಿರದೆ ಮಳೆಯೊತ್ತಿ ಸುತ್ತರಿಸಿ ನೋಡುವನು ಮತ್ತಾಗಿ ನೆರನಂಬಂತೆ
ಕತ್ತರಿಸಿ ಕಡಿಕೆಂಡ ಮಾಡಿ ಬಿತ್ತರಿಸುತ್ತೆ
ಚಿತ್ರಕ್ಕೆ ಸರಿಬರಲು ನಿತ್ಯನಂಬುವನದಕಿ
ಉತ್ತಮರು ಅದರಂತೆ ಸತ್ಯಭಕ್ತರ ಮನವನೊತ್ತಿನೋಳ್ವರು ಭೂವರ”೯

ಜಾನಪದ ಅಂಶಗಳಲ್ಲಿ ಪುತ್ಥಳಿ ಹಾರ ಒಂದು ಮಹಿಳೆಯು ಧರಿಸುವ ಶ್ರೇಷ್ಠ ಆಭರಣವಾಗಿದೆ. ಇವುಗಳ ತಯಾರಕ ಪತ್ತಾರ ಪತ್ತಾರಿಕೆಯು ಜಾನಪದ ವೃತ್ತಿಯಾಗಿದೆ. ಈತನು ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಚಿಕ್ಕಮಕ್ಕಳ ಆಭರಣಗಳನ್ನು ಶ್ರೇಷ್ಠತೆಯಿಂದ ಅವುಗಳ ಸೌಂದರ್ಯ ಕಣ್ಣಿಗೆ ಸವಿಯನ್ನುಂಟು ಮಾಡುವ ಹಾಗೆ ತಯಾರಿಸುತ್ತಾನೆ. ಪತ್ತಾರಿಕೆ ಜನಪದರು ಧರಿಸುವ ಆಭರಣಗಳ ತಯಾರಿಕೆ ಎನ್ನುವುದನ್ನು ಕವಿಯು ಆತನ ವೃತ್ತಿಯ ಮೂಲಕ ಜಾನಪದದ ಕಲೆಗಾರಿಕೆಯನ್ನು ಹೇಳಿರುವುದನ್ನು ಕಾಣುತ್ತೇವೆ.

“ವಾರಶಿಲಿರಂಜನೆಯು ವರ ಮರೀಚಿಯ ನಿಲವು
ಸಾರ ಸುರಚಾಪದಾಕಾರ ಖುಲ್ಲರ ಸ್ನೇಹ
ಭೂರಿ ಸ್ವಪ್ನದಿ ಕೆಂಡ ಸಿರಿ ಹುಲ್ಲಿನುರಿ ಭರದಿ ಬರುತಿರ್ಪಹಳ್ಳ ಭರವು
ವಾರಿಜಾಕ್ಷಿಯರ ಸವಿನೋಟ ಸಮ್ಮೋಹನವು
ದಾರುಣಿಶರ ಭಕ್ತಿ ನಿಜವಲ್ಲವೆಂದು ನೆರೆ
ಸಾರುತಿಹ ನೀತಿಯುಂಟಾಗಿರಲು ಜಂಗಮವು ಸನುಮತಿಸದ್ಯೆ ಭೂವರ”೧೦

ಬಸವ ಕವಿಯು ಈ ಪದ್ಯದಲ್ಲಿ ಜಾನಪದೀಯ ಅಂಶಗಳನ್ನು ಸೊಗಸಾಗಿ ಚಿತ್ರಿಸಿದ್ದಾನೆ. ವಾರಶಿಲಿ ರಂಜನೆ, ಮರೀಚಿಯ ನಿಲವು ಸುರಚಾಪದಾಕಾರ ಸ್ವಪ್ನದಲ್ಲಿ ಕಂಡಸಿರಿ, ಹುಲ್ಲಿನುರಿ ಭರದಿಂದ ಬರುತ್ತಿರುವ ಹಳ್ಳ, ಧಾರಣೀಶ ಭಕ್ತಿ ನಿಜವಲ್ಲವೆಂದು ಇಲ್ಲಿ ನಮ್ಮ ಸಂಸ್ಕೃತಿಯಲ್ಲಿ ಶ್ರೀಮಂತಿಕೆ, ಹುಲ್ಲಿನುರಿ, ಹಳ್ಳ ನಂಬಿಕೆ, ಸಂಪ್ರದಾಯ, ರೂಢಿ ಮುಂತಾದವುಗಳ ಕುರಿತು ಮಾಹಿತಿಯನ್ನು ಒದಗಿಸುತ್ತಿದೆ.

“ಪಶುಗಳಂ ಪಾಲಿಸುವ ಕಾಂತಾರದೊಳಗೆನ್ನ
ಹಸುಳನೆಂದಿನಿಸುತಿಹ ಧೊಳಿಪುಹಕಾಳನುರೆ

ಹಸಿವನೆಂದೆನುತಾಗ ಮಾತೆ ಸುಗ್ಗಲದೇವಿ ಮನದೊಳಗೆ ಭಾವಿಸುತಲಿ
ಅಸಮ ಸಂತಸದಿಂದೆ ವರದಿನಂಪ್ರತಿಯಲ್ಲಿ
ಮೊಸರು ಶಾಲ್ಯೋದನ ಪದಂಕುಶ ಪಲಾಂಡುಗಳ
ಮಿಸುಪ ಬುತ್ತಿಯ ಕಟ್ಟಿಕೊಡುತಿರಲಿ ಬಳಿಕೊಂದು ಪಾಸರದಿ ತಬ್ಯಾಲನು"[೧೧]

"ಸಂದೇಹಮೀಲ್ಲಿದಕೆ ಕಟ್ಟೋಗರದ ಬುತ್ತಿ
ಚೆಂದದಿಂ ನೀಡಿ ತಣಿಸಿಂದೆಂಬ ನುಡಿದಾಗ ಮನಮೆಚ್ಚಿ ನಮಿಸುತಲಿ"[೧೨]
"ತನುಜಾತನಾಸ್ಯಾಬ್ಜಮಂ ನೋಡಿ ಹಿಗ್ಗುತ
ವಿನಯದಿಂದ ಷಡ್ರಸಪದಾರ್ಥಗಳನನುಗೊಳಿಸಿ ಬುತ್ತಿಯಿಂ ಕೊಡಲಾಗಳು"[೧೩]

ಜನಪದರು ಪರಂಪಾರಿಕವಾಗಿ ಬುತ್ತಿಯನ್ನು ಕಟ್ಟುವ ಪದ್ಧತಿಯನ್ನು ರೂಢಿಸಿಕೊಂಡಿರುವುದನ್ನು ಕಾಣುತ್ತೇವೆ. ಈಗಲೂ ಕೂಡಾ ಪ್ರವಾಸ, ಕೆಲಸಕ್ಕೆ ಬೇರೂರಿಗೆ, ಸಂಬಂಧಿಗಳ ಮನೆಗೆ ಹೋಗಬೇಕಾದರೆ ಬುತ್ತಿಯನ್ನು ಕಟ್ಟಿಕೊಂಡು ಹೋಗುವ ಪದ್ಧತಿ ಈಗಲೂ ರೂಢಿಯಲ್ಲಿರುವುದನ್ನು ಕವಿಯು ತಿಳಿಸಿರುವಂತಿದೆ.

ಕವಿಯು ಮೊಸರು, ಶಾಲ್ಯೋದನ, ಪದಂಕುಶ ಪಲಾಂಡ್ಯಗಳಿಂದ ಕೂಡಿರುವುದನ್ನು ಕಟ್ಟೋಗರದ ಬುತ್ತಿ ಷಡ್ರಸ ಪದಾರ್ಥಗಳ ನನುಗೊಳಿಸಿ ಅಂದರೆ, ಸಿಹಿ, ಹುಳಿ, ಉಪ್ಪು, ಕಾರ, ಒಗರು, ಕಹಿ 'ಬುತ್ತಿಯ' ಎಂಬ ಮನವರಿಕೆಯನ್ನು ಮಾಡಿಕೊಟ್ಟು ಜನಪದರಲ್ಲಿ ವಿವಿಧ ಪದಾರ್ಥಗಳಿಂದ ಕೂಡಿರುವ ವಿವಿಧ ರೀತಿಯ ಬುತ್ತಿಗಳ ಕುರಿತು ಹೇಳಿರುವರು. ಅದರ ಸವಿಯನ್ನು ಜನಪದರಿಗೆ ಹೇಳಿರುವನು.

೭.೫ ಆಹಾರ ಪದಾರ್ಥಗಳು :

"ಪರಮಾನ್ನ ಪಾಯಸವು, ಪರಿಡಿಮೋದಕ ಗುಳಿಗೆ,
ಕರಿಗೆಡಬು, ವಡೆಗಾರಿಗೆಯು, ಗುಳ್ಳುಪಪ್ಪಡಿಯು,
ವರ ಪೋಳಿಗೆಯು, ಸೂಪಶಾಲ್ಯೋದನಂ ಭೋಜ್ಯ ಭಕ್ಷ್ಯಂಗಳು ಪದಂಶಕಂ
ಪರಿಪರಿಯ ಶಾಕಪಾಕಾದಿಗಳು ಕಂಪಿಸುವ
ಸರಸ ಷಡ್ರಸದಿಂದೆ ಸವೆದ ನವ್ಯ ಪದಾರ್ಥ
ದಿರವಿನಿಂ ಗೃತಮುಖ್ಯ ನವ್ಯಸಾರಂಗಳಂ ನಿರ್ಮಿಸಿದರಾಕ್ಷಣಗಳು"[೧೪]

ಬಸವಕವಿ ರಚಿಸಿದ "ಮಹಾಲಿಂಗಲೀಲೆ"ಯಲ್ಲಿ ಬರುವ ಆಹಾರ ಪದಾರ್ಥಗಳ ಹೆಸರು ಕೇಳಿದರೆ ಬಾಯಲ್ಲಿ ನೀರೂರುತ್ತವೆ. ಕನ್ನಡಿಗರ ಆಹಾರದ ರುಚಿಯೇ ಅಂತಹದು ಎಂಬುದು ತಿಳಿಯುತ್ತದೆ.

ಪರಮಾನ್ನ ಅಡಿಗೆಯಲ್ಲಿ ಶ್ರೇಷ್ಠವಾಗಿರುವಂತಹದ್ದು. ಅನ್ನವನ್ನು ವಿವಿಧ ತರಕಾರಿ, ಮನುಕ, ಗೋಡಂಬಿಯ ಮಿಶ್ರಿತದಿಂದ ಮಾಡಿದ್ದು ಎಂಬುದು ನಮಗೆ ಗೊತ್ತಾಗುತ್ತದೆ. ಪಾಯಸವು ಗೋಧಿಯ ನುಚ್ಚಿನಿಂದ ಅಥವಾ ಸಾವಿಗೆಯಿಂದ ಮಾಡಿದ್ದು, ಇದೊಂದು ಸಿಹಿ ಪದಾರ್ಥವಾಗಿದೆ. ಇದರಲ್ಲಿ ವಿವಿಧತರಹದ ಕಸಕಸೆ, ಕೊಬ್ಬರೆ, ಮನುಕ, ಗೋಡಂಬಿಯಿಂದ ಕುದಿಸಿ ಶೃಂಗರಿಸಿ ತಯಾರಿಸುತ್ತಿದ್ದರು ಎಂಬುದನ್ನು ಹೇಳಿರುವನು. ಪರಡಿ ಮೊದಕಗುಳಿಗೆ ಇದೂ ಕೂಡ ಒಂದು ಸಿಹಿ ಪದಾರ್ಥವಾಗಿದೆ.

ಕರಿಗಡಬು ಇದನ್ನು ವಿಶೇಷ ಸಂದರ್ಭಗಳಲ್ಲಿ ಮಾಡಿತ್ತಿರುವುದನ್ನು ನಾವು ಕಾಣುತ್ತೇವೆ. ಇದೂ ಕೂಡಾ ಗೋಧಿಯ ಹಿಟ್ಟಿನಂದ ತಯಾರಿಸಿ ಅದರಲ್ಲಿ ಬೆಲ್ಲ, ಕಡ್ಲಿಹಿಟ್ಟು ತುಂಬಿ ವಿವಿಧ ಮಸಾಲಿಯ ವಸ್ತುಗಳಿಂದ ಶೃಂಗರಿಸಿ ಕೈಯಿಂದಲೂ ಅಥವಾ ಕಡಬುಗಳನ್ನು ಮಾಡಲು ತಯಾರಿಸಿದ ಮನಿಗಳಿಂದಲೂ ತಯಾರಿಸಿ ಅವನ್ನು ಎಣ್ಣೆಯಲ್ಲಿ ಕುದುಸಿದಾಗ ಅದರ ರುಚಿ ಹೇಳತೀರದು. ಆಗ ಕರಿಗಡಬನ್ನು ತಯಾರಿ ಮಾಡುತ್ತಿದ್ದರು ಎನ್ನುವುದನ್ನು ಕವಿಯು ತಿಳಿಸುತ್ತಾನೆ.

ವಡೆ, ಗಾರಿಗೆಗಳು ಕೂಡ ಭೋಜನಕ್ಕೆ ಮೆರಗನ್ನು ನೀಡಿ ಆಹಾರವನ್ನು ಪ್ರಮುಖವಾಗಿದ್ದವು ಎಂಬುದನ್ನು ತಿಳಿದುಕೊಳ್ಳುತ್ತೇವೆ. ಊಟದ ಜೊತೆಗೆ ಪಪ್ಪಡಿ, ಹಪ್ಪಳ, ಸ್ಯಾಂಡಿಗೆಗಳಂತ ವಸ್ತುಗಳನ್ನು ಉಪಯೋಗಿಸುವುದು ಊಟದ ವ್ಯವಸ್ಥೆಯು ಬಹಳಷ್ಟು ವ್ಯವಸ್ಥೆಗಳಿಂದ ಕೂಡಿತ್ತು ಎಂಬುದು ತಿಳಿಯುತ್ತೇವೆ.

ಹಬ್ಬ ಹರಿದಿನಗಳಲ್ಲಿ ಅಮವಾಸ್ಯೆ ಮತ್ತು ಹುಣ್ಣಿಮೆಯ ದಿನಗಳಲ್ಲಿ ಮಾಡುವ ಹೋಳಿಗೆಯು ಪ್ರಚಲಿತದಲ್ಲಿತ್ತು. ಇದೊಂದು ಪ್ರಮುಖ ಸಿಹಿಯಾದ ಆಹಾರವಾಗಿತ್ತು ಎಂಬುದನ್ನು ಕವಿಗಳು ತಿಳಿಸುತ್ತಾರೆ.

ಈ ರೀತಿಯಾಗಿ ಸೂಪಶಾಲ್ಯೋನ್ಯದ ಭೋಜ್ಯ ಭಕ್ಷ್ಯಂಗಳು ಬೇರೆ-ಬೇರೆ ವಿಧದ ಶಾಕಪಾಕದಿಗಳು , ಷಡ್ರಸದಿಂದ ಕೂಡಿದ ನವ್ಯ ಪದಾರ್ಥಗಳು ಬಾಯಿಗೆ ಮುದವನ್ನಿಡುವ ಉಪ್ಪು, ಹುಳಿ, ಕಹಿ, ಸಿಹಿ, ವಗರು, ಕಾರಗಳ ಒಟ್ಟುಗೂಡಿಸಿದ ಪದಾರ್ಥಗಳು ವಿವಿಧ

ರೀತಿಯ ಒಂಬತ್ತು ತರಹದ ಸಾರವನ್ನು ಮಾಡಿರುವುದು ಭೋಜನಕ್ಕೆ ಮಹತ್ವ ಮತ್ತು ಇಲ್ಲಿ ಆಹಾರ ಪದಾರ್ಥಗಳ ಮಹತ್ವವನ್ನು ಕವಿಯು ಸಾರಿ ಹೇಳಿರುವಂತಿದೆ. ಹೀಗೆ ಪ್ರಾಚೀನ ಕಾಲದ ವಿವಿಧ ಆಹಾರ ಪದಾರ್ಥಗಳು ಹಿಂದೆಯೂ ಶ್ರೇಷ್ಠತೆಯನ್ನು ಪಡೆದುಕೊಂಡು ಪರಂಪರಾಗತ ಮಹತ್ವ ಪಡೆದುಕೊಂಡು ಈಗಲೂ ಪ್ರಚಲಿತದಲ್ಲಿರುವ ಅವುಗಳನ್ನೇ ಮುಂದುವರೆಸಿರುವುದು. ಆಹಾರ ಪದಾರ್ಥಗಳ ಶ್ರೇಷ್ಠತೆ ರುಚಿಯೇ ಕಾರಣವಾಗಿದೆ.

"ಈರಾರು ಸಾಸಿರಂ ಕೆಣೆಮೊಸರು ನೇಮದರ್
ಈರಾರು ಸಾಸಿರಂ ಸಕ್ಕರೆಯ ನೇಮದರ್
ಈರಾರು ಸಾಸಿರಂ ಒಡೆಗಾರಿಗೆಯ ನೇಮದವರು ಮತ್ತೆಂಬಗೆವೊಡೆ
ಈರಾರು ಸಾಸಿರಂ ಮೋದಕದ ನೇಮದರ್
ಈರಾರು ಸಾಸಿರಂ ಕೆಂಗಡಬು ನೇಮದರ್
ಈರಾರು ಸಾಸಿರಂ ಪರಮಾನ್ನ ಪಾಯಸದ ನೇಮದವರೆಸಿದಿರ್ದರು"[೧೫]

"ಪನ್ನೆರಡು ಸಾಸಿರಂ ನೊರೆವಾಲು ನೇಮದರ್
ಪನ್ನೆರಡು ಸಾಸಿರಂ ಕೆನೆವಾಲು ನೇಮದರ್
ಪನ್ನೆರಡು ಸಾಸಿರದ ಹೂಬೆಣ್ಣೆ ನೇಮದರ್ಪಂಚಾಮೃತದ ನೇಮದ
ಪನ್ನೆರಡು ಸಾಸಿರಂ ಕಟ್ಟು ಮೊದರುಂಬುವರ್
ಪನ್ನೆರಡು ಸಾಸಿರಂ ತಿಳಿದುಪ್ಪ ನೇಮದರ್
ಪನ್ನೆರಡು ಸಾಸಿರಂ ಗಟ್ಟಿತುಪ್ಪದ ಮೇಮದವರೊಪ್ಪಿ ನೆಲಸಿರ್ದರು"[೧೬]

ಕವಿಯು ನೊರೆವಾಲ್, ಕೆನೆವಾಲ್, ಹೂಬೆಣ್ಣೆ, ಕಟ್ಟು ಮೊಸರು, ತಿಳಿದುಪ್ಪ, ಗಟ್ಟಿ ತುಪ್ಪ, ಕೆನೆ ಮೊಸರು ಮುಂತಾದ ದ್ರವ್ಯ ಆಹಾರ ಪದಾರ್ಥಗಳ ವೈಚಿತ್ರ್ಯವನ್ನು ತಿಳಿಸಿರುವನು. ಆಹಾರ ಪದಾರ್ಥಗಳನ್ನು ತಿಳಿಯುವುದರಗೋಸ್ಕರ ಎಲ್ಲಾ ವಸ್ತುಗಳು ಗೋವಿನಿಂದ ದೊರೆಯುತ್ತವೆ.

ಇವೆಲ್ಲವೂ ಒಂದೆ ಪ್ರಾಣಿಯಿಂದ ದೊರೆಯುವ ಪದಾರ್ಥಗಳು ಇವುಗಳನ್ನು ಕವಿಯು ನೊರೆವಾಲ್ ಹಾಲನ್ನು ಕರೆದ ತಕ್ಷಣದ ಹಾಲನ್ನು ಕಾಯಿಸಿದಾಗ ಕೆನೆಬರುವುದು. ಕಾಯಿಸಿದ ಹಾಲು, ಆ ಕೆನೆಯನ್ನು ಕಡೆದಾಗ ಹೂವಿನಂತೆ ಬರುವುದೇ ಬೆಣ್ಣೆ. ಹೂಬೆಣ್ಣೆ,

ಆ ಬೆಣ್ಣೆಯನ್ನು ಕಾಯಿಸಿದಾಗ ತಿಳಿದುಪ್ಪವಾಗುವುದು. ನಂತರ ಗಟ್ಟಿ ತುಪ್ಪದ ಕುರಿತು ಬಹಳಷ್ಟು ಸೊಗಸಾಗಿ ವರ್ಣಿಸಿದ್ದಾನೆ. ಹಾಲವೇ ಮುಖ್ಯ ನಮ್ಮ ಜಾನಪದೀಯ ಸಂಸ್ಕೃತಿಯಲ್ಲಿ ಬಹಳಷ್ಟು ಮಹತ್ವವನ್ನು ಪಡೆದುಕೊಂಡಿವೆ ಬಸವ ಕವಿಯು ಹೇಳಿದ್ದು ಹೀಗೆ.

"ತರಳನೀನಿರ್ದಲ್ಲಿ ಕ್ಷೀರದಧಿಸರ್ಪಿಗಳ
ಶರಧಿಗಳ ನೆಲಸಿರಲಿ ಪಾಯಸದ ಪೋಳಿಗೆಯ
ಗಿರಿಗಳಿರುತಿರಲಿ ಸಕ್ಕರೆಯ ಸಂಡಿಗೆಯ ವರ ಹಪ್ಪಳುಪ್ಪಿನಕಾಯಿಯ
ಸರಸ ಬೆಟ್ಟಗಳು ಗಟ್ಟ್ಯಾಗಿರಲಿ ಸಂತತಂ
ವರ ಬಾಂಧವರ ಕೂಡಿ ಭೋಜನಂಗೈದು ಸುಖ
ದಿರುಯೆಂದು ಪರಸುತ್ತೆ ಪರಮ ಸಂತೋಷದಿಂ ಪರಮೇಶನಿಂತೆಂದನು"೧೭

ಇಲ್ಲಿ ಕವಿಯು ಉಪಮನ್ಯುವಿನ ಕುರಿತು ಹೇಳುವಾಗ ನೀನಿದ್ದಲ್ಲಿ ಹಾಲಿನ ನದಿಗಳು, ಪಾಯಸದ ಹೋಳಿಗೆಯು, ಸಕ್ಕರೆಯ ಸಂಡಿಗೆಯ, ಹಪ್ಪಳ ಉಪ್ಪಿನಕಾಯಿಗಳನ್ನು ಹೆಸರಿಸಿರುವುದು ಊಟದಲ್ಲಿ ಪ್ರಮುಖ ಆಹಾರ ಪದಾರ್ಥಗಳಾಗಿದ್ದವು ಎನ್ನುವುದು ತಿಳಿಯುತ್ತದೆ.

ಮೇಲಿಂದ ಮೇಲೆ ಕವಿಯು ಸಕ್ಕರೆಯನ್ನು ತಿಳಿಸಿರುವುದು ಆತನು ಸಕ್ಕರೆಯ ನಾಡಿನಲ್ಲಿ ಬದುಕಿದ್ದುಮ ಜೊತೆಗೆ ತನ್ನ ಪರಿಸರವು ಕಬ್ಬಿನಿಂದ ಫಲವತ್ತಾಗಿರುವುದು ತಿಳಿಯುತ್ತದೆ. ಇದೇ ಪ್ರದೇಶದಲ್ಲಿದ್ದುದರಿಂದ ಆತನ ಪ್ರದೇಶದ ವೈಭವತೆಯನ್ನು ತಿಳಿಸಿರುವನು. ಇಲ್ಲಿ ಫಲವತ್ತತೆಯಿಂದ ಕೂಡಿದ ಭೂಮಿ ಜೊತೆಗೆ ಕೃಷ್ಣಾ, ಘಟಪ್ರಭಾ, ಮಲಪ್ರಭಾ ನದಿಗಳನ್ನು ಪರೋಕ್ಷವಾಗಿ ನೆಲಸಿರುವುದರ ಕುರಿತು ಹೇಳಿದ್ದಾನೆ.

ಜೀವನಾಧಾರ

"ಒಂದು ದಿನ ಮೋಳಿಗೆಯ ಮಾರಯ್ಯನಂಬಲಿಯ
ಚೆಂದದಿಂ ಸವಿದಮರರಾಯಂಗೆ ದುರ್ಲಭಮಿ
ದೆಂದನುತ ಶಿವಲಿಂಗ ಮಾವಳಿಯ ಮನವೊಳಿದು ಕೊಂಡಾಡುತಾಕ್ಷಣದಲಿ
ಬಂದಸಮ ಭಕ್ತವರ ಬಸವಣ್ಣಾಯಕರ
ಮುಂದೆ ಪೇಳುತ್ತಿರಲು ಕೇಳ್ದು ಮಿಡುಕುತ್ತೆ ಮುದ

ದಿಂದ ಕಡುಬಡತನದೊಳಾದೊಡಂ ನಿಜ ನೇಮಬಿಡರೆಂದು ಮೃಡಭಕ್ತರು"[೧೮]

"ಆತನರ್ಧಾಂಗಿಯಂ ಕರೆಯುತಲೆ ತಾಯೆ ನೀ
ನೋತು ಸಕ್ಕಾಯಕದಿ ಸವೆದಂಬಲಿಯನು ಸಂ
ಪ್ರೀತಿಯೊಂದೆಡೆ ಮೊಳ್ಪುದೆಂದೆನಲು ಮುದವೆತ್ತು ಭಯಭಕ್ತಿಯಿಂ ಪ್ರಮಥರ
ನಾಥನಿಗಿಂತ ವನರಿಯದೆ ಗಡಣಿಸಲು ಬಸವ
ನಾತುರದಿ ಸವಿಸವಿದು ಶಿವಶಿವ ಮಹಾದೇವ
ಜಾತನಾಗಿರ್ದಂದು ಮೊದಲಾಗಿ ನಾನರಿಯೆನೀಯಂಬಕರಳಸವಿಯನು"[೧೯]

ಇಲ್ಲಿ ಕವಿ ಮೊಳಿಗೆಯ ಮಾರಯ್ಯನ ಭಕ್ತಿಯ ಮೂಲಕ ಬಡತನವಿದ್ದರೂ ತಮ್ಮ ನಿಜನೇಮವನ್ನು ಬಿಡುವುದಿಲ್ಲ ಎನ್ನುತ್ತ ಬಡವರ ಪಂಚಮೃತವಾದ ಅಂಬಲಿಯ ಕುರಿತು ಅದರ ಶ್ರೇಷ್ಠತೆಯ ಕುರಿತು ಹೇಳಿದ್ದಾನೆ.

"ಶರಣರ ಪ್ರಮುಖ ಆಹಾರ ಪದಾರ್ಥ 'ಅಂಬಲಿ'. ಅಂಬಲಿಯನ್ನು ಕುಟ್ಟಿದ ಜೋಳದ ನುಚ್ಚು, ಹುರುಳಿ ಹಿಟ್ಟು ಮುಂತಾದ ವಸ್ತುಗಳಿಂದ ತಯಾರಿಸುತ್ತಾರೆ. ಬಸವಕವಿಯು ಇಲ್ಲಿ 'ಅಂಬಲಿ' ಎಂದಷ್ಟೇ ಹೇಳುತ್ತಾನೆ. ಯಾವುದರಿಂದ ಮಾಡಿದ್ದು ಹೇಳುವುದಿಲ್ಲ. ಇಲ್ಲಿ ಮೋಳಿಗೆಯ ಮಾರಯ್ಯನ ಮನೆಯ ಅಂಬಲಿಯು ಕುಟ್ಟಿದ ಜೋಳದ ಹಿಟ್ಟಿಗೆ ನೀರು, ಹುಳಿ ಸೇರಿಸಿ ಮಾಡಿದ ಅಂಬಲಿಯೆ ಇರಬಹುದೆಂದು ಊಹಿಸಬಹುದಾಗಿದೆ.

ಹುಳಿನುಚ್ಚು, ಹುಳಿ ಅಂಬಲಿ ಬೇರೆಬೇರೆಯಾಗಿವೆ. ಕುಟ್ಟಿದ ಜೋಳದ ಹಿಟ್ಟಿಗೆ ನೀರು ಹುಳಿಹಾಕಿ ಒಂದು ದಿನ ಇಟ್ಟು ಬೇಯಿಸಿದರೆ ಸಾಕು ಅಂಬಲಿ ತಯಾರಾಗುತ್ತದೆ. ಅದಕ್ಕೊಂದು ವಿಶೇಷ ರುಚಿಯೂ ಇರುತ್ತದೆ. ಸ್ವತಃ ಶಿವನಗೆ ಅದಕ್ಕೆ ಸಮನಾದ ರುಚಿಯುಳ್ಳ ವಸ್ತುವನ್ನು ಹೆಸರಿಸುವುದು ಸಾಧ್ಯವಾಗಲಿಲ್ಲವೆಂದಾಗ ಹರಿಹರನಗೆ ಅದರ ರುಚಿಯ ಅನುಭವವಿರುವುದು ಸ್ಪಷ್ಟ. ಹಾಗೆಯೇ ಬಸವಕವಿಗೂ ಅಂಬಲಿಯ ರುಚಿಯೂ ಗೊತ್ತು. ಅಂದಿನ ಕಾಲದಲ್ಲಿ ಕಡುಬಡವರ ಆಹಾರ ಪದಾರ್ಥವಾಗಿದೆ.

ಬಸವಕವಿಯು ವಿರಚಿತ 'ಮಹಾಲಿಂಗಲೀಲೆ'ಯಲ್ಲಿ ಮೋಳಿಗೆಯ ಮಾರಯ್ಯನು ಅಂಬಲಿಯನ್ನು ತಯಾರಿಸಿರುವುದು ಅಂಬಲಿಯ ಕುರಿತು ಹೇಳುವುದನ್ನು ನೋಡಿದರೆ ಆ ಕಾಲಕ್ಕೆ ಅದು ಒಂದು ಸಂಸ್ಕೃತಿಯಲ್ಲಿ ಜನರಿಂದ ಹರಿದು ಬಂದಿರಬೇಕು.

ಕವಿಯು ಪ್ರಮುಖ ಆಹಾರ ಪದಾರ್ಥಗಳನ್ನು ಹಾಗೂ ಕನ್ನಡಿಗರ ಆಹಾರ ವೈವಿಧ್ಯತೆಯನ್ನು ವಿವರಿಸಿದ್ದಾನೆ. ಪರಮಾನ್ನ, ಪಾಯಸ, ಹಪ್ಪಳ, ಸ್ಯಾಂಡಿಗೆ, ಕರಿಗಡಬು, ಗಾರಿಗೆ, ವಡೆ, ಕೆನೆ ಮೊಸರು, ಬೆಣ್ಣೆ, ಕೆನೆ ಹಾಲು, ತುಪ್ಪ, ಉಪ್ಪಿನಕಾಯಿ, ಷಡ್ರಸಗಳಿಂದ ತಯಾರಾದ ನವ್ಯ ಸಾಂಬರ ಇತ್ಯಾದಿ ಆಹಾರ ಪದಾರ್ಥಗಳನ್ನು ಹೆಸರಿಸಿದ್ದಾನೆ. ಕನ್ನಡಿಗರ ಆಹಾರ ವೈವಿದ್ಯತೆಯನ್ನು ಹಲವು ಸಂದಿಗಳಲ್ಲಿ ಹೇಳಿದ್ದಾನೆ. ತನ್ನ ಸಮಾಕಾಲಿನ ಸಮಾಜದಲ್ಲಿರುವ ಆಹಾರ ಪದಾರ್ಥಗಳನ್ನು ದಾಖಲಿಸಿದ್ದಾನೆ.

"ರಾಮಖ್ಯಲಿಂಗಕ್ಕೆ ಚನ್ನಗಿರಿಪತಿಯೆಂದು
ನಾಮಕರಣಂಗೈದನಗಜಾತೆ ಕೇಳೆಂದು
ಪ್ರೇಮದಿಂದಾ ಲಿಂಗ ನಡೆಗೊಂಡು ಬಂದುದಕೆ ಪಿಂದಲೆಯು ನೆಗ್ಗೆರ್ಪುದು
ಭೂಮಿಯೋಳ್ ಕೌತುಕವಲಾಯೆಂದು ಶಿವಭಕ್ತಿ
ಸ್ತೋಮವದು ಕಂಡು ಕೊಂಡಾಡುತ್ತೆ ಶಾಸ್ತ್ರಾಭಿ
ರಾಮನೆಂದೆನಿಪ ಬಸವಾಖ್ಯಪೌರಾಣಿಕನು ದೃಷ್ಟಾಂತ ಕಥೆ ಪೇಳ್ದಿನು"[೨೦]

ಕವಿಯು ಇಲ್ಲಿ ಜಾನಪದೀಯ ಅಂಶಗಳನ್ನು ವೈಭವಿಕರಿಸಿದಂತಿದೆ ಚನ್ನಗಿರಿಗೆ ಲಿಂಗವು ನಡೆದುಕೊಂಡು ಬಂದಿದುರಿಂದ ಲಿಂಗದ ಹಿಂದಲೆಯು ನೆಗ್ಗಿರುವದು ಭೂಮಿಯ ಮೇಲೆ ನಡೆದ ಒಂದು ವಿಶೇಷ ಘಟನೆಯಾಗಿದೆ. ಇಲ್ಲಿ ಲಿಂಗವು ನಡೆದುಕೊಂಡು ಬಂದಿರುವುದು ಅದರ ಹಿಂದೆಲೆಯು ನೆಗ್ಗಿರುವದು ಇವೆರಡು ಜಾನಪದೀಯ ಅಂಶಗಳಾಗಿವೆ ಲಿಂಗಗಳು ನಡೆದುಬರುವುದು ಅದಕ್ಕೊಸ್ಕರ ಹಿಂದೆಲೆ ನೆಗ್ಗಿರುವುದಕ್ಕೆ ಯಾವುದೇ ತರಹದ ಜೀವಂತ ಕುರುಹಗಳಿಲ್ಲದಿರುವದು ಮತ್ತು ದೃಷ್ಟಾಂತ ಕಥೆಯಾಗಿರುವುದು ಜಾನಪದ ಪ್ರಮುಖ ಅಂಶವಾಗಿದೆ ಎಂಬುದನ್ನು ನಿರೂಪಿಸಿದ್ದಾನೆ.

"ಸತ್ಯ ಚಿತ್ತಾನಂದ ಚಿನ್ಮಯನ ಧ್ಯಾನಗೊಳ
ಗತ್ತೆ ಸುಖದಿಂದಿರಲು ಭಾವಿಸುತೆ ಭಯದಿಂದೆ
ಮೃತ್ಯುಹರನತ್ತ ಭೂತಪಿಶಾಚಿಗಳನಟ್ಟಿ ಬಂದೊದರುತಿರಲಾಕ್ಷಣಂ"[೨೧]

ಕವಿಯು ಹಿಂದಿನಿಂದಲೂ ಭೂತ ಪಿಶಾಚಿಗಳಿರುವುದರ ಕೂರಿತು ಅವುಗಳಿಗೆ ಅಂಜುವದು ಮನುಷ್ಯನು ಅವುಗಳ ಕುರಿತು ನಂಬಿಕೆಯನ್ನಿಟ್ಟಿರುವಂತ ಜಾನಪದೀಯ ಅಂಶಗಳನ್ನು ಗುರುತಿಸುತ್ತಾನೆ.

೭.೬ ಪಟ್ಟಣದ ಶೃಂಗಾರ :

ಪರಂಪರವಾಗಿ ನಡೆದು ಬಂದಿರುವ ಅಂಶಗಳು ಕಾಣಬರುತ್ತವೆ. ಅಂದರೆ ಹಬ್ಬಹರಿದಿನಗಳಲ್ಲಿ ಜಾತ್ರೆ ಮಹೋತ್ಸಗಳಲ್ಲಿ ಧಾರ್ಮಿಕ ಕಾರ್ಯಗಳ ಸಂದರ್ಭಗಳ ಸಂದರ್ಭಗಳಲ್ಲಿ ಪಟ್ಟಣವನ್ನು ಹೊಳೆಯುವಂತೆ ಶೃಂಗರಿಸುವುದು ಕಂಡುಬರುತ್ತದೆ ರಾಜನ ಅಪ್ಪಣೆಯ ಮೂಲಕ ಸಾರಣೆ, ಕಾರಣೆ, ತೋರಣ, ಭಿತ್ತಿ ಚಿತ್ರಗಳು, ಪನ್ನೀರ ಚೆಳೆಯಗಳು ಅಂಗಳವನ್ನು ಸ್ವಚ್ಚಗೊಳಿಸಿ ನೀರಿನಿಂದ ತೊಳೆಯುವುದು ಮುಂತಾದವುಗಳಿಂದ ಜಾನಪದೀಯ ಅಂಶಗಳು ಕಂಡುಬರುತ್ತವೆ.

"ಕತ್ತುರಿಯ ಸಾರಣೆಯ ಕುಂಕುಮದ ಕಾರಣೆಯ
ಬಿತ್ತರದ ತೋರಣದ ಬೀದಿಗಳ ವಾರಣದ
ಚಿತ್ತರದ ಭಿತ್ತಿಗಳ ಪನ್ನೀರ ಚೆಳೆಯಗಳ ಪರಿರಮ್ಯವಾಗೊಪ್ಪುವ
ಇತ್ತರದ ಕನ್ನಡಿಯ ಮುತ್ತಿನ ಸುಕಳಸಗಳ
ಸುತ್ತಿಡಿದ ಫಲಭಾರಗಳ ಮೊತ್ತದಿಂದಿರದೆ
ಎತ್ತ ನೋಡಿದಡತ್ತ ಕಣ್ಗೆ ಮಂಗಳವಾದುದೇನೆಂಬನಾ ಪಟ್ಟಣಂ"[೨೨]

ನಮ್ಮ ಜನಪರ ಜೀವನದ ಬಹುಮುಖ್ಯವಾಗಿರುವ ಮತ್ತು ದೇವಸ್ಥಾನದ ಮೇಲೆ ಕಳಸಗಳನ್ನು ಕಂಗೊಳಿಸುವ ಹಾಗೆ ಇಟ್ಟಿರುತ್ತಾರೆ. ಹಾಗೆ ಅವುಗಳನ್ನು ಮುತ್ತಿನ ಮೂಲಕ ಶೃಂಗರಿಸಿರುವುದು ಜಾನಪದದಲ್ಲಿ ಪ್ರಮುಖ ಅಂಶಗಳಾರುವುದರ ಕುರಿತು ಕವಿಯು ಚಿತ್ರಿಸಿರುವನು.

೭.೭ ಬೈಗುಳಗಳು :

ಇಲ್ಲಿ ಬೈಗುಳಗಳು ಜಾನಪದೀಯ ಅಂಶಗಳಾಗಿ ಮೂಡಿಬಂದಿವೆ ಬೈಗುಳಗಳು ಸ್ತ್ರೀ, ಪುರುಷರಿಬ್ಬರ ಕುರಿತು ಇರುವದನ್ನು ಹಲವು ರೀತಿಯ ಬೈಗುಳಗಳು ವಿಶೇಷ ಸಂದರ್ಭದಲ್ಲಿ ಮೂಡಿಬಂದಿವೆ

"ಗಂಡನಿಲ್ಲದ ಬಾಲೆ ರಂಡಿತನದಿಂದಾನು"[೨೩]

"ಮುಂಡಭೂಪತಿಯಾನೆ ಶುಂಡಾಲಶುಂಡಿಲಕೆ
ಬ್ರಷ್ಟಗಜ ಶುಂಡಾಲದಿಂ ಪಿಡಿವುತಭ್ರಕಿಡ"[೨೪]

“ಕುಲಗೇಡಿ ಭೋಗಣ್ಣನಿವನ ಕೆಂಭಾವಿಪೊಳ
ಹೊತಿಯನೊಳಪೊಕ್ಕೆದೆಂದೆನುತ ಬೆಂಬಳಿವಿಡಿದು ಬಂದರಾಕ್ಷಣದಲ್ಲಿ”[೨೫]

ಚಂಡಾಲನೊಳಪೊಕ್ಕೆನೆ ಪಾಪಿಭೋಗಣ್ಣ”[೨೬]
“ಪಾಪಿಗಳು ಪುಡುಕುತ್ತ ಕಾಣದಾಕ್ಷದಲ್ಲಿ ಎಲೆ ಭೋಗಿ ನೀಚಾತ್ಮನೆ”[೨೭]
“ದಾಗಮದ ಪದ್ಧತಿಯ ಹ್ಯಾಗಿಗಳು ತಾವೆತ್ತ ಬಲ್ಲರೀ ಕುಲವಯದೊಳು”[೨೮]
“ತಿಳಿಯುತ್ತ ಜನರೆಲ್ಲ ಹುಟ್ಟುಬಂಜೆಯಿದೆಂದು”[೨೯]

ಬಸವ ಕವಿಯು ಹಿಂದನ ಕಾಲದಲ್ಲಿ ವಿವಿಧ ರೀತಿಯ ಬೈಗುಳಗಳನ್ನು ತನ್ನ ಕೃತಿಯ ಮೂಲಕ ತಿಳಿಸಿರುವುದನ್ನು ಗುರುತಿಸಿದ್ದೇನೆ. ಗಂಡನಿಲ್ಲದ ಮಹಿಳೆಯನ್ನು ಮದುವೆಯಾಗಿ, ತನ್ನ ಪತಿಯನ್ನು ಕಳೆದುಕೊಂಡ ಸ್ತ್ರೀಯನ್ನು ರಂಡೆಯೆಂದು ಕರೆಯುವರು. ಈಗಲೂ ಇದು ಪ್ರಚಲಿತದಲ್ಲಿದೆ.

‘ಪುಂಡ’ ಎಂಬ ಬೈಗುಳ ರಾಜನಿಗೆ ಸಂಬಂಧಿಸಿದ್ದು. ರಾಜ್ಯದಲ್ಲಿ ಎಲ್ಲರನ್ನೂ ಅಂಜಿಸಿ ಎಲ್ಲರೂ ತಾನು ಹೇಳಿದಹಾಗಿ ನಡೆದುಕೊಳ್ಳುವಂತೆ ಮಾಡಿ, ತಾನೆ ಹೇಳಿದ ನಿರ್ಣಯ ಸರಿ ಎಂದು ಮೆರೆಯುತ್ತಿರುವವರಿಗೆ ‘ಪುಂಡ’ ಎಂದು ಕರೆಯುತ್ತಾರೆ.

‘ಭ್ರಷ್ಟ’ ಎಂಬುದು ರಾಜ್ಯದಲ್ಲಿ, ಗ್ರಾಮದಲ್ಲಿ ಆತ ಹೇಳಿದ ಮಾತಿಗೆ ನಡೆಯದೆ ಮಾತನಾಡಿರುವುದೆಲ್ಲ ಸುಳ್ಳೇ ಆಗಿರುವುದನ್ನು. ಆಡಿದಂತೆ ನುಡಿಯದೆ ಇರುವವರನ್ನು ‘ಭ್ರಷ್ಟ’ ಎಂದು ಸಂಭೋದಿಸಿದಂತಿದೆ.

‘ಕುಲಗೇಡಿ’ ಎಂಬ ಬೈಗುಳ ತನ್ನ ಜಾತಿಗೆ ಸಂಬಂಧಿಸಿದುದಾಗಿದೆ. ವಿವಿಧ ಪೂಜಾ ಪ್ರಾರ್ಥನೆ ಸಮಯದಲ್ಲಿ ಹೇಯ ಕೆಲಸ ಮಾಡಿದವನನ್ನು ಕುಲಗೇಡಿ ಎಂದು ಕರೆದಂತಿದೆ.

‘ಹೊಲಸು’ ಕೆಲಸ ಮಾಡುವವನನ್ನು, ಹೊಲಸು ತಿನ್ನುವವನನ್ನು ಹೊಲೆಯ ಎಂದು ಕರೆದಿರುವನು.

‘ಚಂಡಾಲ’ ಎಂಬ ಬೈಗುಳವು ಹೇಯ ಕೃತ್ಯಗಳನ್ನು ಎಸಗುವವನಗೆ ಪಾಪದ ಕೆಲಸಗಳನ್ನು ಮಾಡುವಂತೆ ಇನ್ನೊಬ್ಬರಿಗೆ ಅಸಹ್ಯ ಮಾಡುವುದು, ಹೊಡೆ-ಬಡೆ ಮುಂತಾದ ಕೆಲಸಗಳಲ್ಲಿ ತೊಡಗಿದವನಗೆ ‘ಪಾಪಿ’ ಎಂದು ಜ್ಞಾನ ಕಡಿಮೆ ಇರುವವನಗೆ ಹೇಳಿದ

ವಿಷಯವನ್ನು ಸರಿಯಾಗಿ ಮನನಮಾಡಿಕೊಳ್ಳದ ವ್ಯಕ್ತಿಗೆ 'ಹ್ಯಾಗಿ' ಎಂದು ಕರೆಯುವುದುಂಟು.

'ಬಂಜೆ' ಎಂಬ ಬೈಗುಳ ಸ್ತ್ರೀಯ ಕೇಂದ್ರೀಕೃತವಾದುದ್ದು. ಇದು ಮಹಿಳೆಗೆ ಮಕ್ಕಳಿಲ್ಲದ ಸಂದರ್ಭವನ್ನು ಕಂಡು ಮಕ್ಕಳೇಯಿಲ್ಲ ಎಂದು 'ಬಂಜೆ' ಎಂದು ಕರೆಯುವುದುಂಟು. ಇಂತಹ ಮಹಿಳೆಗೆ ಸಮಾಜದಲ್ಲಿ ಯಾವುದೇ ರೀತಿಯ ಸ್ಥಾನ-ಮಾನಗಳಿಲ್ಲದಿರುವುದನ್ನು ಕಂಡು ಅಂತವರನ್ನು 'ಬಂಜೆ' ಎಂದು ಕರೆಯಲಾಗಿದೆ ಎನ್ನಬಹುದು.

ಹೀಗೆ ಬಸವಕವಿಯು ತನ್ನ ಕೃತಿಯಲ್ಲಿ ಹತ್ತು ಹಲವಾರು ಬೈಗುಳಗಳನ್ನು ತಿಳಿಯಪಡಿಸುವುದರ ಮೂಲಕ ಬೈಗುಳಗಳು ಜಾನಪದೀಯದಲ್ಲಿ ನಮ್ಮ ಸಂಸ್ಕೃತಿಯನ್ನು ಬಿಂಬಿಸುತ್ತವೆ ಎಂದು ನಿರೂಪಿಸಿದಂತಿದೆ.

೭.೮ ಅಳತೆ ಮಾನದಂಡಗಳು :

ಜನಪದರು ತಮ್ಮ ನಿತ್ಯ ಬದುಕಿನ ವ್ಯವಹಾರ ಮುಖಕ್ಕೆ ಅನೇಕ ಬಗೆಯ ಅಳತೆಯ ಮಾಪನಗಳನ್ನು ಮಾಡಿಕೊಂಡಿದ್ದಾರೆ. ಕಾಳು-ಕಡಿ ಅಳೆದುಕೊಡಲು ಕಿರಾಣಿ ವ್ಯಾಪಾರ ಮಾಡಲು, ಬಂಗಾರ-ಬೆಳ್ಳಿ ತೂಗಿಕೊಡಲು, ಭೂಮಿ-ಸೀಮೆ ಅಳೆಯಲು ಎಲ್ಲದಕ್ಕೂ ನಿರ್ದಿಷ್ಟ ಅಳತೆಯ ಗೋಲುಗಳಿವೆ. ಬಹುಕಾಲದಿಂದಲೂ ತಮ್ಮ ಬದುಕಿನಲ್ಲಿ ಇಂತಹ ಮಾನ ದಂಡಗಳನ್ನು ಜಾನಪದರು ಉಳಿಸಿಕೊಂಡು ಬಂದಿದ್ದಾರೆ.

"ನಂಬಿ ಪೂಜಿಸಿ ನಿತ್ಯ ಪಡಿಹೊನ್ನುಗಳ ಪಡೆದು ಶಂಬರಾರಿಯ ತಾಪದಿರಿ"[೩೦]
"ಚಿತ್ತಕ್ಕೆ ನಲವಿತ್ತದಿನ್ನಾವ ಕಬ್ಬಿಗರು ಬಿತ್ತರಿಪರೆಲಿ ಪಾರ್ವತಿ"[೩೧]
"ಒಂದು ದಿನದೊಳು ಬಂದವರುವತ್ತು ಗ್ರಾಮದದವನೀನೆಂದು ಬನ್ನಿಸುವೆನು"[೩೨]
"ಒಲೈಸುತೆಡಬಲದಿ ಭೋಗಿಪತಿ ಬಳಿವಿಡಿದು ಬರಲೊಂದು ಗಾವುದದಲಿ
ಬೇಲೂರು ಎಂದೆಂಬ ಗ್ರಾಮ ಕಂಗೊಳಿಸಲೈ"[೩೩]

"ನಂದಿಯುಂಡಿಗೆಯ ಪಡಿಹೊನ್ನುಗಳನಿತ್ತಾಗ"[೩೪]
"ಮಂದಿರವ ಮುನ್ನಿರ್ದ ತೆರದಿಂದೆ ನಿರ್ಮಿಸುತ ಪಡಿಯಕ್ಕಿಗಳ ತರಿಸುತ"[೩೫]

ಜನಪದರು ಕಾಳುಕಡಿ ಅಳೆಯಲು ಬೇರೆಬೇರೆ ಮಾಪನಗಳಿವೆ. ಇಲ್ಲಿ ಕೊಳವೆ ಕನಿಷ್ಠ ಮಾಪನವಾಗಿ ತೋರುತ್ತದೆ. (೧) ಕೊಳವೆ = ಗಿರಪಾವ್, (೨) ಕೊಳವೆ =

ಅರಪಾವ್, (೩) ಕೊಳವೆ = ಒಂದು ಸೇರು. ಸೇರಿನ ತೆರುವಾಯ ಅಳತೆಗೆ ಗಿದ್ನ, ಅದ್ನ, ಸೊಲಿಗೆ, ಒಮ್ಮನ, ಇಮ್ಮನ, ಅರಣ, ಪಡಿ ಮುಂತಾದ ಬೇರೆಬೇರೆ ಮಾಪನಗಳುಂಟು. ಇವು ಪ್ರಾದೇಶಿಕವಾಗಿ ಬೇರೆಬೇರೆ ಅಳತೆಯ ಪ್ರಮಾಣವನ್ನು ಹೊಂದಿವೆ. ಇಮ್ಮನ = ೧೬ ಸೇರು, ಒಮ್ಮನ = ೮ ಸೇರು, ಅರಣ = ಎಂದರೆ ೪ ಸೇರಿನ ಅಳತೆಯಾದರೆ ಪಡಿ ಎಂಬುದು ೨ ಸೇರಿನ ಅಳತೆಯಾಗಿದೆ.

'ಗಾವುದ' ಎಂದರೆ ದಾರಿಯನ್ನು ಅಳೆಯಲು ಜನಪದರಿಗೆ ಗೊತ್ತಿರುವ ಶಬ್ಧಗಳು. ಮೈಲು, ರಹದಾರಿ ಆದರೆ, ಗಾವುದ ಎಂದರೆ ಎರಡು ಹರಿದಾರಿ – ಸುಮಾರು ಆರು ಮೈಲು ಎಂದು ಹೇಳಬಹುದು. ಹೀಗೆ ಬಸವ ಕವಿಯ ಮುಂತಾದ ಅಳತೆಯ ಮಾಪನಗಳನ್ನು ಗುರುತಿಸಲು ಸಹಾಯಕವಾಗಿದೆ.

೭.೯ ಸಂಪ್ರದಾಯ :

ಜನಸಮುದಾಯದ ಜೀವನವನ್ನು ರೂಪಿಸುವಲ್ಲಿ, ಸಂಸ್ಕೃತಿಯನ್ನು ಕಟ್ಟುವಲ್ಲಿ ಸಂಪ್ರದಾಯಗಳು ಮಹತ್ವದವುಗಳಾಗಿವೆ. ಸಂಪ್ರದಾಯಗಳ ಹಿಂದೆ ನಂಬಿಕೆ ಬಲವಾಗಿರುತ್ತದೆ. ಅಂದರೆ ನಂಬಿಕೆ ಸಂಪ್ರದಾಯವನ್ನು ಚಾಲನೆಗೊಳಿಸುತ್ತದೆ. ಮತ್ತು ನಂಬಿಕೆ ಸಂಪ್ರದಾಯವನ್ನು ಜೀವಂತವಾಗಿರಿಸುತ್ತದೆ. ಸಂಪ್ರದಾಯಗಳ ಹಿಂದೆ ಬೀಜರೂಪದಲ್ಲಿ ನಂಬಿಕೆ ಇದ್ದೆಯಿರುತ್ತದೆ ಅಂದರೆ, ಸಂಪ್ರದಾಯಗಳೆಲ್ಲವೂ ನಂಬಿಕೆಗಳಾಗಿರುತ್ತವೆ. ಆದರೆ, ಎಲ್ಲ ನಂಬಿಕೆಗಳು ಸಂಪ್ರದಾಯಗಳಲ್ಲಿ ಆದರೆ ಎಲ್ಲಾ ನಂಬಿಕೆಗಳು ಸಂಪ್ರದಾಯಗಳಲ್ಲ.

ವೈಯಕ್ತಿಕ ನಂಬಿಕೆಗಳು ಸಂಪ್ರದಾಯಗಳಾಗುವವು. ನಂಬಿಕೆಯೊಂದು ಐತಿಹ್ಯ ಪುರಾಣ. ಧರ್ಮಗಳೊಂದಿಗೆ ಸಂಬಂಧವನ್ನು ಪಡೆದುಕೊಂಡು ಸಮುದಾಯದ ಶ್ರದ್ಧೆಯೊಂದಿಗೆ ಸಮರ್ಥನೆಯನ್ನು ಪಡೆದುಕೊಂಡಾಗ ಸಂಪ್ರದಾಯವಾಗುತ್ತದೆ. ಇಂತಹ ಸಂಪ್ರದಾಯಗಳ ಪ್ರಾಯೋಗಿಕ ಅಥವಾ ಕ್ರಿಯಾ ರೂಪಗಳೇ ಆಚರಣೆಗಳು. ಹೀಗಾಗಿ ನಂಬಿಕೆಗಿಂತ ಸಂಪ್ರದಾಯ ಆಚರಣೆಗಳಿಗೆ ಹೆಚ್ಚಿನ ವ್ಯಾಪ್ತಿಯಿದೆ.

ಒಂದು ಸಮಾಜದ ಸಾಂಸ್ಕೃತಿಕ ಮೌಲ್ಯ ವ್ಯವಸ್ಥೆಯಾಗಿ ಸಂಪ್ರದಾಯಗಳು ದುಡಿಯುತ್ತಿವೆ. ಆದ್ದರಿಂದಲೇ ಒಂದು ದೇಶದ ಕಾನೂನು ರಚನೆಯಲ್ಲಿ ಆ ಸಮಾಜದ ಸಂಪ್ರದಾಯಗಳನ್ನು ಗಮನಿಸಲಾಗುವುದು.

ಪುರಾಣಗಳು ಈ ಸಂಪ್ರದಾಯದ ಆಚರಣೆಗಳಿಗೆ ಒಂದು ನೆಲೆಗಟ್ಟನ್ನು ಒಂದು ಸ್ಥಿರತೆಯನ್ನು ಒದಗಿಸುತ್ತವೆ. ಪುರಾಣ ನಂಬಿಕೆಗಳಿಗೆ ಅಂಗೀಕಾರ ಮುದ್ರೆಯೊತ್ತಿದರೆ, ಉಪಾಸನೆ ಆ ನಂಬಿಕೆಯನ್ನು ಪುನಶ್ಚೇತನಗೊಳಿಸುವ ಮತ್ತೆ ದೃಢಪಡಿಸುವ ಕಾರಣವಾಗುತ್ತದೆ. ಭೌಗೋಳಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಿಸರದ ಹಿನ್ನೆಲೆಯಲ್ಲಿ ಆಯಾ ಜನರ ಮನೋಧರ್ಮವನ್ನವಲಂಬಿಸಿ ಸಂಪ್ರದಾಯಗಳು ಜನಿಸುತ್ತವೆ. ಜನರ ವಲಸೆ ಹಾಗೂ ಪರಸ್ಪರ ಸಂಪರ್ಕಗಳಿಂದಾಗಿ ಅವು ಹರಡುವುದಾದರೂ ಅವುಗಳ ಉಗಮದ ಬಹುತ್ವವನ್ನು ನಿರಾಕರಿಸುವಂತಿಲ್ಲ. ಸಂಸ್ಕೃತಿಗಳಲ್ಲಿ ಸ್ವತಂತ್ರವಾಗಿ ರೂಪಗೊಳ್ಳಲು ಸಾಧ್ಯವಿದೆ. ಹೀಗಾಗಿಯೇ ಕೃಷಿ, ಹುಟ್ಟು, ಮದುವೆ, ಮರಣ ಸಂಬಂಧವಾದ ಸಂಪ್ರದಾಯಗಳು ವಿಭಿನ್ನ ದೇಶಗಳ ಸಾದೃಶ್ಯತೆ ಕಂಡುಬರುತ್ತದೆ.

ಮೌಲ್ಯಗಳು ಬದಲಾದಂತೆಲ್ಲ ಸಂಪ್ರದಾಯ, ಆಚರಣೆಗಳು ಬದಲಾಗುತ್ತವೆ. ವೈಚಾರಿಕತೆ ಬೆಳೆದಂತೆ ಅನೇಕ ಮೌಢ್ಯಮೂಲವಾದ ಸಂಪ್ರದಾಯಗಳು ವಿಸ್ಮೃತಿಗೆ ಸೇರುತ್ತವೆ. ಹಾಗೆಂದು ಗ್ರಾಮೀಣ ಜನರಲ್ಲಿ ಸಂಪ್ರದಾಯಗಳು ಗಾಢವಾಗಿರುತ್ತವೆ. ಬಸವ ಕವಿಯು ತನ್ನ ಕಾಲದಲ್ಲಿ ಚಲಾವಣೆಯಲ್ಲಿದ್ದವುಗಳನ್ನು ಮಹಾಲಿಂಗಲೀಲೆಗಳಲ್ಲಿ ಕಟ್ಟಿಕೊಟ್ಟಿದ್ದಾನೆ.

೭.೧೦ ಜಾನಪದ ದೈವ :

ಜನಪದರು ಪೂಜಿಸುವ ದೈವವನ್ನು ಮನೆದೇವರು, ಕುಲದೇವರು, ಗ್ರಾಮದೇವತೆ, ಸೀಮೆದೇವರು ಎಂದು ವರ್ಗೀಕರಿಸಬೇಕಾಗುತ್ತದೆ. ಪರಂಪರಾಗತವಾಗಿ ಕುಟುಂಬದ ಹಿರಿಯರಿಂದ ಪೂಜಿಸಲ್ಪಡುವ ಕುಟುಂಬದ ದೇವರು 'ಮನೆದೇವರು' ಎನ್ನಿಸುತ್ತದೆ. ಈ ದೇವರು ತಾವು ವಾಸಿಸುವ ಊರಲ್ಲಿಯೇ ಇರಬೇಕೆಂದಿಲ್ಲ ಯಾವುದೋ ದೂರದ ಊರಲ್ಲಿರಬಹುದು ವರ್ಷಕ್ಕೊಮ್ಮೆ ಎರಡು ಬಾರಿ ಹೋಗಿ ಪೂಜಿಸಲ್ಲಿಸಿ ಬರುವುದುಂಟು ಒಂದೊಂದು ಮನೆತನಕ್ಕೆ ಮನೆದೇವರು ಒಮ್ಮೊಮ್ಮೆ ಎರಡು ಅಥವಾ ಮೂರು ಇರುವುದುಂಟು ಒಂದು ಮನೆತನದ ಪರಊರಲ್ಲಿರುವ ಮನೆದೇವರು ಗ್ರಾಮದ ಗ್ರಾಮದೇವತೆಯಾಗಿರಬಹುದು 'ಕುಲದೇವತೆ' ಜಾತಿಯನ್ನು ಪ್ರತಿನಿಧಿಸುವ ದೇವರು ವೀರಭದ್ರ ಲಿಂಗಾಯತರಿಗೆ, ಭೀರಪ್ಪ, ಮಾಳಿಂಗರಾಯ ಕುರುಬರಿಗೆ, ಕಾಳಮ್ಮ ಪಂಚಾಳರಿಗೆ ಹೀಗೆ ಬೇರೆ ಬೇರೆ ಜಾತಿಗಳಿಗೆ ಮೀಸಲಾಗಿರುವ ದೇವರನ್ನು ಸಾಲಾಗಿ ಉದಾರಿಸಬಹುದು.

ಗ್ರಾಮದ ತುಂಬಾ ತೋರುವ ಗುಡಿಗಳು ಗ್ರಾಮೀಣರ ದೈವಶ್ರದ್ಧೆಯನ್ನು

[illegible]

[illegible]

[illegible]

[illegible]

[illegible]

ಪ್ರತಿನಿಧಿಸುತ್ತೇವೆ. ಈ ದೇವಾಲಯಗಳಲ್ಲಿ ನಿತ್ಯವೂ ಪೂಜೆ ನಡೆಯಲು ಅವಶ್ಯಕತೆಗಳಿಗೆಲ್ಲಾ ವ್ಯವಸ್ಥೆಯಿರುತ್ತವೆ. ಉಂಬಳಿಗಳು ಸಾರ್ವಜನಿಕ ಸಹಾಯ ಈ ದೇವಾಲಯಗಳ ಪೂಜಾರಿಗಳ ಜೀವನೋಪಾಯಕ್ಕೆ ಆಸಕ್ತಿಯಾಗಿದೆ. ಕೆಲವು ದೇವರು ನಿರ್ದಿಷ್ಟ ಜಾತಿಯವರಿಂದ ಪೂಜಿಸಲ್ಪಡಬಹುದಾದರೂ ಅನ್ಯಜಾತಿಯುವರು ಇಡಿಯಾಗಿ ಈ ದೇವರನ್ನು ತಿರಸ್ಕರಿಸುವದಿಲ್ಲ. ಈ ನಿಟ್ಟಿನಲ್ಲಿ ಕಂಡುಬರುವ ಜಾನಪದರ ಮಾನಸಿಕ ಹದ ಮತ್ತು ಭಾವಕ್ಯತೆಯ ಬಗ್ಗೆ ಅಭ್ಯಾಸಯೋಗ್ಯವೆನಿಸುತ್ತದೆ. ಹೀಗೆ ಮಹಾಲಿಂಗಲೀಲೆಯಲ್ಲಿ ಮುಧೋಳದ ಮಾಲೋಜಿ ಭೂಪತಿಯು ಮಹಾಲಿಂಗೇಶ್ವರರನ್ನು ಕುಲದೈವರನ್ನಾಗಿ ಮಾಡಿಕೊಂಡಿರುವುದು ನಿಜವೆನ್ನಬಹುದು.

೭.೧೧ ಜಾನಪದ ಧರ್ಮ :

ಧರ್ಮವು ಅನುಕರಣೆ ಮತ್ತೆ ಆವರಣೆಗಳಿಂದ ಹರಿದು ಬಂದಿದ್ದು ಅತಿಮಾನುಷ ಕಲ್ಪನೆ, ಅಲೌಖಿಕ ಜೀವಿಗಳ ಆರಾಧನೆ ಹಾಗೂ ಅನೇಕ ಬಗೆಯ ಧಾರ್ಮಿಕ ನಂಬಿಕೆಗಳಿಂದ ಕೂಡಿದೆ. ನಾವು ಪರಿಪಾಲಿಸುವ ಧರ್ಮಗಳ ಧ್ಯೇಯೋದ್ದೇಶಗಳ ಅರಿವಿಲ್ಲವಾದರೂ ತಮ್ಮ ಸುತ್ತು ಕಾಪಾಡುವ ಒಂದು ಶಕ್ತಿಯಿಂದ ಎಂಬುದನ್ನು ಜನಪದರು ನಂಬುತ್ತಾರೆ. ಹೀಗಾಗಿ ನದಿ, ಜಲಪಾತಗಳು, ಬೆಟ್ಟಗುಡ್ಡ, ದಟ್ಟವಾದ ಕಾಡು ಎಲ್ಲವುಗಳಲ್ಲೂ ದೈವತ್ವವನ್ನು ಅರಸುತ್ತಾರೆ. ಇವುಗಳ ಒಡನೆಯೋ ಆ ಪ್ರದೇಶದಲ್ಲಿ ವಾಸವಾಗಿದ್ದು ಕಾಯಿಲೆ ಮತ್ತು ಅನಿಷ್ಟಗಳಿಗೆ ಕಾರಣನೆಂದು ನಂಬಿ ಅವುಗಳನ್ನು ಪೂಜಿಸುತ್ತಾರೆ.

ಪ್ರಕೃತಿ ಪೂಜೆ ಜನಪದ ಧರ್ಮದ ಪ್ರಧಾನ ಲಕ್ಷಣ ತಾವು ವಾಸಿಸುವ ಭೂಮಿ ಸಮೀಪದ ಕಡಲು ಅವರಿಗೆ ಆರಾಧ್ಯ ವಸ್ತು. ಕುಲದೇವತಾರಾಧನೆಯ ಪದ್ಧತಿ ಜನಪದ ಧರ್ಮದ ಭಾಗವಾಗಿದೆ. ಗ್ರಾಮದೇವತೆಗಳು ಊರನ್ನು, ಊರಿನೊಳಗಿನ ಜನಮಂದಿಯನ್ನು, ಜಾನವಾರುಗಳನ್ನು ಸಂರಕ್ಷಿಸುತ್ತವೆ. ಎಂಬ ನಂಬಿಕೆಯಿದೆ ಇಂತಹ ದೇವತೆಗಳನ್ನು ಆಗಿಂದಾಗ್ಗೆ ವಿಶೇಷ ದಿನಗಳಲ್ಲಿ ವಾರ್ಷಿಕ ಆಚರಣೆಗಳಲ್ಲಿ ಪೂಜಿಸುವ ಸಂಪ್ರದಾಯವಿದೆ. ಹೀಗೆ ಪೂಜಿಸದಿದ್ದಲ್ಲಿ ಅನೇಕ ರೋಗರುಜಿನಗಳನ್ನು ತರತ್ತವೆ ಎನ್ನಲಾಗುತ್ತದೆ. ಇಂತಹ ನಂಬಿಕೆಗಳ ಫಲವಾಗಿಯೇ ಪ್ಲೇಗಿನಮ್ಮ, ಸಿಡುಬಿನಮ್ಮ, ದಡಾರಮ್ಮ, ಬಿಸಿಲುಮಾರಿ, ತೋನ್ನುರೋಗ, ಮಲರೋಗ ಮುಂತಾದ ಧೈವಗಳು ಸೃಷ್ಟಿಯಾಗಿವೆ.

ಮಾಟಮಂತ್ರ ಜನಪದ ಧರ್ಮದ ಪ್ರಮುಖಭಾಗ. ಕಾಯಿಲೆ ಕಸಾಲೆ ಬಂದಾಗ

ಮಂತ್ರವಾದಿಯಿಂದ ಕಾರಣ ತಿಳಿಯುವುದು. ಮಂತ್ರಿಸಿದ ಬಸ್ಮ ಹಾಕಿಸಿಕೊಳ್ಳುವುದು, ತಾಯಿತ ಕಟ್ಟಿಕೊಳ್ಳುವುದು, ಮಂತ್ರಗಳ ಜಪಿಸುವುದು, ದುಷ್ಟಶಕ್ತಿಗಳು ಮೈದುಂಬಿದಾಗ ಮಂತ್ರೋಚ್ಚಾರಣಾ ವಿಧಿ ನಡೆಸುವುದು ಇಂದಿಗೂ ಜನಪದ ಧರ್ಮ ಜೀವಂತವಾಗಿರುವ ಸಂಕೇತ.

೭.೧೨ ಸಮಾರೋಪ :

ಒಟ್ಟಿನಲ್ಲಿ ಹೀಗೆ ಬಸವಕವಿಯು ಸ್ವಪ್ನಗಳು ಕಾಣುವುದು ಜನಪದದ ಕಾರಣಗಳು ದೇವತೆಗಳಿಗೆ ಯುದ್ಧಕ್ಕೆ ಹೋರಡುವಾಗ ವಿವಿಧ ವಾದ್ಯಗಳ ಮೂಲಕ ವೈಭವಗಳಿಂದ ಜಾನಪದೀಯ ವಾದ್ಯಗಳಾದ ಢಕ್ಕೆ, ಕಸಾಳೆ, ಕಾಳೆ, ಡಮರು, ಭೇರಿ, ತಮ್ಮಟ ಮುಂತಾದವುಗಳಿಂದ ಬಾರಿಸುತ್ತ ಬರುವುದು ಆಗ ವೈಭವಗೋಸ್ಕರ ಪಟ್ಟಣವನ್ನು ತಳಿರು ತೋರಣಗಳಿಂದ ಶೃಂಗರಿಸುವುದು. ಜಾನಪದದ ವಿವಿಧ ಆಹಾರ ಪದಾರ್ಥಗಳನ್ನು ಹೆಸರಿಸುವುದು. ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ವಿವಿಧ ರೀತಿಯ ಬೈಗುಳಗಳು ಜನಪದದ ಅಂಶಗಳಿಂದ ಕೂಡಿವೆ. ಹಾಗೂ ಜಾನಪದದ ಅಳತೆ ಮಾನಗಳು, ಪಡಿ, ಗಾವುದಗಳನ್ನು ಬಳಸಿರುವುದು ಹೀಗೆ ಹತ್ತು ಹಲವಾರು ಜಾನಪದೀಯ ಅಂಶಗಳ ಮೂಲಕ ಬಸವಕವಿ ವಿರಚಿತ ಮಹಾಲಿಂಗಲೀಲೆಯು ತುಂಬಿಕೊಂಡಿದೆ.

ಬಸವಕವಿಯು ಜೀವನ ವಿಧಾನವನ್ನು ಸೊಗಸಾಗಿ ಚಿತ್ರಿಸಿದ್ದಾನೆ. ಜನಪದ ನಂಬಿಕೆ, ಆಚರಣೆ, ಸಂಪ್ರದಾಯ, ಆಚಾರ-ವಿಚಾರ, ಉಡುಗೆ, ತೊಡುಗೆ, ಆಹಾರ ಪದ್ಧತಿ, ದೆವ್ವ, ದೇವಾರಾಧನೆಗಳು, ಸ್ವಪ್ನಗಳ ಕುರಿತಾಗಿ ತಿಳಿಸಿದ್ದಾನೆ. ನಂಬಿಕೆಗಳು ಜನಪದರನ್ನು ಆಳುತ್ತವೆ. ಸಂಪ್ರದಾಯಗಳು ಈ ಸಮುದಾಯಗಳಲ್ಲಿ ಮನೆ ಮಾಡಿರುತ್ತವೆ. ಆಚರಣೆಗಳು ಬದುಕನ್ನು ನಿಯಂತ್ರಿಸುತ್ತವೆ. ಬದುಕೆಂದ ಮೇಲೆ ನೋವು, ನಲಿವು, ಸಿಟ್ಟು, ಆಕ್ರೋಶ, ಸೇಡು ಇತ್ಯಾದಿಗಳೆಲ್ಲವೂ ಸಮಾವೇಶಗೊಳ್ಳುತ್ತವೆ. ಪರಸ್ಪರ ಮಾತಿನ ಚಕಮಕಿಗಳಾದದ ಬೈಗುಳಗಳು ಹೊರಹೊಮ್ಮುತ್ತವೆ. ಆಯಾ ವ್ಯಕ್ತಿಯ ಮನಸ್ಥಿತಿಯನ್ನು ಬೈಗುಳಗಳು ಪ್ರತಿಬಿಂಬಿಸುತ್ತವೆ. ನಾಲಿಗೆ ಕುಲಮಂ ತಬ್ಬುವವೋಲ್ ಎಂದು ಪಂಪ ಹೇಳಿರುವಂತೆ ನಾಲಿಗೆಯು ಆಡಿದವನ ಹಿನ್ನೆಲೆಯನ್ನು ವಿವರಿಸುತ್ತವೆ. ಹೀಗೆ ತನ್ನ ಸಮಾಜದಲ್ಲಿರುವ ಜಾನಪದರ ಸಮಸ್ತ ಬದುಕನ್ನು ಬಸವಕವಿಯು ಕಟ್ಟಿಕೊಟ್ಟಿದ್ದಾನೆ. ಜನಪದೀಯ ಅಂಶಗಳನ್ನು ವಿಶೇಷವಾಗಿ ಪ್ರಸ್ತಾಪಿಸಿರುವುದನ್ನು ಈ ಸಮೀಕ್ಷೆಯ ಮೂಲಕ ತಿಳಿಯುತ್ತವೆ.

[illegible]

ಕೊನೆ ಟಿಪ್ಪಣಿಗಳು :

೧. ಮಹಲಿಂಗಲೀಲೆ – ಸಂಧಿ ೫, ಪದ್ಯ ೩೦, ಪುಟ ೫೨
೨. ಮಹಲಿಂಗಲೀಲೆ – ಸಂಧಿ ೩, ಪದ್ಯ ೧೪, ಪುಟ ೨೭
೩. ಮಹಲಿಂಗಲೀಲೆ – ಸಂಧಿ ೩, ಪದ್ಯ ೧೬, ಪುಟ ೨೮
೪. ಮಹಲಿಂಗಲೀಲೆ – ಸಂಧಿ ೫, ಪದ್ಯ ೨೦, ಪುಟ ೫೦
೫. ಮಹಲಿಂಗಲೀಲೆ – ಸಂಧಿ ೫, ಪದ್ಯ ೨೧, ಪುಟ ೫೦
೬. ಮಹಲಿಂಗಲೀಲೆ – ಸಂಧಿ ೫, ಪದ್ಯ ೧೮, ಪುಟ ೪೯
೭. ಮಹಲಿಂಗಲೀಲೆ – ಸಂಧಿ ೭, ಪದ್ಯ ೬, ಪುಟ ೬೬
೮. ಮಹಲಿಂಗಲೀಲೆ – ಸಂಧಿ ೧೧, ಪದ್ಯ ೨೦, ಪುಟ ೧೧೦
೯. ಮಹಲಿಂಗಲೀಲೆ – ಸಂಧಿ ೮, ಪದ್ಯ ೨೩, ಪುಟ ೮೨
೧೦. ಮಹಲಿಂಗಲೀಲೆ – ಸಂಧಿ ೮, ಪದ್ಯ ೧೪, ಪುಟ ೭೯
೧೧. ಮಹಲಿಂಗಲೀಲೆ – ಸಂಧಿ ೧೦, ಪದ್ಯ ೨೦, ಪುಟ ೯೫
೧೨. ಮಹಲಿಂಗಲೀಲೆ – ಸಂಧಿ ೧೦, ಪದ್ಯ ೨೨, ಪುಟ ೯೫
೧೩. ಮಹಲಿಂಗಲೀಲೆ – ಸಂಧಿ ೧೦, ಪದ್ಯ ೨೮, ಪುಟ ೯೭
೧೪. ಮಹಲಿಂಗಲೀಲೆ – ಸಂಧಿ ೯, ಪದ್ಯ ೧೪, ಪುಟ ೮೮
೧೫. ಮಹಲಿಂಗಲೀಲೆ – ಸಂಧಿ ೧೬, ಪದ್ಯ ೬೩, ಪುಟ ೧೯೭
೧೬. ಮಹಲಿಂಗಲೀಲೆ – ಸಂಧಿ ೧೬, ಪದ್ಯ ೬೨, ಪುಟ ೧೯೬
೧೭. ಮಹಲಿಂಗಲೀಲೆ – ಸಂಧಿ ೧೪, ಪದ್ಯ ೬೧, ಪುಟ ೧೫೮
೧೮. ಮಹಲಿಂಗಲೀಲೆ – ಸಂಧಿ ೧೪, ಪದ್ಯ ೧೫, ಪುಟ ೧೪೭
೧೯. ಮಹಲಿಂಗಲೀಲೆ – ಸಂಧಿ ೧೪, ಪದ್ಯ ೧೭, ಪುಟ ೧೪೭
೨೦. ಮಹಲಿಂಗಲೀಲೆ – ಸಂಧಿ ೧೧, ಪದ್ಯ ೪೨, ಪುಟ ೧೧೩
೨೧. ಮಹಲಿಂಗಲೀಲೆ – ಸಂಧಿ ೧೪, ಪದ್ಯ ೪೨, ಪುಟ ೧೫೩
೨೨. ಮಹಲಿಂಗಲೀಲೆ – ಸಂಧಿ ೧೨, ಪದ್ಯ ೨೨, ಪುಟ ೧೨೬
೨೩. ಮಹಲಿಂಗಲೀಲೆ – ಸಂಧಿ ೭, ಪದ್ಯ ೨೨, ಪುಟ ೭೦
೨೪. ಮಹಲಿಂಗಲೀಲೆ – ಸಂಧಿ ೭, ಪದ್ಯ ೨೦, ಪುಟ ೭೦
೨೫. ಮಹಲಿಂಗಲೀಲೆ – ಸಂಧಿ ೧೧, ಪದ್ಯ ೪೭, ಪುಟ ೧೧೫
೨೬. ಮಹಲಿಂಗಲೀಲೆ – ಸಂಧಿ ೧೧, ಪದ್ಯ ೪೮, ಪುಟ ೧೧೫
೨೭. ಮಹಲಿಂಗಲೀಲೆ – ಸಂಧಿ ೧೧, ಪದ್ಯ ೫೦, ಪುಟ ೧೧೫
೨೮. ಮಹಲಿಂಗಲೀಲೆ – ಸಂಧಿ ೧೧, ಪದ್ಯ ೬೪, ಪುಟ ೧೧೯
೨೯. ಮಹಲಿಂಗಲೀಲೆ – ಸಂಧಿ ೨೩, ಪದ್ಯ ೮, ಪುಟ ೨೭೭
೩೦. ಮಹಲಿಂಗಲೀಲೆ – ಸಂಧಿ ೭, ಪದ್ಯ ೩೪, ಪುಟ ೭೩
೩೧. ಮಹಲಿಂಗಲೀಲೆ – ಸಂಧಿ ೯, ಪದ್ಯ ೭, ಪುಟ ೮೭
೩೨. ಮಹಲಿಂಗಲೀಲೆ – ಸಂಧಿ ೧೦, ಪದ್ಯ ೪೪, ಪುಟ ೧೦೧
೩೩. ಮಹಲಿಂಗಲೀಲೆ – ಸಂಧಿ ೧೧, ಪದ್ಯ ೫೬, ಪುಟ ೧೧೭
೩೪. ಮಹಲಿಂಗಲೀಲೆ – ಸಂಧಿ ೧೫, ಪದ್ಯ ೪೨, ಪುಟ ೧೭೫
೩೫. ಮಹಲಿಂಗಲೀಲೆ – ಸಂಧಿ ೧೮, ಪದ್ಯ ೨೭, ಪುಟ ೨೩೩

ಅಧ್ಯಾಯ – ೮

ಸಮಾರೋಪ

ಬಸವಕವಿಯ ಮಹಾಲಿಂಗಲೀಲೆಯು ಒಂದು ಪುರಾಣ ಕಾವ್ಯ. ವೀರಶೈವ ಕವಿಯಾದ ಈತ ವೀರಶೈವ ಧರ್ಮ ಷಟಸ್ಥಲ, ಅಷ್ಟಾವರಣ, ಪಂಚಾಚಾರಗಳು ಸೊಗಸಾಗಿ ಪ್ರತಿಪಾದಿಸಿದ್ದಾನೆ. ಕೇವಲ ಧಾರ್ಮಿಕ ಕಾವ್ಯವಾಗಿಸದೆ, ಸಮಕಾಲೀನ ಸಂಗತಿಗಳನ್ನು, ಚಾರಿತ್ರಿಕ ಅಂಶಗಳನ್ನು ಐತಿಹಾಸಿಕ ಘಟನೆಗಳನ್ನು ನಿರೂಪಿಸಿದ್ದಾನೆ. ಬಸವಾದಿ ಪ್ರಮುಖರ ಶಿವಶರಣರ ಕಥೆಗಳನ್ನು ಶಿವನ ಪವಾಡಗಳನ್ನು ಹದವರಿತು ಬರೆಸಿದ್ದಾನೆ. ತನ್ನ ಕಾಲದ ಆಚಾರ, ವಿಚಾರ, ಸಂಪ್ರದಾಯ, ನಂಬಿಕೆಗಳು, ಜೀವನ ವಿಧಾನ, ಜನಾಂಗದ ಬದುಕಿನ ಕ್ರಮ ಪ್ರತಿಯೊಂದನ್ನು ದಾಖಲಿಸಿದ್ದಾನೆ. "ಸಮಾಜದೊಳಗಿಂದ ಕವಿಯುದಿಸುತ್ತಾನೆ. ಕವಿಯ ಒಡಲೊಳಗಿಂದ ಕಾವ್ಯವೊಂದು ಅವಿಷ್ಕರಿಸುತ್ತದೆ." ಎಂಬ ಮಾತಿಗೆ ಬಸವಪುರಾಣ ಉತ್ತಮ ಉದಾಹರಣೆಯಾಗಿದೆ. ಮಹಾಲಿಂಗಲೀಲೆಯು ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳುವವರಿಗೆ ಅಮೂಲ್ಯವಾದ ಗಣಿಯಾಗಿದೆ.

ಈ ಪುರಾಣದಲ್ಲಿ ಸಾಂಸ್ಕೃತಿಕ ಅಂಶಗಳ ಪಾತ್ರದಲ್ಲಿ ಹಿರಿದಾಗಿದೆ. ಅಂದಿನ ಸಾಮಾಜಿಕ ಮೌಲ್ಯಗಳು, ನಮ್ಮವರ ಬದುಕನ್ನು ರೂಪಿಸಿದ ಮೇಲೆ ಎದುರಿಸಿದ ಕಷ್ಟ, ಕಾರ್ಪಣ್ಯಗಳು, ಅನುಭವಿಸಿದ ಸುಖ-ದುಃಖ, ಪಡೆದ ಯಶಸ್ಸು ಮೊದಲಾದವುಗಳನ್ನು ಬಸವಕವಿಯು ನಿಚ್ಚಳವಾಗಿ ನಿರೂಪಿಸಿದ್ದಾನೆ. ದುಷ್ಟ ಶಕ್ತಿಯ ದಮನ, ಮಾನವ ಶಕ್ತಿಯ ಆಗಾಧತೆಯನ್ನು ಸಾರುವ ಮೂಲಕ ಮಹಾಲಿಂಗಲೀಲೆಯು ಮಂಗಳಕರವಾದುದನ್ನಾಗಿ ಮಾಡಿದ್ದಾನೆ.

ಬಸವಕವಿಯ ಮಹಾಲಿಂಗಲೀಲೆಯ ಸಾಂಸ್ಕೃತಿಕ ಅಂಶಗಳು, ಪಾತ್ರಗಳು, ಅವನ ಔಚಿತ್ಯ ಪ್ರಜ್ಞೆಯಿಂದಾಗಿ ಎಲ್ಲವೂ ಜೀವಕಳೆಯಿಂದ ಕಂಗೊಳಿಸುತ್ತವೆ. ಮಾನವ ಸ್ವಭಾವದ ವೈವಿದ್ಯತೆಗಳನ್ನೆಲ್ಲಾ ಪ್ರಕಟಿಸಿವೆ. ಸಮಕಾಲೀನ ಮಾನವ ಪ್ರತಿನಿಧಿಗಳಾಗಿ ವರ್ತಿಸುತ್ತವೆ. ಇದು ಮಹಾಲಿಂಗಲೀಲೆ ಕಾವ್ಯದ ವೈಶಿಷ್ಟ್ಯವಾಗಿದೆ.

ಸಾಂಸ್ಕೃತಿಕ ಅಧ್ಯಯನದಲ್ಲಿ ಸಂಸ್ಕೃತಿಯು ಧರ್ಮದ ಮೇಲೆ ಪ್ರಭಾವ ಬೀರಿದ ರೀತಿ ಧಾರ್ಮಿಕ ಆಚರಣೆಗಳು, ದೈವ, ಪೂಜೆ, ಭಕ್ತಿ, ಪ್ರಾರ್ಥನೆ, ಭಾಷೆಯ ಮೂಲಕ ಒಂದು ಜನಾಂಗದ ಉಡುಗೆ, ತೊಡುಗೆ, ರೀತಿ-ನೀತಿಯನ್ನು ಕಂಡುಕೊಳ್ಳಬಹುದು. ಸಂಸ್ಕೃತಿಯಿಂದ ಸಮಾಜದ ಜನರು ಸಂಸ್ಕಾರವನ್ನು ಪಡೆದುಕೊಂಡು ಸಮಾಜದಲ್ಲಿ ಉನ್ನತ ಜೀವನವನ್ನು ನಡೆಸಲು ಸಹಾಯಕ ಸಾಮಗ್ರಿಯನ್ನು ಒದಗಿಸಿ ಮಾನವನನ್ನು

ಸಾಂಸ್ಕೃತಿಕವಾಗಿ ಉನ್ನತ ಮಟ್ಟಕ್ಕೇರಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದೆ.

ಧಾರ್ಮಿಕತೆ ಮೌಲ್ಯಗಳೆನಿಸಿದ ಪೂಜಾರಿಗಳು ಅವರ ಕಾರ್ಯವೈಖರಿ, ಅವರ ಶ್ರೇಷ್ಠತೆ, ವೀರಶೈವ ಕವಿಗಳನ್ನು ಹೆಸರಿಸಿ ಅವರ ಸಮಾಜೋದ್ಧಾರದ ಕಾರ್ಯನೀತಿಗಳನ್ನು ಗುರುತಿಸಿರುವನು. ಶಿವನ ಆಸ್ಥಾನದಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳು, ಚರ್ಚೆಗಳು, ನಿರ್ಣಯಗಳು, ಓಡ್ಡೋಲಗದ ಮೂಲಕ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಕವಿಯು ಭಸ್ಮಧಾರಣೆಯಿಂದ ಮಾನವ ಚಿರಂಜೀವಿಯಾಗುತ್ತಾನೆ. ಅಷ್ಟಾವರ್ಣಗಳ ಮಹತ್ವ ವಿಧಿ ಎನ್ನುವುದು ಎಲ್ಲರನ್ನೂ ಆಕ್ರಮಿಸುತ್ತದೆ. ಅದು ಹೇಗೆ ವ್ಯಕ್ತಿಯನ್ನು ದುಃಖತಪ್ತನನ್ನಾಗಿ ಮಾಡುತ್ತದೆ ಎನ್ನುವುದರ ಕುರಿತು ಸಾಕಷ್ಟು ಸಂಧಿಗಳಲ್ಲಿ ಕಂಡುಕೊಳ್ಳಲಾಗಿದೆ. ಪಂಚಾಕ್ಷರಿಯ ಮಂತ್ರವಾದ ನಮಃ ಶಿವಾಯದಿಂದ ಅನೇಕ ಜನರು ಉದ್ಧಾರಗೊಂಡಿರುವುದು ಪಂಚಾಕ್ಷರಿಯ ಮಂತ್ರದ ಸಾಕಷ್ಟು ಘಟನೆಗಳು ನಡೆದಿರುವುದನ್ನು ಅದರಿಂದ ಜಪಿಸಿದವರ ಜೀವನ ಪಾವನವಾಗಿರುವುದನ್ನು ಬಹಳಷ್ಟು ಸೊಗಸಾಗಿ ಚಿತ್ರಿಸಿದ್ದಾನೆ. ರುದ್ರಾಕ್ಷಿ ಮಹಿಮೆ, ಜಂಗಮನು ಸರ್ವ ಪರಿತ್ಯಾಗಿ ಜಂಗಮನಿಗೆ ತನು–ಮನ–ಧನಗಳನ್ನು ಅರ್ಪಿಸಿ ಅವನ ಭಕ್ತಿಯನ್ನು ಅನುಸರಿಸಬೇಕೆಂಬ ವಿವಿಧ ಕಾರ್ಯಗಳಲ್ಲಿ ಕಂಡುಕೊಂಡು ಸಮಾಜದಲ್ಲಿ ಜಂಗಮನ ಶ್ರೇಷ್ಠ ಸ್ಥಾನವನ್ನು ಕವಿಯು ಗುರುತಿಸಿರುವನು. ಹದಿನೆಂಟು ಪವಾಡಗಳ ಮೂಲಕ ಸಮಾಜದಲ್ಲಿಯ ಜನರನ್ನು ಮಹಾಲಿಂಗೇಶ್ವರರು ಸನ್ಮಾರ್ಗದೆಡಗೆ ಕರೆದೊಯ್ದು ಅವರಲ್ಲಿ ಭಕ್ತಿ, ಪೂಜೆ, ಪ್ರಾರ್ಥನೆ, ಲಿಂಗಗಳ ಪ್ರತಿಷ್ಠಾಪನೆಯನ್ನು ಕೈಗೊಂಡು ಜೀವನ ಪಾವನವಾಗುವಂತೆ ಜನರನ್ನು ಪರಿವರ್ತಿಸಿರುವರು.

ವಿವಿಧ ಜನಾಂಗಗಳ ಸ್ಥಾನಮಾನ, ಜಾತಿಗಳು, ಸ್ತ್ರೀಯರ ಗುಣಗಳ ವರ್ಣನೆ ಮತ್ತು ಅವರ ಸೌಂದರ್ಯವನ್ನು ವರ್ಣಿಸಿರುವುದು ಕವಿಯ ರಸಿಕತೆಯ ತಿಳಿಸುತ್ತದೆ. ಮಾನವನಿಗೆ ರೋಗಗಳು ಬರುವ ರೀತಿ, ಅವುಗಳ ಭೀಕರತೆ ಜೊತೆಗೆ ಅನೇಕ ಸಂಧಿಗಳಲ್ಲಿ ಜನತೆ ಸುಖ–ದುಃಖಗಳ ಕುರಿತು ಸಮಸ್ಯೆಗಳ ಸರಮಾಲೆಗಳು ಇರುವುದು ಅವುಗಳ ಪರಿಹಾರದ ಕುರಿತು ಸೊಗಸಾಗಿ ಚಿತ್ರಿಸಿದ್ದಾನೆ. ಮಾನವನು ಮೈಲಿಗೆಯ ಜೀವನ ಇದಕ್ಕಾಗಿ ತೊಳೆಯಲು ಹಳ್ಳ ನದಿಗಳ ಉಲ್ಲೇಖವನ್ನು ಮಾಡಿರುವನು. ಮಾನವ ಜೀವಿಸಲು ಪ್ರಮುಖ ಆಹಾರ ಧಾನ್ಯಗಳು ಆಹಾರಪದಾರ್ಥಗಳು, ಹಣ್ಣುಹಂಪಲಗಳನ್ನು ಹೆಸರಿಸಿರುವನು. ಕಣ್ಣಿಗೆ ಅಂದವನ್ನುಂಟುಮಾಡುವ ವಿವಿಧ ರೀತಿಯ ಹೂಗಳು, ಆಯುಧಗಳು ಉಡುಗೆ–ತೊಡುಗೆ, ನಂಬಿಕೆ, ಸಾಮಾಜಿಕ ಮೌಲ್ಯಗಳೆನಿಸಿದ ಲೋಕನೀತಿಗಳನ್ನು ದಾಖಲಿಸಿದ್ದಾನೆ.

ಸಮಾಜದಲ್ಲಿ ರಾಜಕೀಯ ಅಂಶಗಳ ಕುರಿತು ನಡೆದ ಅವುಗಳ ಮಹತ್ವವನ್ನು ಪ್ರಸ್ಥಾಪಿಸಿದ್ದಾನೆ. ರಾಜಕಾರಣಿಯರ ಚಿತ್ರಣ. ಯುದ್ಧಕ್ಕಾಗಿ ಚತುರಂಗಬಲಗಳ ಪರಾಕ್ರಮತೆ, ದಾನಪತ್ರಗಳನ್ನು ಕೊಡುವುದು, ಶಾಸನಗಳ ರಚನೆ ಮಾಡುವುದು, ರಾಜನ ಒಳ್ಳೆಯ ಗುಣಗಳು, ರಾಜನಲ್ಲಿಯ ಭಕ್ತಿ ಮಡುಗಟ್ಟಿರುವುದು, ಆಯುಧಗಳನ್ನು ಮೊದಲಾದ ಸಾಂಸ್ಕೃತಿಕ ಅಂಶಗಳನ್ನು ದಾಖಲಿಸಿದ್ದಾನೆ. ಇವು ರಾಜಕೀಯ ಸಂಸ್ಕೃತಿಗೆ ಕೊಟ್ಟ ಕೊಡುಗೆಗಳಾಗಿವೆ.

ಜಾನಪದೀಯ ಅಂಶಗಳಾದ ಶುಭಕಾರ್ಯಗಳಲ್ಲಿ ಮುತ್ತಿನಾರತಿಯನ್ನು ಬೆಳಗಿಸುವುದು. ವಿವಿಧ ವಾದ್ಯಗಳ ಉಲ್ಲೇಖ ಮಾಡಿರುವನು. ಸಮಾಜದಲ್ಲಿ ಬಿಳುವ ಕನಸುಗಳ ವಿಶೇಷತೆಯನ್ನು, ಬೈಗುಳಗಳ ಕುರಿತು, ಆಯಾ ಸಮಾಜದ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಇಲ್ಲಿ ವಿಶೇಷ ಬೈಗುಳಗಳನ್ನು ಉಲ್ಲೇಖಿಸಿದ್ದಾನೆ. ಜಾನಪದ, ಅಳತೆ ಮಾನದಂಡಗಳು, ಸಂಪ್ರದಾಯ, ನಂಬಿಕೆ, ದೈವ ಮುಂತಾದವುಗಳ ಕುರಿತಾಗಿ ವಿವರಿಸಿದ್ದು ಸಾಂಸ್ಕೃತಿಕವಾಗಿ ಗಮನಾರ್ಹವಾಗಿದೆ.

ಈ ರೀತಿಯಾಗಿ ಇಲ್ಲಿಯವರೆಗೆ ಕೈಗೊಂಡ ಅಧ್ಯಯನ ಫಲಿತಗಳನ್ನು ದಾಖಲಿಸಲಾಗಿದೆ. ಬಸವಪುರಾಣವು ಸಾಹಿತ್ಯಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಮಹತ್ವದ ಕೃತಿಯಾಗಿದೆ. ತನ್ನ ಸಮಕಾಲೀನ ಮೌಲ್ಯಗಳನ್ನು ಇದರಲ್ಲಿ ಪುನಃ ಸೃಷ್ಟಿಸಿದ್ದು ಮಹತ್ತರವಾಗಿದೆ. ಒಂದು ಜನಾಂಗದ ಜೀವನವನ್ನು ಇದರಲ್ಲಿ ವಿಸ್ತೃತವಾಗಿ ಪರಿಶೀಲಿಸಲಾಗಿದೆ. ಆದು ಅಧ್ಯಾಯಗಳಲ್ಲಿ ಪರಿಶೀಲಿಸಿರುವ ಅಶಂಗಳನ್ನಿಲ್ಲಿ ಕಟ್ಟಿಕೊಡಲಾಗಿದೆ.

ಬಸವಕವಿಯು ಇನ್ನುಳಿದ ಪುರಾಣಗಳಾದ "ಜಂಗಮಲೀಲೆ" ಮತ್ತು "ಸಂಗಮಲೀಲೆ"ಗಳನ್ನು ಮುಂದಿನ ಹಂತದಲ್ಲಿ ಅಧ್ಯಯನಕ್ಕೆ ಅಳವಡಿಸಬಹುದಾಗಿದೆ. ಮೂರು ಪುರಾಣಗಳ ಪರಸ್ಪರ ತೌಲನಿಕ ಅಧ್ಯಯನ ಮಾಡಬಹುದಾಗಿದೆ. ಮುಂಬರುವ ಆಸಕ್ತರಿಗೆ ಬಸವಕವಿಯ ಪುರಾಣಗಳು ಅಮೂಲ್ಯವಾದ ಆಕರ ಸಾಮಗ್ರಿಗಳಾಗುತ್ತವೆಯೆಂದು ಹೇಳಿದರೆ ಅತಿಶಯೋಕ್ತಿಯಾಗದು.

ಹೀಗೆ ಈ ಸಂಶೋಧನೆಯ ಹಂತದಲ್ಲಿ ಕಂಡುಕೊಂಡ ಸತ್ಯವನ್ನು ಬಸವಕವಿಯ ಸಾಂಸ್ಕೃತಿಕ ಕೊಡುಗೆಗಳೆಂದು ಇಲ್ಲಿ ನಿರೂಪಿಸಲಾಗಿದೆ. ಮಹಾಲಿಂಗಲೀಲೆಯಲ್ಲಿ ಅಡಗಿದ ಸಮಕಾಲೀನ ಸಾಂಸ್ಕೃತಿಕ ಬದುಕನ್ನು ಇಲ್ಲಿ ನಿರೂಪಿಸಲಾಗಿದೆ.

ಪರಾಮರ್ಶನ ಗ್ರಂಥಗಳು :

1. ಮಹಾಲಿಂಗಲೀಲೆ – (ಸಂ) ಆರ್. ಸಿ. ಹಿರೇಮಠ
ಲಿಂಗರಾಜ ಆರ್ಟ್ಸ್‌ಪ್ರೆಸ್ ಧಾರವಾಡ – 1954.

2. ಮಹಾಲಿಂಗೇಶ್ವರ ಮಹಾತ್ಮೆ – (ಸಂ) ಅಣ್ಣಾಜಿ ಫಡತಾರೆ
ನಂದಿ ಆಫ್‌ಸೆಟ್ ಪ್ರಿಂಟರ್ಸ್, ಜಮಖಂಡಿ – 1997.

3. ಶ್ರೀ ಗುರು ಮಹಾಲಿಂಗೇಶ್ವರ ಬಹುಪರಾಕ್‌ಗಳು – ಡಾ. ಅಶೋಕ ನರೋಡೆ
ನಂದಿ ಆಪ್‌ಸೆಟ್ ಪ್ರಿಂಟರ್ಸ್, ಜಮಖಂಡಿ – 1997

4. ಕರ್ನಾಟಕ ಸಂಸ್ಕೃತಿ ಸಮೀಕ್ಷೆ – ಡಾ. ಎಚ್. ತಿಪ್ಪೇರುದ್ರಸ್ವಾಮಿ
ಡಿವ್ಹಿಕೆ ಮೂರ್ತಿ ಪ್ರಕಾಶಕರು, ಮೈಸೂರು – 1968.

5. ಸಂಶೋಧನೆ – ಡಾ. ಎಂ. ಚಿದಾನಂದಮೂರ್ತಿ
ಕನ್ನಡ ಸಾಹಿತ್ಯ ಪರಿಷತ್ – 1984.

6. ಗೋಸಾಯಿಗಳ ಜನಾಂಗೀಯ ಅಧ್ಯಯನ – ಡಾ. ಅಶೋಕ ನರೋಡೆ
ಕುಕ್ಕೇಶ್ರೀ ಪ್ರಕಾಶನ, ಬೆಂಗಳೂರು – 2009.

7. ಸಾಹಿತ್ಯ ಶ್ರೀಗಂಧ – ಡಾ. ಧನವಂತ ಹಾಜವ್ವಗೋಳ
ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು – 2003.

8. ಅಮ್ಮಣಗಿ ಒಂದು ಅಧ್ಯಯನ – ಪ್ರೊ. ಎಲ್. ವ್ಹಿ. ಪಾಟೀಲ, ಡಾ. ಗುರುಪಾದ
ಮರೆಗುದ್ದಿ – ತ್ವರಿತ ಮುದ್ರಣ ಪ್ರಿಂಟರ್ಸ್, ಗದಗ – 2005.

9. ಐನಾಪೂರ ಸಾಂಸ್ಕೃತಿಕ ಅಧ್ಯಯನ – ಡಾ. ವ್ಹಿ. ಎಸ್. ಮಾಳಿ
ಮನೋಹರ ಮುದ್ರನಾಲಯ, ಧಾರವಾಡ – 2006.

10. ಕನ್ನಡ ಶಾಸನಗಳ ಆಧ್ಯಯನ – ಎಸ್.ಎಸ್. ಭಗವತಿ, ಎಚ್. ಎಸ್. ಮೇಲಿನಮನಿ
ವಿದ್ಯಾನಿಧಿ ಪ್ರಕಾಶನ ಗದಗ – 2004.

11. ಏಕಲವ್ಯನ ಪಾತ್ರ ಒಂದು ಅಧ್ಯಯನ – ಡಾ. ಅಶೋಕ ನರೋಡೆ –
ಸಿದ್ಧೇಶ್ವರ ಪ್ರಕಾಶನ ಹಂದಿಗುಂದ – 2001.

12. ಸಂಸ್ಕೃತಿ ಮತ್ತು ಸೃಜನಶೀಲತೆ – ಬರಗೂರು ರಾಮಚಂದ್ರಪ್ಪ –
ಸುನಾದ ಪ್ರಕಾಶನ ಬೆಂಗಳೂರು

13. ಜಾಣಪದ ಕೈಪಿಡಿ – ಡಾ. ಎಚ್. ಜಿ. ಲಕ್ಕಪ್ಪಗೌಡ –
ಕನ್ನಡ ಪುಸ್ತಕ ಪ್ರಾದಿಕಾರ ಬೆಂಗಳೂರು – 1997

14. ವಚನ ಚಳುವಳಿ ಕೆಲವು ಅಧ್ಯಯನಗಳು – ಡಾ. ಅಶೋಕ ನರೋಡೆ

15. ಶರಣಚೇತನ – ಜಯಶ್ರೀ ಪಾಟೀಲ – (ಪತ್ರಿಕೆ ಸಪ್ಟೆಂಬರ್–2008)
ಕಾಯಕ ಆಪ್‌ಸೆಟ್ ವರ್ಕ್ಸ್ ಮಹಾಲಿಂಗಪುರ

16. ಕನ್ನಡ ಕನ್ನಡ ಇಂಗ್ಲೀಷ್ ನಿಘಂಟು – ಜಿ. ವೆಂಕಟಸುಬ್ಬಯ್ಯ, ಎಲ್. ಎಸ್. ಶೇಷಗಿರಿರಾವ್, ಎಚ್. ಕೆ. ರಾಮಚಂದ್ರ ಮೂರ್ತಿ – ಶ್ರೀರಾಮ ಆಪ್‌ಸೆಟ್ ಪ್ರಿಂಟರ್ಸ್, ಬೆಂಗಳೂರು – 2002.

17. ಕನ್ನಡ ರತ್ನಕೋಶ – ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು – 1994

18. ಕನ್ನಡ ಸಾಹಿತ್ಯ ಚರಿತ್ರೆ – ರಂ. ಶ್ರೀ. ಮುಗಳಿ –
ಉಷಾ ಸಾಹಿತ್ಯ ಮಾಲೆ ಮೈಸೂರು – 1971

19. ಜಾನಪದ ಸಾಹಿತ್ಯ ದರ್ಶನ – ಎಂ. ಎಸ್. ಸುಂಕಾಪೂರ –
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 1980

20. ಮಾರ್ಗ, 4 – ಎಂ. ಎಂ. ಕಲಬುರ್ಗಿ –
ಸ್ವಪ್ನ ಬಕ್‌ಹೌಸ್ ಬೆಂಗಳೂರು – 2004.

21. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ – 1969

22. ಸಂಶೋಧನಾ ವ್ಯಾಸಂಗ – ಡಾ. ಬಿ. ವ್ಹಿ. ಶಿರೂರ –
ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ – 1990

23. ಕನ್ನಡ ಭಾಷಾ ಸಂಪದ – ಡಾ. ಸಂಗಮೇಶ ಸವದತ್ತಿಮಠ –
ಚೇತನ ಬುಕ್‌ಹೌಸ್, ಮೈಸೂರು – 1998

24. ಭಾರತೀಯ ಕಾವ್ಯ ಮಿಮಾಂಸೆ – ಜಿ.ವಿ.ಡಿ. –
ಚೇತನ ಬುಕ್ ಹೌಸ್, ಮೈಸೂರು – 1992

25. ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ – ಡಾ. ಸಿ. ಬಿ. ಹೊನ್ನಯ್ಯ –
ಐಸಿರಿ ಪ್ರಕಾಶನ ಬೆಂಗಳೂರು – 2008

26. ಸೌಂದರ್ಯ ಸಮೀಕ್ಷೆ – ಡಾ. ಜಿ.ಎಸ್. ಶಿವರುದ್ರಪ್ಪ –
ಕಾಮಧೇನು ಪುಸ್ತಕ ಭವನ, ಬೆಂಗಳೂರು – 2007

27. ಮಾರ್ಗ–2 – ಎಂ. ಎಂ. ಕಲಬುರ್ಗಿ –
ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು – 1988

28. ಮಾರ್ಗ–3 – ಎಂ. ಎಂ. ಕಲಬುರ್ಗಿ –
ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು – 1998

29. ಕರ್ನಾಟಕ ಸಾಹಿತ್ಯ ಸಮೀಕ್ಷೆ – ಸಂ. ಜಿ.ಎಸ್. ಶಿವರುದ್ರಪ್ಪ –
ಪ್ರಸಾರಂಗ ಬೆಂಗಳೂರು ವಿ.ವಿ. 2000

30. ಕನ್ನಡ ಸಂಸ್ಕೃತಿ ಮೀಮಾಂಸೆ – ಸಂ. ಸಿ. ಬಿ. ಹೊನ್ನಯ್ಯ –
ಜೈಭೀಮ ಪ್ರಕಾಶನ ಮೈಸೂರು – 2005

31. ಕನ್ನಡ ಸಾಹಿತ್ಯ ಕೋಶ – ರಾಜಪ್ಪ ದಳವಾಯಿ
ರಾಘವೇಂದ್ರ ಪ್ರಕಾಶನ ಬೆಂಗಳೂರು – 2006

32. ಕನ್ನಡ ಸಾಹಿತ್ಯ ಚರಿತ್ರೆ – ತ. ಸು. ಶ್ಯಾಮರಾಯ
ತ. ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು – 2001

33. ಜಾನಪದ ವ್ಯಾಸಂಗ – ಅರವಿಂದ ಮಾಲಗತ್ತಿ
ಶ್ರೀಶೈಲ ಪ್ರಕಾಶನ ಮುದ್ದೇಬಿಹಾಳ – 1985

34. ಜಾನಪದ ದರ್ಶನ – ಗೋರೂರು ಚನ್ನಬಸಪ್ಪ
ಕನ್ನಡ ಸಾಹಿತ್ಯಜ ಪರಿಷತ್, ಬೆಂಗಳೂರು – 1991

35. ಸಂಸ್ಕೃತಿಕ ಸಂಶೋಧನೆ – ತಾಳ್ತಜೆ ವಸಂತಕುಮಾರ –
ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ – 1998.

ಪತ್ರಿಕೆಗಳು :

ಬಸವಪಥ : ಬೆಂಗಳೂರು

ಸ್ವಪ್ನಲೋಕ : ಬೆಂಗಳೂರು

ಲಿಂಗಾಯತ : ಬೆಳಗಾವಿ

ಸುಕುಮಾರ : ಶಿವಯೋಗಮಂದಿರ

ಶರಣಚೇತನ : ಮಹಾಲಿಂಗಪುರ